


ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 7 ಸೋಮವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 81 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಉತ್ತಮ ಆಡಳಿತಕ್ಕಿಂತ ಧರ್ಮ ರಾಜಕಾರಣಕ್ಕೆ ಜನ ಮನ್ನಣೆ

ಕೇಂದ್ರದ ಮಾಜಿ ಸಚಿವ ಮಣಿಶಂಕರ್ ಅಯ್ಯರ್ ಕಳವಳ

- ಈಗಿನ ಜನರಿಗೆ ರಸ್ತೆ, ನೀರು, ವಿದ್ಯುತ್ ಬೇಕಿಲ್ಲ
- ಜಾತಿ, ಧರ್ಮದ ರಾಜಕಾರಣ ಮಾಡುವವರನ್ನು ಜನ ಅಪ್ಪಿ, ಒಪ್ಪುತ್ತಾರೆ
- ಎಲ್ಲಾ ಹಿಂದೂಗಳು ಬಿಜೆಪಿಗೆ ಮತ ಹಾಕಿಲ್ಲ
- ಸೋಲು, ಸವಾಲು ಎದುರಿಸಲು ಸಿದ್ಧವಾದರೆ ರಾಜಕಾರಣಕ್ಕೆ ಬನ್ನಿ
- ವಿವಿಧತೆಯಲ್ಲಿ ಏಕತೆ ಇರುವ ಭಾರತದಂತಹ ದೇಶ ವಿಶ್ವದಲ್ಲೇ ಇಲ್ಲ
- ಬಿಜೆಪಿ ಅಧಿಕಾರಕ್ಕೆ ಬರಲು ಪಿ.ವಿ.ನರಸಿಂಹರಾವ್ ಕಾರಣ



ಮೈಸೂರು ಸಾಹಿತ್ಯ ಸಂಭ್ರಮದ 9ನೇ ಆವೃತ್ತಿ ಕಾರ್ಯಕ್ರಮದಲ್ಲಿ ಕೇಂದ್ರದ ಮಾಜಿ ಸಚಿವ ಮಣಿಶಂಕರ್ ಅಯ್ಯರ್ ಮಾತನಾಡಿದರು. ಲೇಖಕ ಅರುಣ್ ರಾಮನ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಜು.6(ಬಿಎಲ್‌ಯು)– ರಸ್ತೆ, ಕುಡಿಯುವ ನೀರು, ವಿದ್ಯುತ್ ಸೇರಿದಂತೆ ಮೂಲ ಸೌಕರ್ಯಗಳನ್ನು ಕಲ್ಪಿಸುವ ಜನಪರ ಆಡಳಿತ ನೀಡುವ ರಾಜಕಾರಣಿಗಳನ್ನು ಈಗಿನ ಜನರು ಗೆಲ್ಲಿಸುವುದಿಲ್ಲ. ಜಾತಿ, ಧರ್ಮದ ಆಧಾರದ ಮೇಲೆ ಕೋಮುವಾದದ ರಾಜಕಾರಣ ಮಾಡುವ ರಾಜಕಾರಣಿಗಳನ್ನು ಗೆಲ್ಲಿಸುತ್ತಾರೆ ಎಂದು ಕೇಂದ್ರದ ಮಾಜಿ ಸಚಿವ ಮಣಿಶಂಕರ್ ಅಯ್ಯರ್ ಅಸಮಾಧಾನ ವ್ಯಕ್ತಪಡಿಸಿದರು.

ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ನಡೆದ ಮೈಸೂರು ಸಾಹಿತ್ಯ ಸಂಭ್ರಮದ 9ನೇ ಆವೃತ್ತಿಯ ಕಾರ್ಯಕ್ರಮದಲ್ಲಿ 'ದಶಕಗಳ ರಾಜತಾಂತ್ರಿಕತೆ, ಪ್ರಜಾಪ್ರಭುತ್ವ ಮತ್ತು ರಾಜಕೀಯ ಬೆಳವಣಿಗೆಗಳು' ವಿಚಾರದ ಬಗ್ಗೆ ಲೇಖಕ ಅರುಣ್ ರಾಮನ್ ಅವರು ಕೇಳಿದ ಹಲವು ಪ್ರಶ್ನೆಗಳಿಗೆ ಮಣಿಶಂಕರ್ ಅಯ್ಯರ್ ಉತ್ತರಿಸಿದರು.

ಇತ್ತೀಚಿನ ಚುನಾವಣೆಯಲ್ಲಿ ನಿಮಗೆ ಸೋಲುಂಟಾಗಲು ಕಾರಣವೇನು? ಎಂಬ ಪ್ರಶ್ನೆಗೆ ನೇರ ಉತ್ತರ ನೀಡಿದ ಅವರು, ತಮಿಳುನಾಡಿನ ಮೈಲಾಡತುರೈ ಲೋಕಸಭಾ ಕ್ಷೇತ್ರದಲ್ಲಿ ನಾನು ಬಹಳಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದೇನೆ. ರಸ್ತೆ, ಕುಡಿಯುವ ನೀರು, ಉದ್ಯೋಗಾವಕಾಶ ಸೇರಿದಂತೆ ಮೂಲ ಸೌಕರ್ಯ ಕಲ್ಪಿಸುವ ಜನಪರ ಆಡಳಿತ ನೀಡುವ ರಾಜಕಾರಣಿಗಳು ಈಗಿನ ಜನರಿಗೆ ಅವಶ್ಯವಿಲ್ಲ. ಜಾತಿ, ಧರ್ಮ, ಕೋಮುವಾದದ ಹಿನ್ನೆಲೆಯಲ್ಲಿ ಪಕ್ಷದ ಸಿದ್ಧಾಂತ ಸಾರುವವರಿಗೆ ▶ 6ನೇ ಪುಟಕ್ಕೆ

> "ಇಂದಿರಾ ಗಾಂಧಿ ಅವರು ಪ್ರಧಾನಮಂತ್ರಿ ಆಗಿದ್ದಾಗ ತ್ರಿಭಾಷಾ ಸೂತ್ರದ ಪರಿಕಲ್ಪನೆ ರೂಪಿಸಿದ್ದರು. ಇಂದು ದೇಶದಲ್ಲಿ ತ್ರಿಭಾಷಾ ಮತ್ತು ದ್ವಿಭಾಷಾ ಸೂತ್ರದ ಬಗ್ಗೆ ಚರ್ಚೆ, ವಿವಾದಗಳು ನಡೆಯುತ್ತಿವೆ. ಆದರೆ ಇಂದಿರಾಗಾಂಧಿ ಅವರೇ ಮೊದಲು ತ್ರಿಭಾಷಾ ಸೂತ್ರವನ್ನು ರೂಪಿಸಿದ್ದರು. ಭಾರತದಲ್ಲಿ ವಿವಿಧತೆಯಲ್ಲಿ ಏಕತೆ ಇದೆ. ಆದರೆ ಭಾಷೆಯ ವಿಚಾರ ಮುನ್ನೆಲೆಗೆ ಬಂದಾಗ ಮೊದಲು ನಮ್ಮ ಮಾತೃಭಾಷೆ, ತರುವಾಯ ನಮ್ಮ ಅನುಕೂಲಕ್ಕೆ ಬರುವ ಮತ್ತೊಂದು ಭಾಷೆಯನ್ನು ಅನುಸರಿಸಬೇಕಾಗುತ್ತದೆ.
>
> –ಮಣಿಶಂಕರ್ ಅಯ್ಯರ್, ಕೇಂದ್ರದ ಮಾಜಿ ಸಚಿವ



ಅತೀ ವೇಗದ ಅಜಾಗರೂಕ ಚಾಲನೆಗೆ ಇಬ್ಬರ ಸಾವು

- ದುಬಾರಿ ಬೈಕ್‌ನಲ್ಲಿ ಅತೀ ವೇಗವಾಗಿ ಬಂದು ಫುಡ್ ಡೆಲಿವರಿ ಸ್ಕೂಟರ್‌ಗೆ ಡಿಕ್ಕಿ ಹೊಡೆದ ಯುವಕ
- ಇಬ್ಬರು ಸವಾರರೂ ಸಾವು, ಅಪಘಾತದ ರಭಸಕ್ಕೆ ಹೊತ್ತಿ ಉರಿದ ಬೈಕ್
- ಮೈಸೂರಿನ ನೆಲ್ಸನ್ ಮಂಡೇಲ ರಸ್ತೆಯಲ್ಲಿ ಮುಂಜಾನೆ ದುರಂತ
- ರೇಸಿಂಗ್, ರೀಲ್ಸ್, ವ್ಹೀಲಿಂಗ್‌ಗೆ ಕಡಿವಾಣ ಹಾಕಲು ಸಾರ್ವಜನಿಕರ ಆಗ್ರಹ


ಕಾರ್ತಿಕ್

ಮೈಸೂರು,ಜು.6(ಎಂಟಿವೈ)– ಮಿತಿ ಮೀರಿದ ವೇಗದಲ್ಲಿ ಬಂದ ದುಬಾರಿ ಬೆಲೆಯ ಹಯಾಬೂಸ ಬೈಕ್ ಸವಾರನೊಬ್ಬ ಅಮಾಯಕ ಫುಡ್ ಡೆಲಿವರಿ ಮಾಡುತ್ತಿದ್ದ ವ್ಯಕ್ತಿಯೊಬ್ಬನನ್ನು ಬಲಿ ಪಡೆದು, ತಾನೂ ಪ್ರಾಣ ತೆತ್ತಿರುವ ಘಟನೆ ಭಾನುವಾರ ಮುಂಜಾನೆ ಮೈಸೂರಿನ ಬನ್ನಿಮಂಟಪದ ನೆಲ್ಸನ್ ಮಂಡೇಲ ರಸ್ತೆಯಲ್ಲಿ ಸಂಭವಿಸಿದೆ. ಚಾಮರಾಜನಗರದ ಬಸ್ ನಿಲ್ದಾಣದ ಹಿಂಭಾಗದ ಕೆ.ಪಿ.ಮೊಹಲ್ಲಾದ ನಿವಾಸಿ ಸೈಯ್ಯದ್ ಶರೆನ್ (30) ಹಯಾಬೂಸ ಬೈಕ್ ▶ 6ನೇ ಪುಟಕ್ಕೆ


ಅಪಘಾತದಿಂದ ಹೊತ್ತಿ ಉರಿಯುತ್ತಿರುವ ಹಯಾಬೂಸ ಬೈಕ್

ರೇಸ್ ಅಂಡ್ ರೀಲ್ಸ್‌ಗೆ ಪ್ರಾಣ ಬಿಡಬೇಡಿ

> "ಕೆಲವು ಯುವಕರ ಗುಂಪು ರಸ್ತೆಗಳಲ್ಲಿ ಬೈಕ್ ರೇಸ್ ನಡೆಸುವ ಮೂಲಕ ಅಮಾಯಕರ ಬಾಳಿನಲ್ಲಿ ಕತ್ತಲೆ ಆವರಿಸುವಂತೆ ಮಾಡುತ್ತಿದ್ದಾರೆ. ರಿಂಗ್ ರಸ್ತೆ, ಜೋಡಿ ತೆಂಗಿನ ಮರದ ರಸ್ತೆ, ನೆಲ್ಸನ್ ಮಂಡೇಲ ರಸ್ತೆಯಲ್ಲಿ ರಾತ್ರಿ ವೇಳೆ ರೇಸ್ ಮತ್ತು ರೀಲ್ಸ್‌ಗಾಗಿ ಕೆಲವರು ಮಿತಿ ಮೀರಿದ ವೇಗದಲ್ಲಿ ಬೈಕ್ ಚಾಲನೆ ಮಾಡುತ್ತಾರೆ. ಮತ್ತೆ ಕೆಲವರು ವ್ಹೀಲಿಂಗ್ ಮಾಡುತ್ತಾರೆ. ಅದಕ್ಕೆ ಕಡಿವಾಣ ಹಾಕಬೇಕು. ಪೋಷಕರು ತಮ್ಮ ಮಕ್ಕಳ ಮೇಲೆ ನಿಗಾ ಇಡಬೇಕು ಎಂದು ಸಾರ್ವಜನಿಕರು ತಿಳಿಸಿದ್ದಾರೆ.



ಮೈಸೂರು ಮಿತ್ರ ಸೋಮವಾರ 7 ಜುಲೈ 2025

ಗಾನ ವೈದ್ಯಲೋಕ ತಂಡದಿಂದ ವೈದ್ಯರ ದಿನಾಚರಣೆ, ಸಂಗೀತ ಸಂಜೆ

ಸಾಂಕ್ರಾಮಿಕ ರೋಗಗಳು ಕಡಿಮೆ, ಅಸಾಂಕ್ರಾಮಿಕ ರೋಗಗಳು ಹೆಚ್ಚಳ

ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಕಳವಳ



ಗಾನ ವೈದ್ಯಲೋಕವು ವೈದ್ಯರ ದಿನಾಚರಣೆ ಅಂಗವಾಗಿ ಮೈಸೂರಿನ ರಮಾಗೋವಿಂದ ರಂಗಮಂದಿರದಲ್ಲಿ ಏರ್ಪಡಿಸಿದ್ದ ಎಂದೂ ಮರೆಯದ ಹಾಡು–ವಿಶೇಷ ಸಂಗೀತ ಸಂಜೆಯನ್ನು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಉದ್ಘಾಟಿಸಿದರು.

ಮೈಸೂರು, ಜು.6– ಈಗ ಕಾಲರಾ, ಮಲೇರಿಯಾ, ಕ್ಷಯ, ಕುಷ್ಠರೋಗದಂತಹ ಸಾಂಕ್ರಾಮಿಕ ರೋಗಗಳು ಕಡಿಮೆಯಾಗಿವೆ. ಆದರೆ ಮಧುಮೇಹ, ರಕ್ತದೊತ್ತಡದಂತಹ ಅಸಾಂಕ್ರಾಮಿಕ ರೋಗಗಳು ಹೆಚ್ಚಾಗುತ್ತಿವೆ ಎಂದು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಕಳವಳ ವ್ಯಕ್ತಪಡಿಸಿದರು.

ಗಾನ ವೈದ್ಯಲೋಕವು ವೈದ್ಯರ ದಿನಾಚರಣೆ ಅಂಗವಾಗಿ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಏರ್ಪಡಿಸಿದ್ದ ಎಂದೂ ಮರೆಯದ ಹಾಡು– ವಿಶೇಷ ಸಂಗೀತ ಸಂಜೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಎಪ್ಪತ್ತರ ದಶಕಗಿಂತ ಮುಂಚೆ ಸಾಂಕ್ರಾಮಿಕ ರೋಗಗಳು ಮನುಷ್ಯರನ್ನು ಕಾಡುತ್ತಿದ್ದವು. 45 ವರ್ಷಕ್ಕೆ ಕಣ್ಣು ಕಾಣಿಸುತ್ತಿರಲಿಲ್ಲ. 60 ವರ್ಷ ಬದುಕಿದರೆ ಹೆಚ್ಚು ಎಂಬ ಪರಿಸ್ಥಿತಿ ಇತ್ತು. ವೈದ್ಯಕೀಯ ಲೋಕದಲ್ಲಿ ಆದ ಸಂಶೋಧನೆಗಳಿಂದ ಅವೆಲ್ಲಾ ನಿಯಂತ್ರಣಕ್ಕೆ ಬಂದಿವೆ. ಮರಣಪ್ರಮಾಣವೂ ಕಡಿಮೆಯಾಗಿದೆ. ಈಗ ಸಾಮಾನ್ಯ ಬದುಕಿನ ಮಟ್ಟ 80–85 ವರ್ಷ. ಆದರೆ ಆಹಾರ ಪದ್ಧತಿ, ಒತ್ತಡದ ಜೀವನದಿಂದ ಬಿಪಿ, ಶುಗರ್ ಹೆಚ್ಚಾಗುತ್ತಿದೆ ಎಂದರು.

ಪಶ್ಚಿಮ ಬಂಗಾಳದಲ್ಲಿ ಎರಡು ಬಾರಿ ಮುಖ್ಯಮಂತ್ರಿಯಾಗಿದ್ದ ಡಾ.ಬಿಪಿನ್ ಚಂದ್ರ ರಾಯ್ ಜನ್ಮದಿನವನ್ನು ವೈದ್ಯರ ದಿನವಾಗಿ 1991ರಿಂದ ಆಚರಿಸಲಾಗುತ್ತಿದೆ. ರಾಯ್ ಮುಖ್ಯಮಂತ್ರಿಗಳಾಗಿದ್ದರೂ ವೈದ್ಯಕೀಯ ಸೇವೆ ಬಿಟ್ಟಿರಲಿಲ್ಲ ಎಂದು ಅವರು ಸ್ಮರಿಸಿದರು.

ಇತ್ತೀಚಿನ ದಿನಗಳಲ್ಲಿ ಆರೋಗ್ಯವಾಗಿದ್ದರೆ ವೈದ್ಯರು ನೆನಪಿಗೆ ಬರುವುದಿಲ್ಲ. ಅನಾರೋಗ್ಯ ಕಾಡಿದಾಗ ಮಾತ್ರ ನೆನಪಾಗುತ್ತಾರೆ. ಇಂತಹ ಪರಿಸ್ಥಿತಿಯಲ್ಲೂ ಅಲ್ಲಲ್ಲಿ ವೈದ್ಯರ ದಿನಾಚರಣೆ ಆಚರಿಸಿ, ವೈದ್ಯರನ್ನು ಗೌರವಿಸುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ವಿಶೇಷ ಆಹ್ವಾನಿತರಾಗಿದ್ದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಜು.1ರಂದು ವೈದ್ಯರ ದಿನಾಚರಣೆಯೂ ಹೌದು, ಪತ್ರಕರ್ತರ ದಿನಾಚರಣೆಯೂ ಹೌದು. ಒಬ್ಬರು ದೇಹದ ಸ್ವಾಸ್ಥ್ಯ ಕಾಪಾಡಿದರೆ ಮತ್ತೊಬ್ಬರು ಸಮಾಜದ ಸ್ವಾಸ್ಥ್ಯ ಕಾಪಾಡುವ ಜವಾಬ್ದಾರಿ ನಿರ್ವಹಿಸುತ್ತಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಗಾನ ವೈದ್ಯಲೋಕದ ಗೌರವಾಧ್ಯಕ್ಷ ಡಾ.ವೈ.ಡಿ. ರಾಜಣ್ಣ ಮಾತನಾಡಿ, ಎರಡೂವರೆ ವರ್ಷಗಳ ಹಿಂದೆ ವೈದ್ಯರು ಕಟ್ಟಿಕೊಂಡ ಈ ತಂಡ ಈವರೆಗೆ 11 ಸರಣಿ ಕಾರ್ಯಕ್ರಮಗಳನ್ನು ಸಂಘಟಿಸಿದೆ. ಸಭಿಕರ ಬೆಂಬಲದಿಂದ ಇದು ಸಾಕಾರವಾಗಿದೆ ಎಂದರು.

ಗಾನ ವೈದ್ಯಲೋಕದ ಅಧ್ಯಕ್ಷ ಡಾ.ಟಿ. ರವಿಕುಮಾರ್ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಡಾ.ಎ.ಎಸ್. ಪೂರ್ಣಿಮಾ ಪ್ರಾರ್ಥಿಸಿದರು. ಡಾ.ಟಿ. ರವಿಕುಮಾರ್, ಡಾ.ಎ.ಎಸ್. ಪೂರ್ಣಿಮಾ, ಡಾ.ಸುರೇಂದ್ರನ್, ಡಾ.ಶ್ಯಾಮಪ್ರಸಾದ್, ಡಾ.ಶಿವಕುಮಾರ್, ಡಾ.ಮನು, ಡಾ.ಚಿನ್ನನಾಗಪ್ಪ, ಡಾ.ಸುಮಾ, ಶ್ರೀಲತಾ ಮನೋಹರ್ ಹಾಗೂ ಸಿ.ಎಸ್. ವಾಣಿ ಕನ್ನಡ ಗೀತೆಗಳನ್ನು ಹಾಡಿ, ಸಭಿಕರ ಮೆಚ್ಚುಗೆಗೆ ಪಾತ್ರರಾದರು. ಉಪನ್ಯಾಸಕ ಎಡೆಯೂರು ಸಮೀಉಲ್ಲಾ ನಿರೂಪಿಸಿದರು.

ಸಿಎಂ ಸ್ಥಾನದಿಂದ ಕೆಳಗಿಳಿಸಲು ಸಿದ್ದರಾಮಯ್ಯಗೆ ರಾಷ್ಟ್ರೀಯ ಒಬಿಸಿ ಸಮಿತಿ ಅಧ್ಯಕ್ಷ ಸ್ಥಾನ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿಶ್ಲೇಷಣೆ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು,ಜು.6(ಎಂಟಿವೈ)–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕಾಂಗ್ರೆಸ್ ಒಬಿಸಿ ಸಮಿತಿಗೆ ರಾಷ್ಟ್ರೀಯ ಅಧ್ಯಕ್ಷರಾಗಿ ನೇಮಕ ಮಾಡಿದ್ದು, ಮುಖ್ಯಮಂತ್ರಿ ಸ್ಥಾನದಿಂದ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸುವುದಕ್ಕಾಗಿಯೇ ಶಾಸಕರ ಅಭಿಪ್ರಾಯ ಸಂಗ್ರಹಿಸಿ ಮನವೊಲಿಸಲು ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ರಾಜ್ಯಕ್ಕೆ ಬಂದಿದ್ದರು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ವಿಶ್ಲೇಶಿಸಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಸಿಎಂ ಸ್ಥಾನ ಪಲ್ಲಟ ಆಗುವುದು ನಿಶ್ಚಿತ. ಅದಕ್ಕಾಗಿ ಕಾಂಗ್ರೆಸ್ ವರಿಷ್ಠರು ವೇದಿಕೆ ಸೃಷ್ಟಿಸಿದ್ದಾರೆ. ಈಗಾಗಲೆ ಸಿಎಂ ಸಿದ್ದರಾಮಯ್ಯ ಅವರನ್ನು ಕಾಂಗ್ರೆಸ್ ಓಬಿಸಿ ಸಮಿತಿಗೆ ರಾಷ್ಟ್ರೀಯ ಅಧ್ಯಕ್ಷರಾಗಿ ನೇಮಿಸಲಾಗಿದೆ. ಆ ಮೂಲಕ ಸಿದ್ದರಾಮಯ್ಯ ಅವರನ್ನು ದೆಹಲಿಗೆ ಕರೆದೊಯ್ಯಲಿದ್ದಾರೆ. ಆ ಕಾರಣದಿಂದ ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾಗುತ್ತಾರೆ ಎಂದು ವಿಜಯೇಂದ್ರ ಭವಿಷ್ಯ ನುಡಿದರು.

ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ತಿರುಕನ ಕನಸು. ಸಿದ್ದರಾಮಯ್ಯ ಬಳಿಕ ಸಿಎಂ ಆಗಬೇಕು ಎಂದು ಬಯಸುತ್ತಿರುವ ಕೆಲವು ಕಾಂಗ್ರೆಸ್ ಮುಖಂಡರು ಆರ್‌ಎಸ್‌ಎಸ್ ಸಂಘಟನೆ ವಿರುದ್ಧ ಹೇಳಿಕೆ ನೀಡುತ್ತಿದ್ದಾರೆ. ಇದು ಕಾಂಗ್ರೆಸ್ ನಾಯಕರ ಮೂರ್ಖತನದ ಹೇಳಿಕೆಯಾಗಿದೆ. ಮುಂದಿನ ದಿನಗಳಲ್ಲಿ ರಾಜ್ಯದಲ್ಲೂ ಕಾಂಗ್ರೆಸ್ ಅಧಿಕಾರ ಕಳೆದುಕೊಳ್ಳುತ್ತದೆ. ರಾಜ್ಯ ಸರ್ಕಾರ ಇದ್ದೂ ಸತ್ತಂತಿದೆ. ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದು ಜನರು ಪಶ್ಚಾತ್ತಾಪ ಪಡುತ್ತಿದ್ದಾರೆ. ಆಡಳಿತ ಪಕ್ಷದ ಶಾಸಕರೂ ಇದಕ್ಕೆ ಹೊರತಾಗಿಲ್ಲ. ಇದಕ್ಕೆ ನಿದರ್ಶನವಾಗಿ ಬಿ.ಆರ್. ಪಾಟೀಲ್ ಮತ್ತು ರಾಯರೆಡ್ಡಿ ಅವರ ಹೇಳಿಕೆಯನ್ನು ಗಮನಿಸಬಹುದು ಎಂದರು.

ಮೇಕೆದಾಟು ಯೋಜನೆ ಜಾರಿ ಕುರಿತಂತೆ ಮಾತನಾಡಿ, ಮೇಕೆದಾಟು ಯೋಜನೆ ಜಾರಿಗೊಳಿಸಲು ರಾಜ್ಯ ಸರ್ಕಾರ ತಮಿಳುನಾಡಿನ ದೋಸ್ತಿ ಡಿಎಂಕೆ ಸರ್ಕಾರವನ್ನು ಒಪ್ಪಿಸಿದರೆ, ನಮ್ಮ ನಾಯಕರು ಕೇಂದ್ರದಿಂದ ಒಪ್ಪಿಗೆ ಕೊಡಿಸುತ್ತಾರೆ. ಇದನ್ನೇ ನಮ್ಮ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಅವರು ಹೇಳಿದ್ದಾರೆ. ರಾಜ್ಯ ಸರ್ಕಾರಕ್ಕೆ ಮೇಕೆದಾಟು ಯೋಜನೆಯನ್ನು ಪ್ರಾಮಾಣಿಕವಾಗಿ ಮಾಡುವ ಇರಾದೆಯೂ ಇಲ್ಲ, ಬದ್ಧತೆಯೂ ಇಲ್ಲ. ಬದಲಾಗಿ ಯೋಜನೆ ಹೆಸರಿನಲ್ಲಿ ರಾಜಕೀಯ ಮಾಡುತ್ತಿದೆ. ತಮಿಳುನಾಡು ಸರ್ಕಾರವನ್ನು ಮನವೊಲಿಸಿ ಅನುಮತಿ ಕೊಡಿಸಿದರೆ, ಕೇಂದ್ರ ಸರ್ಕಾರವೂ ಯೋಜನೆಗೆ ಒಪ್ಪಿಗೆ ನೀಡಲಿದೆ ಎಂದು ತಿಳಿಸಿದರು.

ರಸ್ತೆ ಅಭಿವೃದ್ಧಿ ಬೇಕು ಎಂದರೆ ಗ್ಯಾರಂಟಿ ಯೋಜನೆ ಮತ್ತು ಅಕ್ಕಿ ಕೇಳಬೇಡಿ ಎಂದು ಶಾಸಕ ಬಸವರಾಜ ರಾಯರೆಡ್ಡಿ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿ, ರಾಯರೆಡ್ಡಿ ಹೇಳಿಕೆ ರಾಜ್ಯ ಸರ್ಕಾರದ ಆರ್ಥಿಕ ಸ್ಥಿತಿಗೆ ಕೈಗನ್ನಡಿ ಹಿಡಿದಂತಿದೆ. ಅವರು ರಾಜ್ಯದ ಹಣಕಾಸು ಸ್ಥಿತಿಯ ವಾಸ್ತವವನ್ನು ತಿಳಿಸಿದ್ದಾರೆ. ಸರ್ಕಾರ ತನ್ನ ನೌಕರರಿಗೆ ಸರಿಯಾಗಿ ಸಂಬಳ ನೀಡುವುದಕ್ಕೂ ಪರದಾಡುತ್ತಿದೆ. ರಾಯರೆಡ್ಡಿ ಹೇಳಿಕೆ ದುರಂಹಕಾರದಿಂದ ಕೂಡಿದ್ದು, ಗ್ಯಾರಂಟಿ ಹೆಸರಿನಲ್ಲಿ ಅಧಿಕಾರಕ್ಕೆ ಬಂದು ಈಗ ಗ್ಯಾರಂಟಿ ಬೇಕೋ, ರಸ್ತೆ ಬೇಕೋ ಎಂದು ಕೇಳುತ್ತಿದ್ದಾರೆ. ಇದರಲ್ಲಿ ಅರ್ಥ ಇದೆಯಾ, ಸಿಎಂ ಸಿದ್ದರಾಮಯ್ಯ ಅವರೇ ರಾಯರೆಡ್ಡಿ ಮೂಲಕ ಇಂತಹ ಮಾತುಗಳನ್ನು ಹೇಳಿಸಿದ್ದಾರೆ ಎಂದು ಬಿ.ವೈ.ವಿಜಯೇಂದ್ರ ಕಿಡಿಕಾರಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ನಗರ ಅಧ್ಯಕ್ಷ ಎಲ್.ನಾಗೇಂದ್ರ, ಗ್ರಾಮಾಂತರ ಅಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ, ಶಾಸಕ ಟಿ.ಎಸ್. ಶ್ರೀವತ್ಸ, ರಾಜ್ಯ ಉಪಾಧ್ಯಕ್ಷರಾದ ರಾಜೇಂದ್ರ, ಎನ್.ಮಹೇಶ್, ರಾಜ್ಯ ಕಾರ್ಯದರ್ಶಿ ಶರಣು ತಳ್ಳಿಕೇರಿ, ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ, ಮಾಜಿ ಸಂಸದ ಪ್ರತಾಪ್ ಸಿಂಹ, ಮಾಜಿ ಶಾಸಕರಾದ ನಿರಂಜನ್‌ಕುಮಾರ್, ಹರ್ಷವರ್ಧನ್, ಅಲ್ಪಸಂಖ್ಯಾತ ಮೋರ್ಚಾದ ರಾಜ್ಯಾಧ್ಯಕ್ಷ ಅನಿಲ್ ಥಾಮಸ್ ಇದ್ದರು.

ಶಾಸಕ ಸಿ.ಪುಟ್ಟರಂಗಶೆಟ್ಟಿಗೆ ಸಚಿವ ಸ್ಥಾನ ನೀಡಲು ಆಗ್ರಹ



ಪುಟ್ಟರಂಗಶೆಟ್ಟಿ

ಮೈಸೂರು, ಜು.6(ಜಿಎ)–ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಮೈಸೂರು ಜಿಲ್ಲಾ ಭಗೀರಥ ಉಪ್ಪಾರ ಸಂಘ ಆಗ್ರಹಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಜಿಲ್ಲಾಧ್ಯಕ್ಷ ಎಸ್.ಯೋಗೀಶ್ ಉಪ್ಪಾರ ಮಾತನಾಡಿ, ಚಾಮರಾಜನಗರ ವಿಧಾನಸಭಾ ಕ್ಷೇತ್ರದಿಂದ 4 ಬಾರಿ ಆಯ್ಕೆಯಾಗಿ ಕ್ಷೇತ್ರದಲ್ಲಿ ಉತ್ತಮ ಕೆಲಸ ಮಾಡುತ್ತಿರುವ ಪುಟ್ಟರಂಗಶೆಟ್ಟಿ ಅವರು 2018ರಲ್ಲಿ ಕಾಂಗ್ರೆಸ್–ಜೆಡಿಎಸ್ ಸಮ್ಮಿಶ್ರ ಸರಕಾರದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾಗಿ 6 ತಿಂಗಳು ಕೆಲಸ ಮಾಡಿದ್ದರು. ಆದರೆ, ಈವರೆಗೆ ಅವರಿಗೆ ಸಚಿವ ಸ್ಥಾನ ಸಿಕ್ಕಿಲ್ಲ ಎಂದು ತಿಳಿಸಿದರು.

2023ರಲ್ಲಿ ಸ್ಪಷ್ಟ ಬಹುಮತದೊಂದಿಗೆ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ಸಿಗಬಹುದು ಎಂಬ ನಿರೀಕ್ಷೆ ಇತ್ತು. ಆದರೆ, ಕಾರಣಾಂತರಗಳಿಂದ ಕೈ ತಪ್ಪಿ ಹೋಯಿತು. ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ, ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ.ಶಿವಕುಮಾರ್ ಅವರು ಪಕ್ಷದಲ್ಲಿ ಪ್ರಾಮಾಣಿಕ ಹಾಗೂ ಬದ್ಧತೆಯಿಂದ ಕೆಲಸ ಮಾಡಿರುವ ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ನೀಡಬೇಕು. ಮತ್ತೊಂದೆಡೆ ರಾಜ್ಯದಲ್ಲಿ ಉಪ್ಪಾರರ ಜನಸಂಖ್ಯೆ 25 ಲಕ್ಷ ಇದ್ದು, ರಾಜಕೀಯ ಕ್ಷೇತ್ರದಲ್ಲಿ ಶಾಸಕರಾಗಿ ಇರುವವರು ಇವರೊಬ್ಬರೇ, ಈ ಹಿನ್ನೆಲೆಯಲ್ಲಿ ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ಕೊಡಬೇಕು ಎಂದು ಯೋಗೇಶ್ ಒತ್ತಾಯಿಸಿದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರ ಜಾತಿ ಗಣತಿ ನಡೆಸಿದರೆ, ಜಾತಿ ಕಾಲಂನಲ್ಲಿ ಉಪ್ಪಾರ ಎಂದು ಮಾತ್ರ ನಮೂದಿಸಬೇಕು. ಉಪ್ಪಾರರ ಉಪಜಾತಿಗಳನ್ನು ಸಮುದಾಯದವರು ನಮೂದಿಸಬಾರದು, ಇದರಿಂದ ಗೊಂದಲಗಳು ಉಂಟಾಗುತ್ತವೆ ಎಂದರು. ಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಕಲ್ಲುಂಗಡಿ ಮಹದೇವಸ್ವಾಮಿ, ಗಣೇಶ್, ಮಹದೇವು, ಸಂದೀಪ್, ಸೋಮಶೇಖರ್, ಮರಿಸ್ವಾಮಿ, ಶಿವಲಿಂಗಸ್ವಾಮಿ ಇದ್ದರು.

ನೇರ ಸಂದರ್ಶನ

ಮೈಸೂರು: ನಂಜನಗೂಡು ಅಂಚೆ ವಿಭಾಗದ ವ್ಯಾಪ್ತಿಯಲ್ಲಿ ಅಂಚೆ ಜೀವ ವಿಮೆ, ಗ್ರಾಮೀಣ ಅಂಚೆ ಜೀವ ವಿಮೆಯ ಪ್ರತಿನಿಧಿಗಳಾಗಿ ಕಾರ್ಯನಿರ್ವಹಿಸಲು ಅರ್ಜಿ ಆಹ್ವಾನಿಸಿದ್ದು, ಆಸಕ್ತರು ತಮ್ಮ ಪೂರ್ಣ ವಿವರ, ದಾಖಲೆಗಳೊಂದಿಗೆ ಜು.22ರಂದು ಬೆಳಗ್ಗೆ 11 ಗಂಟೆಗೆ ನಂಜನಗೂಡು ಪ್ರಧಾನ ಅಂಚೆ ಕಚೇರಿಗೆ ನೇರ ಸಂದರ್ಶನಕ್ಕೆ ಹಾಜರಾಗಬಹುದು. ಅಭ್ಯರ್ಥಿಯು ಕನಿಷ್ಠ 18 ವರ್ಷ ವಯೋಮಿತಿ. ಎಸ್‌ಎಸ್‌ಎಲ್‌ಸಿ ವಿದ್ಯಾರ್ಹತೆ ಹೊಂದಿರಬೇಕು. ಹೆಚ್ಚಿನ ಮಾಹಿತಿಗಾಗಿ ನಂಜನಗೂಡಿನ ಅಂಚೆ ಜೀವ ವಿಮೆ ಅಭಿವೃದ್ಧಿ ಅಧಿಕಾರಿಗಳಾದ ಮಹದೇವಪ್ಪ ಅವರ ಮೊ: 9448291050 ಸಂಪರ್ಕಿಸಿ.

ರೋಟರಿ ಮೈಸೂರು ಉತ್ತರ ಅಧ್ಯಕ್ಷರು, ಕಾರ್ಯದರ್ಶಿ ಪದಗ್ರಹಣ



2025–26ನೇ ಸಾಲಿನ ರೋಟರಿ ಮೈಸೂರು ಉತ್ತರ ಅಧ್ಯಕ್ಷರು, ಕಾರ್ಯದರ್ಶಿ ಪದಗ್ರಹಣ ಸಮಾರಂಭ ನಡೆಯಿತು.

ಮೈಸೂರು, ಜು.6(ಎಸ್‌ಪಿಎನ್)– ಸಾಮಾಜಿಕ ಸೇವಾ ಕ್ಷೇತ್ರದಲ್ಲಿ ರೋಟರಿ ಕ್ಲಬ್ ಅಂತರರಾಷ್ಟ್ರೀಯ ಮನ್ನಣೆ ಗಳಿಸಿದ್ದು, ರೋಟರಿ ಮೈಸೂರು ಉತ್ತರ ಮತ್ತಷ್ಟು ಸೇವಾ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಮುಡಾ ಮಾಜಿ ಅಧ್ಯಕ್ಷ ನಿಯೋಜಿತ ಜಿಲ್ಲಾ ರಾಜ್ಯಪಾಲ ಯಶಸ್ವಿ ಎಸ್.ಸೋಮಶೇಖರ್ ಅಭಿಪ್ರಾಯಪಟ್ಟರು.

ಮೈಸೂರಿನ ಕಂಠೀರವ ನರಸಿಂಹ ರಾಜ ಸ್ಪೋರ್ಟ್ಸ್ ಕ್ಲಬ್ ಸಭಾಂಗಣದಲ್ಲಿ 2025–26ನೇ ಸಾಲಿನ ರೋಟರಿ ಮೈಸೂರು ಉತ್ತರ ಅಧ್ಯಕ್ಷರು, ಕಾರ್ಯದರ್ಶಿ ಪದಗ್ರಹಣ ಸಮಾರಂಭದಲ್ಲಿ ಮಾತನಾಡಿದರು.

ರೋಟರಿ ಮೈಸೂರು ಉತ್ತರ ಸ್ಥಾಪನೆಯಾಗಿ 43 ವರ್ಷ ಕಳೆದಿದೆ. ಈ ವೇಳೆ ಸಾಕಷ್ಟು ಸದಸ್ಯರು ಸೇವಾ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಹಿಂದಿನ ಅಧ್ಯಕ್ಷ ರೊ.ಪಿ.ಪ್ರಭಾಕರ್, ಕಾರ್ಯದರ್ಶಿ ಎಲ್.ಆರ್.ಮಹದೇವಸ್ವಾಮಿ ಸಾಕಷ್ಟು ಸೇವಾ ತೊಡಗಿಸಿಕೊಂಡಿದ್ದಾರೆ ಎಂದರು.

ನಂತರ 2024–25ನೇ ಸಾಲಿನ ಕಾರ್ಯದರ್ಶಿ ರೊ.ಎಲ್.ಆರ್.ಮಹದೇವಸ್ವಾಮಿ ಅವರು ಈ ಸಾಲಿನ ಕಾರ್ಯ ಚಟುವಟಿಕೆಗಳ ವರದಿ ಮಂಡಿಸಿದರು. 2025–26ನೇ ಸಾಲಿಗೆ ಅಧ್ಯಕ್ಷರಾಗಿ ರೊ.ಎಂ.ಚಂದ್ರಶೇಖರ್, ಕಾರ್ಯದರ್ಶಿಯಾಗಿ ರೊ.ಎ.ಪಿ.ವಿರೂಪಾಕ್ಷ ಪದಗ್ರಹಣ ಮಾಡಿದರು. ಈ ವೇಳೆ ರೊ.ಹೆಚ್.ಆರ್.ಕೇಶವ್, ವಲಯ ಸೇನಾನಿ ರೊ.ಎಂ.ಶಿವಕುಮಾರ್ ಇದ್ದರು. ಈ ಸಾಲಿನ ನಿರ್ದೇಶಕ ಮಂಡಳಿ ಉಪಾಧ್ಯಕ್ಷರಾಗಿ ರೊ.ಡಿ.ಬಿ.ರಾಜಶೇಖರಮೂರ್ತಿ, ಜಂಟಿ ಕಾರ್ಯದರ್ಶಿ ರೊ.ಬಿ.ಆರ್.ಶಿವಕುಮಾರ್, ಕೋಶಾಧಿಕಾರಿ ಬಿ.ಎಸ್.ಶಿವರುದ್ರಪ್ಪ, ಸಹಾಯಕ ಕೋಶಾಧಿಕಾರಿ ರೊ.ಕೆ.ರವಿ, ರೊ.ಬಿ.ಎಲ್.ಗೋಪಾಲ್, ನಿರ್ದೇಶಕರಾಗಿ ರೊ.ಎಂ.ಜೆ.ಸ್ವಾಮಿ, ರೊ.ಎಂ.ರಾಜು, ರೊ.ಎಂ.ಕೆ.ನಂಜಯ್ಯ, ರೊ.ನರಸೇಗೌಡ ಉಪಸ್ಥಿತರಿದ್ದರು.

ಜು.16ರಂದು ಲೋಕಾಯುಕ್ತರಿಂದ ದೂರು ಸ್ವೀಕಾರ

ಮೈಸೂರು,ಜು.6–ಕರ್ನಾಟಕ ಲೋಕಾಯುಕ್ತ ಮೈಸೂರು ವಿಭಾಗದ ಅಧಿಕಾರಿಗಳಿಂದ ಜು.16ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1ರವರೆಗೆ ಮೈಸೂರು ತಾಲೂಕು ಕಚೇರಿಯ ಸಭಾಂಗಣದಲ್ಲಿ ದೂರು ಸ್ವೀಕರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಅಧಿಕೃತ ಕೆಲಸಗಳ ಅನಗತ್ಯ ವಿಳಂಬ, ಲಂಚದ ಹಣದ ಬೇಡಿಕೆ ಇತ್ಯಾದಿ ತೊಂದರೆಗಳನ್ನು ನೀಡುತ್ತಿರುವ ಸಾರ್ವಜನಿಕ, ಸರ್ಕಾರಿ ಅಧಿಕಾರಿ, ನೌಕರರ ವಿರುದ್ಧ ಅಗತ್ಯ ದಾಖಲೆಗಳೊಡನೆ ಸಾರ್ವಜನಿಕರು ದೂರು ನೀಡಬಹುದು ಎಂದು ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಉಮೇಶ್.ಟಿ.ಜೆ. ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು,ಜು.6– ಜಿಲ್ಲಾ ಅಂಗವಿಕಲರ ಕಲ್ಯಾಣ ಇಲಾಖೆ ವತಿಯಿಂದ 2025–26ನೇ ಸಾಲಿನಲ್ಲಿ ವಿಕಲಚೇತನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಕ್ಕೆ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ. ವಿಕಲಚೇತನ ವಿದ್ಯಾರ್ಥಿಗಳು ವಿದ್ಯಾರ್ಥಿವೇತನವನ್ನು ಪಡೆಯಲು State Scholarship Portal ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿರುವ ಶಾಲಾ–ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿಕಲಚೇತನ ವಿದ್ಯಾರ್ಥಿಗಳು State Scholarship Portalನಲ್ಲಿ ಅಗತ್ಯ ದಾಖಲೆಗಳೊಂದಿಗೆ ನಿಗದಿತ ಅವಧಿಯಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿ ಸಹಾಯವಾಣಿ ಕೇಂದ್ರದ ದೂರವಾಣಿ ಸಂಖ್ಯೆ : 0821–2490111 ಸಂಪರ್ಕಿಸಿ.

ರಾಷ್ಟ್ರೀಯ ಟೆನ್ನಿಸ್ ಪಂದ್ಯಾವಳಿ: ಮೈಸೂರಿನ ಪದ್ಮಪ್ರಿಯಾ ರಮೇಶ್‌ಕುಮಾರ್‌ಗೆ ಪ್ರಶಸ್ತಿ



ಬೆಂಗಳೂರಿನ ಟಾಪ್‌ಸ್ಪಿನ್ ಟೆನ್ನಿಸ್ ಅಕಾಡೆಮಿಯಲ್ಲಿ ನಡೆದ 14 ವರ್ಷದೊಳಗಿನ ರಾಷ್ಟ್ರೀಯ ಟೆನ್ನಿಸ್ ಪಂದ್ಯಾವಳಿಯ ಡಬಲ್ಸ್‌ನಲ್ಲಿ ಪದ್ಮಪ್ರಿಯಾ ರಮೇಶ್ ಕುಮಾರ್ ಮತ್ತು ಸಾಸ್ಫಾ ಜೋಡಿ ಪ್ರಥಮ ಬಹುಮಾನ ಪಡೆದರು.

ಮೈಸೂರು,ಜು.6(ಎಂಟಿವೈ)– ಬೆಂಗಳೂರಿನ ಟಾಪ್‌ಸ್ಪಿನ್ ಟೆನ್ನಿಸ್ ಅಕಾಡೆಮಿಯಲ್ಲಿ ನಡೆದ 14 ವರ್ಷದೊಳಗಿನ ರಾಷ್ಟ್ರೀಯ ಟೆನ್ನಿಸ್ ಪಂದ್ಯಾವಳಿಯಲ್ಲಿ ಮೈಸೂರಿನ ಪದ್ಮಪ್ರಿಯಾ ರಮೇಶ್‌ಕುಮಾರ್ ಅವರು ಸಿಂಗಲ್ಸ್ ಮತ್ತು ಡಬ್ಬಲ್ಸ್ ವಿಭಾಗದಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದಾರೆ.

ಕಳೆದ ವಾರವಷ್ಟೇ ಹೈದರಾಬಾದ್‌ನಲ್ಲಿ ನಡೆದ ಏಷ್ಯನ್ 14 ಅಂಡರ್‌ಗ್ರೇಡ್–ಎ ಪಂದ್ಯಾವಳಿಯಲ್ಲಿ ಉತ್ತಮ ಪ್ರದರ್ಶನ ನೀಡಿ, ಬಹುಮಾನ ಗಳಿಸಿದ್ದ ಪದ್ಮಪ್ರಿಯಾ ರಮೇಶ್‌ಕುಮಾರ್ ಇದೀಗ ರಾಷ್ಟ್ರೀಯ ಪಂದ್ಯಾವಳಿಯಲ್ಲೂ ಸಿಂಗಲ್ಸ್ ಮತ್ತು ಡಬಲ್ಸ್ ವಿಭಾಗದಲ್ಲಿ ವಿಜೇತರಾಗಿದ್ದಾರೆ.

ಪಂದ್ಯಾವಳಿಯ ಫೈನಲ್‌ನಲ್ಲಿ ಪದ್ಮಪ್ರಿಯಾ ರಮೇಶ್‌ಕುಮಾರ್ 7–5 ಮತ್ತು 6–2 ಸೆಟ್ ಅಂತರದಿಂದ ಪರಿಣೀತಾ ವಟ್ಟಪ್ರಂಬಿಲ್ ಅವರನ್ನು ಸೋಲಿಸಿ, ಚಾಂಪಿಯನ್ ಪ್ರಶಸ್ತಿ ತನ್ನದಾಗಿಸಿಕೊಂಡರು. ಇದಕ್ಕೂ ಮುನ್ನ ಸೆಮಿಫೈನಲ್‌ನಲ್ಲಿ ಜೊಹಾ ಖುರೇಷಿ ವಿರುದ್ಧ 2–6, 6–2, 6–2 ಸೆಟ್ ಅಂತರದಲ್ಲಿ ಗೆಲುವು ಸಾಧಿಸಿದ್ದ ಅವರು, ಕ್ವಾರ್ಟರ್ ಫೈನಲ್‌ನಲ್ಲಿ ಕೃಷಿಕಾ ಗೌತಮ್ ವಿರುದ್ಧ 6–3, 6–2 ಸೆಟ್ ಅಂತರದಲ್ಲಿ ಜಯಗಳಿಸಿದ್ದರು.


ಡಬಲ್ಸ್: ಪಂದ್ಯಾವಳಿಯ ಡಬಲ್ಸ್‌ನಲ್ಲಿ ಪದ್ಮಪ್ರಿಯಾ ರಮೇಶ್ ಕುಮಾರ್ ಮತ್ತು ಸಾಸ್ಫಾ ಜೋಡಿ, ಪರಿಣೀತಾ ವಟ್ಟಪ್ರಂಬಿಲ್ ಮತ್ತು ಕೃಷಿಕಾ ಗೌತಮ್ ಜೋಡಿಯನ್ನು 6–2, 7–6 ಸೆಟ್ ಅಂತರದಲ್ಲಿ ಸೋಲಿಸಿ, ಡಬಲ್ಸ್‌ನಲ್ಲಿ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಹುಲಿ ಯೋಜನೆಯ ನಿರ್ದೇಶಕ ಡಾ.ಪಿ.ರಮೇಶ್‌ಕುಮಾರ್, ಮೈಸೂರು ವೃತ್ತದ ಸಿಎಫ್ ಡಾ.ಮಾಲತಿ ಪ್ರಿಯಾ ದಂಪತಿ ಪುತ್ರಿಯಾಗಿರುವ ಪದ್ಮಪ್ರಿಯಾ ರಮೇಶ್‌ಕುಮಾರ್ ಟೆನ್ನಿಸ್‌ನಲ್ಲಿ ಉತ್ತಮ ಸಾಧನೆ ಮಾಡುತ್ತಿದ್ದು, ಭವಿಷ್ಯದ ಟೆನ್ನಿಸ್ ತಾರೆಯಾಗುವ ಭರವಸೆ ಮೂಡಿಸಿದ್ದಾರೆ.

ಪೊಲೀಸ್ ಸಿಬ್ಬಂದಿಗೆ ಆರೋಗ್ಯ ತಪಾಸಣೆ ವೆಚ್ಚ 1500 ರೂ.ಗೆ ಹೆಚ್ಚಳ

ಮೈಸೂರು, ಜು.6(ಎಸ್‌ಪಿಎನ್)–ಪೊಲೀಸ್ ಸಿಬ್ಬಂದಿಗೆ ವಾರ್ಷಿಕ ಆರೋಗ್ಯ ತಪಾಸಣೆ ವೆಚ್ಚ ಸಾವಿರ ರೂ.ನಿಂದ 1500 ರೂ.ಗೆ ಹೆಚ್ಚಿಸಿ ಡಿಜಿ ಮತ್ತು ಐಜಿ ಕಚೇರಿಯ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ(ಜಿ ಮತ್ತು ಹೆಚ್‌ಆರ್) ದೇವಜ್ಯೋತಿ ರೇ ಆದೇಶಿಸಿದ್ದಾರೆ. ಬಿಪಿ, ಮಧುಮೇಹ ಪರೀಕ್ಷೆ, ಕಿಡ್ನಿ, ಅಲ್ಟ್ರಾ ಸೌಂಡ್, ಕೊಬ್ಬು, ಲಿವರ್ ಫಂಕ್ಷನ್, ಸಿಬಿಸಿ ಚೆಸ್ಟ್ ಎಕ್ಸ್‌ರೇ, ಹೃದಯ ಸಂಬಂಧಿ ಕಾಯಿಲೆಗಳ ವಿವಿಧ ಪರೀಕ್ಷೆ ಸೇರಿದಂತೆ 11 ಬಗೆಯ ಪರೀಕ್ಷೆಗೆ ಈ ವೆಚ್ಚ ಭರಿಸುವಂತೆ ಸೂಚಿಸಿದ್ದಾರೆ. ರಾಜ್ಯದ ಆಯಾಯ ಘಟಕಾಧಿಕಾರಿಗಳು ವೈದ್ಯಕೀಯ ವೆಚ್ಚದ ಮೊತ್ತವನ್ನು ಆಯಾಯ ವೈದ್ಯಕೀಯ ಆಸ್ಪತ್ರೆಗಳಿಗೆ ನೇರವಾಗಿ ವರ್ಗಾಯಿಸುವುದು. ಯಾವುದೇ ಕಾರಣಕ್ಕೂ ಈ ಹಣವನ್ನು ನಗದಾಗಿ ಸಿಬ್ಬಂದಿಗೆ ನೀಡುವಂತಿಲ್ಲ. ವೈದ್ಯಕೀಯ ತಪಾಸಣೆ ವರದಿಯನ್ನು ಆರೋಗ್ಯ ಕಲಂನಲ್ಲಿ ತಪ್ಪದೇ ದಾಖಲಿಸಬೇಕು ಎಂದು ದೇವಜ್ಯೋತಿ ರೇ ಸೂಚಿಸಿದ್ದಾರೆ.

ನಿಧನ



ಟಿ.ತಿಮ್ಮಯ್ಯ

ಮೈಸೂರು,ಜು.6–ವಿಜಯವಾಣಿ ಹಿರಿಯ ವರದಿಗಾರ ಮಂಜುನಾಥ ಟಿ.ಭೋವಿ ಅವರ ತಂದೆ ಟಿ.ತಿಮ್ಮಯ್ಯ (73) ಅವರು ಶುಕ್ರವಾರ ರಾತ್ರಿ ನಿಧನರಾದರು. ಮೈಸೂರಿನ ಲಿಂಗಾಂಬುದಿಪಾಳ್ಯದ ನಿವಾಸಿಯಾಗಿರುವ ಇವರಿಗೆ ಓರ್ವ ಪುತ್ರ, ಪುತ್ರಿ, ಅಪಾರ ಬಂಧು–ವರ್ಗ ಅಗಲಿದ್ದಾರೆ. ಶಿವಮೊಗ್ಗ ಜಿಲ್ಲೆ ಭದ್ರಾವತಿಯ ಮೂಲದವರಾದ ಇವರು, ಕೆಪಿಟಿಸಿಎಲ್ ನೌಕರರಾಗಿ ಹಾವೇರಿ ಜಿಲ್ಲೆಯ ರಾಣೇಬೆನ್ನೂರು, ಬ್ಯಾಡಗಿ ತಾಲೂಕಿನಲ್ಲಿ 38 ವರ್ಷಗಳ ಕಾಲ ಕಾರ್ಯನಿರ್ವಹಿಸಿದ್ದರು. ನಿವೃತ್ತಿ ಬಳಿಕ ಮೈಸೂರಿನಲ್ಲಿ ನೆಲೆಸಿದ್ದರು. ಅಂತ್ಯಕ್ರಿಯೆ ಲಿಂಗಾಂಬುದಿಪಾಳ್ಯದ ಸ್ಮಶಾನದಲ್ಲಿ ಶನಿವಾರ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

7.07.2025 ಸೋಮವಾರ, ಮಳೆ ನಕ್ಷತ್ರ: ಪುನರ್ವಸು, 6.07.2025 ರಿಂದ 19.07.2025 ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಅನುರಾಧ, ರಾಹುಕಾಲ: ಬೆಳಗ್ಗೆ 7.30 ರಿಂದ 9 ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಸ್ಥಳ: ಜೆಎಸ್‌ಎಸ್ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ.
- **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್:** 83ನೇ ಜಯಂತ್ಯುತ್ಸವ–2025, ಬೆಳಗ್ಗೆ 8 ಗಂಟೆಗೆ ಲಕ್ಷಾರ್ಚನಾ ಹೋಮ, ಸಂಜೆ ಪ್ರಾಕಾರೋತ್ಸವ, ಅಷ್ಟಾವಧಾನ ಸೇವೆ, ಸ್ಥಳ: ದೇವಸ್ಥಾನದ ಪ್ರಾಂಗಣ, ಟೆಂಪಲ್ ರಸ್ತೆ, ವಿವಿ ಮೊಹಲ್ಲಾ.
- **ಶ್ರೀ ಸತ್ಯ ಸಾಯಿ ಸೇವಾ ಸಂಘ:** ವಾಹಿನಿ ಮಹೋತ್ಸವ, ಭಗವದ್ ಗೀತಾ ಎಕ್ಸಿಬಿಷನ್, ಸ್ಥಳ: ಶ್ರೀ ಸತ್ಯ ಸಾಯಿಬಾಬಾ ಶಾಲೆ, ಜಯಲಕ್ಷ್ಮಿಪುರಂ, ಬೆಳಗ್ಗೆ 10ರಿಂದ.
- **ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಶ್ರೀ ಕುವೆಂಪು ವಿದ್ಯಾ ಪರಿಷತ್ತು ಮತ್ತು ಅಂಗಸಂಸ್ಥೆಗಳು:** ಪದ್ಮಶ್ರೀ, ಕರ್ನಾಟಕ ರತ್ನ ನಾಡೋಜ ಪ್ರೊ. ದೇಜಗೌ ಅವರ ಜನ್ಮೋತ್ಸವ ಕಾರ್ಯಕ್ರಮ, ದೇಜಗೌ ಸ್ಮರಣೆ: ಮಹಾರಾಜ ಕಾಲೇಜು ಜಾನಪದ ವಿಭಾಗದ ಮುಖ್ಯಸ್ಥ ಡಾ. ಚೇತನ್ ಹೆಚ್.ಆರ್., ಗೌರವಾನ್ವಿತ ಉಪಸ್ಥಿತಿ: ಶ್ರೀ ಕುವೆಂಪು ವಿದ್ಯಾ ಪರಿಷತ್ತು ಅಧ್ಯಕ್ಷ ಡಾ. ರಾಜೇಂದ್ರ, ಅಧ್ಯಕ್ಷತೆ: ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಅಧ್ಯಕ್ಷ ಡಾ. ಜೆ. ಶಶಿಧರಪ್ರಸಾದ್, ಸ್ಥಳ: ಶ್ರೀ ಕುವೆಂಪು ರಂಗಮಂದಿರ, ಜಯಲಕ್ಷ್ಮಿಪುರಂ, ಬೆಳಗ್ಗೆ 11 ಗಂಟೆಗೆ.
- **ನೀಲ ಗಂಗಾ ಮಹಿಳಾ ಬಳಗ:** ಬಸವ ಜಯಂತಿ ಪ್ರಯುಕ್ತ ವಚನ ಸಾಹಿತ್ಯ ಸ್ಪರ್ಧೆ ಕಾರ್ಯಕ್ರಮ, ಸ್ಥಳ: ಜೆಎಸ್‌ಎಸ್ ಕಾನೂನು ಕಾಲೇಜು, ಕುವೆಂಪುನಗರ, ಸಂಜೆ 4 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ: ವಿ.ಬಿ.ಕುಲಮರ್ವ, 6.15 ಗೀತಾರಾಧನ, 6.35 ಮತ್ತು ಸಂಜೆ 6.10: 'ಸಸ್ಯ ಸಿರಿ': ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ–ಡಾ.ಟಿ.ಶಿವಕುಮಾರ್, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ಎನ್.ಹೇಮಾ, ಮತ್ತೂರು ಕುಮಾರಸ್ವಾಮಿ, ಅಂಬಯ್ಯನುಲಿ, ವ್ಯಾಖ್ಯಾನ– ಕೆ.ಎಲ್. ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 'ಭರವಸೆ ಹೊನಲು–ವೈದ್ಯರ ಕಿವಿಮಾತು' ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು– ಟ್ರಸ್ಟ್‌ವೆಲ್ ಆಸ್ಪತ್ರೆ, ಜೆ. ಸಿ. ರಸ್ತೆ, ಬೆಂಗಳೂರು, 8.30 ಕನ್ನಡ ಚಿತ್ರಗೀತೆಗಳು, 9.00 ನೆನಪಿನಂಗಳ (ಧ್ವನಿ ಭಂಡಾರದಿಂದ), 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಆರ್.ವಿಜಯಲಕ್ಷ್ಮೀ– ವೈಯೋಲಿನ್ ವಾದನ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ: ಗೇಮ್ ಷೋ.

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ನಮ್ಮ ಆರೋಗ್ಯ: 'ಹದಿಹರೆಯದ ಹೆಣ್ಣುಮಕ್ಕಳನ್ನು ಬಾಧಿಸುವ ಆರೋಗ್ಯ ಸಮಸ್ಯೆಗಳು' ಕುರಿತು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಹಾಗೂ ಚೆಲುವಾಂಬ ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರಾದ ಡಾ.ಶಿಲ್ಪಾ.ಎನ್.ವಿಜಯ್ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ– ಬೇದ್ರೆ ಮಂಜುನಾಥ, 1.00 ಪ್ರಗತಿ ಪಥ: ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು: ಜಯಂತಿ ವಿ. ಭಟ್, 2.30 ಪ್ರದೇಶ ಸಮಾಚಾರ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ನಾದ ಲಯ ಲಹರಿ ನಿರ್ದೇಶನ– ತುಮಕೂರು ಬಿ.ರವಿಶಂಕರ್.

ಸಂಜೆ: 4.00 ಮಹಿಳಾರಂಗ: ನನ್ನ ಹಕ್ಕು: ನನ್ನ ಜವಾಬ್ದಾರಿ– ಮಹಿಳಾ ಕಾನೂನು ಜಾಗೃತಿ ಕಾರ್ಯಕ್ರಮ, ಭಾಗವಹಿಸುತ್ತಾರೆ– ದೆಹಲಿಯ ಉಚ್ಚನ್ಯಾಯಾಲಯದ ವಕೀಲರಾದ ಸ್ವಾತಿ ಬಿ.ವಿ., ಪ್ರಸ್ತುತಿ– ಸಹನ, 4.45 ಹಿಂದಿ ಪಾಠ: ಪ್ರಸ್ತುತಿ– ಸ್ಮಿತಾ ಚಿಪ್ಳೂಣ್ಕರ್, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ಕೃಷಿರಂಗ– ವನಮಹೋತ್ಸವ ಕುರಿತ ನೇರ ಫೋನ್ ಇನ್ ಕಾರ್ಯಕ್ರಮ, ಭಾಗವಹಿಸುತ್ತಾರೆ– ಮೈಸೂರು ವಲಯದ ಸಾಮಾಜಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಶಂಕರೇಗೌಡ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಪ್ರಫುಲ್ ಶೆಟ್ಟಿ, ಪ್ರಸ್ತುತಿ– ಎನ್. ಕೇಶವಮೂರ್ತಿ.

ರಾತ್ರಿ: 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ: ವನಮಹೋತ್ಸವ ಸಪ್ತಾಹದ ಸಂದರ್ಭದಲ್ಲಿ ವಿಶೇಷ ಚಿತ್ರ ಚಿತ್ತಾರ, ಪ್ರಸ್ತುತ ಪಡಿಸುತ್ತಾರೆ– ಶ್ರೀರಂಗಪಟ್ಟಣದ ಐಶ್ವರ್ಯ ಪ್ರಮೋದ, 8.30 ಹಿಂದಿ ಚಿತ್ರಗೀತೆ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಎಸ್.ಶಶಾಂಕ್– ವೇಣು ವಾದನ, 10.00 'ಯಕ್ಷಸಂಪದ': ಬಡಗು ತಿಟ್ಟಿನ ಯಕ್ಷಗಾನ ಮಟ್ಟುಗಳ ರೇಡಿಯೋ ಪ್ರಾತ್ಯಕ್ಷಿಕೆ, ಪ್ರಸ್ತುತಿ– ದಿವಾಕರ ಹೆಗಡೆ, 10.30 ಸವಿನೆನಪು.

ಯಾವಾಗ ಚುನಾವಣೆ ನಡೆದರೂ 130ರಿಂದ 140 ಸ್ಥಾನ ಪಡೆದು ಬಿಜೆಪಿ ಅಧಿಕಾರಕ್ಕೆ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿಶ್ವಾಸ

• ಮೈಸೂರಿಗೆ ನೀವು(ಸಿಎಂ) ಎಷ್ಟು ಅನುದಾನ ಕೊಟ್ಟಿದ್ದೀರಿ? • ಒಂದೆಡೆ ಗ್ಯಾರಂಟಿ ಕೊಟ್ಟು ಮತ್ತೊಂದೆಡೆ ಕಿತ್ತುಕೊಳ್ಳುತ್ತಿರುವ ಸರ್ಕಾರ

ಮೈಸೂರು, ಜು.6(ಎಸ್‌ಬಿಡಿ)– ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ಯಾವಾಗ ನಡೆದರೂ 130ರಿಂದ 140 ಸ್ಥಾನಗಳಲ್ಲಿ ಗೆಲುವು ಪಡೆಯುವ ಮೂಲಕ ಸ್ವಂತ ಶಕ್ತಿಯಿಂದ ಬಿಜೆಪಿಯನ್ನು ಅಧಿಕಾರಕ್ಕೆ ತರುತ್ತೇವೆ ಎಂದು ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮೈಸೂರು ನಗರ ಹಾಗೂ ಗ್ರಾಮಾಂತರ ಬಿಜೆಪಿ ವತಿಯಿಂದ ನಗರದ ರಾಜೇಂದ್ರ ಕಲಾಮಂದಿರದಲ್ಲಿ ಭಾನುವಾರ ಆಯೋಜಿಸಿದ್ದ ಪ್ರಧಾನಿ ಮೋದಿ ಅವರ 11 ವರ್ಷದ ಸಾಧನೆ 'ಸರ್ವರಿಗೂ ಸಮಪಾಲು– ಸರ್ವರಿಗೂ ಸಮಬಾಳು' ಕಾರ್ಯಕ್ರಮ ಹಾಗೂ ಕಾರ್ಯಕರ್ತರ ಸಂಘಟನಾ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದ ಕಾಂಗ್ರೆಸ್ ಸರ್ಕಾರದ ವಿರುದ್ಧ ಹರಿಹಾಯುವುದರ ಜೊತೆಗೆ ಕಿಕ್ಕಿರಿದಿದ್ದ ಕಾರ್ಯಕರ್ತರಲ್ಲಿ ವಿಶ್ವಾಸ ತುಂಬುವ ಪ್ರಯತ್ನ ಮಾಡಿದರು.

ರಾಜ್ಯದಲ್ಲಿರುವ ಭ್ರಷ್ಟ, ರೈತ, ಬಡವರ ವಿರೋಧಿ ಸರ್ಕಾರವನ್ನು ಬುಡಸಹಿತ ಕಿತ್ತುಹಾಕುವ ನಿಟ್ಟಿನಲ್ಲಿ ನಾವೆಲ್ಲಾ ಒಟ್ಟಾಗಿ ಮಾಡಬೇಕಿದೆ. ಕಾಂಗ್ರೆಸ್ ರಾಜ್ಯ ಉಸ್ತುವಾರಿ ಸುರ್ಜೇವಾಲಾ, ಬೆಂಗಳೂರಿಗೆ ಬಂದು ಶಾಸಕರ ಅಭಿಪ್ರಾಯ ಕೇಳುವ ನೆಪದಲ್ಲಿ ಮುಖ್ಯಮಂತ್ರಿ ಬದಲಾವಣೆಗೆ ಗುದ್ದಲಿ ಪೂಜೆ ಮಾಡಿ ಹೋಗಿದ್ದಾರೆ. ಯಾವಾಗ ಕಾಂಗ್ರೆಸ್ ಸರ್ಕಾರ ಬೀಳುವುದೋ ಗೊತ್ತಿಲ್ಲ. ಮುಂದೆ ಯಾವುದೇ ಸಂದರ್ಭದಲ್ಲಿ ಚುನಾವಣೆ ನಡೆದರೂ 130–140 ಸ್ಥಾನಗಳನ್ನು ಗೆದ್ದು, ಸ್ವಂತ ಶಕ್ತಿಯ ಮೇಲೆ ಬಿಜೆಪಿಯನ್ನು ಅಧಿಕಾರಕ್ಕೆ ತರುತ್ತೇವೆ. ಇದನ್ನು ನಾನು ಸವಾಲಾಗಿ ಸ್ವೀಕಾರ ಮಾಡಿದ್ದೇನೆ. ಮೈಸೂರು, ಮಂಡ್ಯ, ಚಾಮರಾಜನಗರ ಸೇರಿದಂತೆ ಹಳೇ ಮೈಸೂರು ಭಾಗದಿಂದ ಅತೀ ಹೆಚ್ಚು ಶಾಸಕರು ಗೆದ್ದು ಬರಬೇಕು. ಇದರಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ. ನಾನು ಸಾಮಾನ್ಯ ಕಾರ್ಯಕರ್ತನಾಗಿ ಪಕ್ಷ ಬಲಪಡಿಸುತ್ತೇನೆ. ನಿಮ್ಮೊಂದಿಗೆ ಹೆಗಲು ಕೊಟ್ಟು ಕೆಲಸ ಮಾಡಲು ಸಿದ್ಧನಿದ್ದೇನೆ ಎಂದರು.

ಸಿಎಂಗೆ ಸವಾಲು: ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಒಂದು ಸವಾಲು ಹಾಕುತ್ತಿದ್ದೇನೆ. ಮೈಸೂರಿಗೆ ಬನ್ನಿ, ಬಿಜೆಪಿ ಅಧಿಕಾರದಲ್ಲಿದ್ದಾಗ ಬಿ.ಎಸ್. ಯಡಿಯೂರಪ್ಪನವರು ಎಷ್ಟು ಕೋಟಿ ಅನುದಾನ ನೀಡಿದ್ದರು, ನೀವು ಎಷ್ಟು ಕೊಟ್ಟಿದ್ದೀರಿ ಎಂದು ಚರ್ಚೆ ಮಾಡೋಣ. ಯಡಿಯೂರಪ್ಪನವರು ನೀಡಿದ ಕೆರೆ ತುಂಬಿಸುವ ಯೋಜನೆಯನ್ನು ಚಾಮರಾಜನಗರದ ಜನತೆ ಇಂದಿಗೂ ನೆನೆಯುತ್ತಾರೆ. ಮೈಸೂರು, ಮಂಡ್ಯ, ಹಾಸನ ಸೇರಿದಂತೆ ಹಳೇ ಮೈಸೂರು ಭಾಗದಲ್ಲೂ ಸಾಕಷ್ಟು ಅಭಿವೃದ್ಧಿ ಕಾರ್ಯಗಳಾಗಿದ್ದವು. ಆದರೆ ಸಿದ್ದರಾಮಯ್ಯನವರು ಎರಡು ಬಾರಿ ಮುಖ್ಯಮಂತ್ರಿಯಾದರೂ ಈ ಭಾಗದ ಬಡವರು, ರೈತರಿಗೆ ಅನುಕೂಲವಾಗುವ ಯಾವುದೇ ಯೋಜನೆ ಕೊಟ್ಟಿಲ್ಲ ಎಂದು ವಾಗ್ದಾಳಿ ನಡೆಸಿದರು.

ಹೋರಾಟಕ್ಕೆ ಶಕ್ತಿ ಇದೆ: ಬಿಜೆಪಿಯಿಂದ ಅಧಿಕಾರ ಕಿತ್ತುಕೊಳ್ಳಲು ಭ್ರಷ್ಟಾಚಾರದ ಆರೋಪ ಮಾಡಿದರು. ಆದರೆ ವಾಲ್ಮೀಕಿ ನಿಗಮದ 185 ಕೋಟಿ ಹಣವನ್ನು ನಕಲಿ ಖಾತೆಗಳ ಮೂಲಕ ತೆಲಂಗಾಣಕ್ಕೆ ಕಳುಹಿಸಿದ್ದರು. ಬಿಜೆಪಿ ಹೋರಾಟದ ಪರಿಣಾಮವಾಗಿ ಸಚಿವರಾಗಿದ್ದ ನಾಗೇಂದ್ರ ರಾಜೀನಾಮೆ ನೀಡಿ, ಜೈಲಿಗೆ ಹೋಗಿ ಬಂದಿದ್ದಾರೆ. ಮೈಸೂರಿನ ಮುಡಾ (ಈಗಿನ ಎಂಡಿಎ)ದ 5 ಸಾವಿರ ಕೋಟಿ ಹಗರಣದಲ್ಲಿ ನಿಮ್ಮ ಕುಟುಂಬದ ಪಾಲಿದೆ ಎಂದಾಗ ಬಿಜೆಪಿಗೆ ತಲೆ ಇಲ್ಲ, ಪರಿಹಾರ ಕೊಟ್ಟರೆ ನಿವೇಶನ ವಾಪಸ್ ನೀಡುತ್ತೇವೆ ಎಂದರು. ಆದರೆ ಪಾದಯಾತ್ರೆ ಮೂಲಕ ಹೋರಾಟ ನಡೆಸುತ್ತಿದ್ದಂತೆ ಕುರ್ಚಿ ಕಳೆದುಕೊಳ್ಳುವ ಭಯದಲ್ಲಿ ಬಿಡಿಗಾಸು ಪಡೆಯದೆ ಸಿದ್ದರಾಮಯ್ಯನವರು 14 ನಿವೇಶನ ವಾಪಸ್ ನೀಡಿದರು. ಇದು ನಮ್ಮ ಹೋರಾಟದ ಶಕ್ತಿ ಎಂದರು.

ಕೊಟ್ಟು ಕಿತ್ತುಕೊಳ್ಳುವುದು: ಮದ್ಯ ಮಾರಾಟ ಪರವಾನಗಿ ಶುಲ್ಕವನ್ನು 4 ಲಕ್ಷದಿಂದ 9 ಲಕ್ಷಕ್ಕೆ ಹೆಚ್ಚಿಸಿದ್ದಾರೆ. ಆ ಹಣವನ್ನು ಗ್ರಾಹಕರಿಂದಲೇ ವಸೂಲಿ ಮಾಡುತ್ತಾರೆ. ಆದ್ದರಿಂದ ಮದ್ಯದ ಬೆಲೆ ಹೆಚ್ಚಾಗಿದೆ. ಒಂದು ಕಡೆ ಕೊಟ್ಟು ಮತ್ತೊಂದೆಡೆ ಕಿತ್ತುಕೊಳ್ಳುವುದನ್ನು ಸಿದ್ದರಾಮಯ್ಯ ಅವರ ಬೋಗಸ್ ಸರ್ಕಾರ ಮಾಡುತ್ತಿದೆ. ಶಕ್ತಿ ಯೋಜನೆಯಿಂದ ಗ್ರಾಮೀಣ ಭಾಗದಲ್ಲಿ ಬಸ್‌ಗಳಿಲ್ಲದೆ ಜನ ಪರದಾಡುತ್ತಿದ್ದಾರೆ. ಸಾರಿಗೆ ಸಂಸ್ಥೆ ನೌಕರರ ವೇತನಕ್ಕೂ ಹಣವಿಲ್ಲ. ಐದು ಕೆಜಿ ಅಕ್ಕಿ ಬದಲಿಗೆ ಇಂದಿರಾ ಕಿಟ್ ಕೊಡಲು ಚಿಂತನೆ ನಡೆಸಿದ್ದಾರೆ. ಅದರಿಂದಲೂ ಕಮಿಷನ್ ಜೊತೆಗೆ 800 ಕೋಟಿ ಉಳಿತಾಯ ಮಾಡಬಹುದು ಎಂಬ ಯೋಚನೆ ಲಜ್ಜೆಗೆಟ್ಟ ಸರ್ಕಾರಕ್ಕಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮೋದಿ ವಿಶ್ವಾಸ ತುಂಬಿದ್ದಾರೆ: ದೇಶದ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿಯವರು ಭಾರತಕ್ಕೆ ಉಜ್ವಲ ಭವಿಷ್ಯವಿದೆ, ಅಭಿವೃದ್ಧಿ ಪರ ಹಾಗೂ ಭ್ರಷ್ಟಾಚಾರ ರಹಿತ ಆಡಳಿತ ಸಾಧ್ಯವಿದೆ. ಜಗತ್ತಿನ ದೊಡ್ಡ ರಾಷ್ಟ್ರಗಳ ಸಾಲಿನಲ್ಲಿ ಭಾರತ ನಿಲ್ಲಬಹುದು ಎಂಬ ವಿಶ್ವಾಸವನ್ನು ಜನರಲ್ಲಿ ತುಂಬಿದ್ದಾರೆ. ಭಾರತ ಜಗತ್ತಿನ ನಾಲ್ಕನೇ ದೊಡ್ಡ ಆರ್ಥಿಕ ಶಕ್ತಿ ಹೊಂದಿರುವ ರಾಷ್ಟ್ರವಾಗಿದೆ. ಕಾಂಗ್ರೆಸ್‌ನವರು ಕ್ರೀಡಾಂಗಣ ಹಾಗೂ ಯೋಜನೆಗಳಿಗೆ ಒಂದು ಕುಟುಂಬದವರ ಹೆಸರಿಡುತ್ತಿದ್ದರು. ಆದರೆ ಮೋದಿ ಅವರು ಪ್ರಧಾನಮಂತ್ರಿ ಪದನಾಮದಲ್ಲಷ್ಟೇ ಯೋಜನೆಗಳನ್ನು ಮಾಡಿದ್ದಾರೆ. ಯುಪಿಎ ಸರ್ಕಾರ 2013–14ರ ಬಜೆಟ್‌ನಲ್ಲಿ ಕೃಷಿ ಕ್ಷೇತ್ರಕ್ಕೆ 36767 ಕೋಟಿ ಹಣವನ್ನು ಮೀಸಲಿಟ್ಟಿತ್ತು. ಆದರೆ ಮೋದಿ ಅವರು 2024–25ನೇ ಸಾಲಿನ ಬಜೆಟ್‌ನಲ್ಲಿ 1.46 ಲಕ್ಷ ಕೋಟಿ ಅನುದಾನವನ್ನು ಕೃಷಿ ಕ್ಷೇತ್ರಕ್ಕೆ ನೀಡಿದ್ದಾರೆ. ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಡಿ ರೈತರಿಗೆ ತಲಾ 6 ಸಾವಿರ ಸಹಾಯ ಧನ ನೀಡುತ್ತಿದ್ದಾರೆ. ಕೇಂದ್ರದಿಂದ ಯೂರಿಯಾಗೆ 2183 ರೂ. ಹಾಗೂ ಡಿಎಸ್‌ಪಿಗೆ 2500 ರೂ. ಸಬ್ಸಿಡಿ ನೀಡುತ್ತಿದೆ. ಮೋದಿ ಅವರ ಯೋಜನೆಗಳು ಪ್ರತಿಯೊಬ್ಬರಿಗೂ ಸಲ್ಲುತ್ತವೆ. ಜನ್‌ಧನ್ ಯೋಜನೆ ಮೂಲಕ ಫಲಾನುಭವಿಗಳಿಗೆ ಡಿಬಿಟಿ ಮೂಲಕ ನೇರವಾಗಿ ಅನುದಾನ ಸಿಗುವಂತೆ ಮಾಡಿದ್ದಾರೆ ಎಂದು ಬಣ್ಣಿಸಿದರು.

ಯೋಜನೆ ತಲುಪಿಸಿ: ಎರಡು ವರ್ಷದ ಕಾಂಗ್ರೆಸ್ ಅಧಿಕಾರದ ದರ್ಪ, ಸೊಕ್ಕು, ಅಹಂಕಾರ ಸಹಿಸಿದ್ದೀರಿ. ಆದರೆ ಮುಂದಿನ ಚುನಾವಣೆವರೆಗೂ ಮೋದಿ ಅವರ ನೇತೃತ್ವದ ಕೇಂದ್ರದ ಯೋಜನೆಗಳನ್ನು ಮನೆ ಮನೆಗೆ ತಲುಪಿಸಬೇಕು. ರಾಜ್ಯದಲ್ಲಿ ಯಡಿಯೂರಪ್ಪ, ಬೊಮ್ಮಾಯಿ, ಶೆಟ್ಟರ್ ಕಾಲದಲ್ಲಾದ ಕೆಲಸಗಳನ್ನು ನೆನಪಿಸಿಕೊಡಬೇಕು. ಇದರಿಂದ ಜಿಪಂ, ತಾಪಂ ಚುನಾವಣೆಗೂ ಅನುಕೂಲವಾಗುತ್ತದೆ. ಮುಂದೆ ಯಾರು ಶಾಸಕರು, ಸಂಸದರಾಗುತ್ತಾರೆ ಎನ್ನುವುದು ಮುಖ್ಯವಲ್ಲ. ಸಂಘಟನೆಯೊಂದೇ ನಮ್ಮ ಗುರಿಯಾಗಬೇಕು. ಎಲ್ಲಾ ಮುಖಂಡರೂ ಕಾರ್ಯಕರ್ತರನ್ನು ಗೌರವದಿಂದ ನಡೆಸಿಕೊಳ್ಳಬೇಕು ಎಂದು ವಿಜಯೇಂದ್ರ ಕಿವಿಮಾತು ಹೇಳಿದರು.


ಕಾರ್ಯಕ್ರಮದಲ್ಲಿ ಸಂಸದ ಯದುವೀರ್, ಶಾಸಕ ಶ್ರೀವತ್ಸ, ಬಿಜೆಪಿ ನಗರಾಧ್ಯಕ್ಷ ಎಲ್. ನಾಗೇಂದ್ರ, ಜಿಲ್ಲಾಧ್ಯಕ್ಷ ಕೆ.ಎನ್.ಸುಬ್ಬಣ್ಣ, ರಾಜ್ಯ ಉಪಾಧ್ಯಕ್ಷರಾದ ಎನ್.ಮಹೇಶ್, ಎಂ.ರಾಜೇಂದ್ರ, ಮಾಜಿ ಶಾಸಕರಾದ ಹರ್ಷವರ್ಧನ್, ನಿರಂಜನ್‌ಕುಮಾರ್, ಅಪ್ಪಚ್ಚು ರಂಜನ್, ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ, ಬಿಜೆಪಿ ಕೊಡಗು ಜಿಲ್ಲಾಧ್ಯಕ್ಷ ರವಿ ಕಾಳಪ್ಪ, ಹಾಸನ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಸೇರಿದಂತೆ ವಿವಿಧ ಜಿಲ್ಲೆಗಳ ಪದಾಧಿಕಾರಿಗಳು, ಮುಖಂಡರು, ಕಾರ್ಯಕರ್ತರು ಭಾಗವಹಿಸಿದ್ದರು.



ಮೈಸೂರಿನ ರಾಜೇಂದ್ರ ಕಲಾಮಂದಿರದಲ್ಲಿ ಭಾನುವಾರ ಆಯೋಜಿಸಿದ್ದ ಪ್ರಧಾನಿ ಮೋದಿ–11 'ಸರ್ವರಿಗೂ ಸಮಪಾಲು– ಸರ್ವರಿಗೂ ಸಮಬಾಳು' ಕಾರ್ಯಕ್ರಮ ಹಾಗೂ ಕಾರ್ಯಕರ್ತರ ಸಂಘಟನಾ ಸಭೆಯಲ್ಲಿ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಮಾತನಾಡಿದರು.

> **ಕೇಂದ್ರ ಹಾಗೂ ರಾಜ್ಯ ಮಟ್ಟದಲ್ಲಿರುವಂತೆ ಮೈಸೂರು, ಚಾಮರಾಜನಗರ ಭಾಗದಲ್ಲೂ ಪಕ್ಷ ಸಂಘಟನೆಯಾಗಬೇಕಿದೆ. ಹಳೇ ಮೈಸೂರು ಭಾಗದ ಎಲ್ಲಾ ವಿಧಾನಸಭಾ ಕ್ಷೇತ್ರಗಳನ್ನೂ ಗೆಲ್ಲಬೇಕಿದೆ. ಬಿಜೆಪಿ ಜವಾಬ್ದಾರಿಯುತ ಪಕ್ಷ ಎಂಬ ಅರಿವು ಪ್ರತೀ ಕಾರ್ಯಕರ್ತರಿಗೂ ಇದೆ. ರಾಜ್ಯದಲ್ಲಿ ಮತ್ತೆ ಕಮಲ ಅರಳಬೇಕಿದೆ.**
> -ಸಂಸದ ಯದುವೀರ್

ಕರಾಮುವಿಯಲ್ಲಿ ಬಾಬುಜಿ ಪುಣ್ಯಸ್ಮರಣೆ



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಡಾ.ಬಾಬು ಜಗಜೀವನ್ ರಾಮ್ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದಲ್ಲಿ ಮಾಜಿ ಉಪಪ್ರಧಾನಿ ಡಾ.ಬಾಬು ಜಗಜೀವನ್‌ರಾಮ್ ಅವರ 39ನೇ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಯಿತು. ಅಧ್ಯಯನ ಕೇಂದ್ರಗಳ ಡೀನ್ ಡಾ.ಎನ್.ಆರ್.ಚಂದ್ರೇಗೌಡ, ಡಾ.ಬಾಬು ಜಗಜೀವನ್ ರಾಮ್ ಅಧ್ಯಯನ ಪೀಠದ ನಿರ್ದೇಶಕಿ ಡಾ.ಆರ್.ಶರಣಮ್ಮ, ಸಹ ಪ್ರಾಧ್ಯಾಪಕ ಡಾ.ಜೆ.ಎಸ್.ಚಂದ್ರಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ಲಾಡ್ಜ್‌ನಲ್ಲಿ ಡೆತ್‌ನೋಟ್ ಬರೆದಿಟ್ಟು, ದಾವಣಗೆರೆ ಪಿಎಸ್‌ಐ ನೇಣಿಗೆ ಶರಣು

ತುಮಕೂರು, ಜು.6– ಕೌಟುಂಬಿಕ ಕಲಹದಿಂದ ಬೇಸತ್ತ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಒಬ್ಬರು ಲಾಡ್ಜ್‌ವೊಂದರಲ್ಲಿ ಡೆತ್‌ನೋಟ್ ಬರೆದಿಟ್ಟು ನೇಣಿಗೆ ಶರಣಾಗಿರುವ ಘಟನೆ ತುಮಕೂರು ನಗರದಲ್ಲಿ ನಡೆದಿದೆ. ದಾವಣಗೆರೆ ನಗರದ ಬಡಾವಣೆ ಪಿಎಸ್‌ಐ ನಾಗರಾಜಪ್ಪ (45) ಆತ್ಮಹತ್ಯೆ ಮಾಡಿಕೊಂಡವರು.



ಜು.1ರಂದು ಬೆಳಿಗ್ಗೆ 7 ಗಂಟೆಗೆ ದ್ವಾರಕಾ ಹೋಟೆಲ್‌ನ 4ನೇ ಮಹಡಿಯಲ್ಲಿ ರೂಮ್ ಬಾಡಿಗೆ ಪಡೆದಿದ್ದ ನಾಗರಾಜಪ್ಪ, ರೂಮ್‌ಗೆ ತೆರಳಿದ್ದಾಗಿನಿಂದ ಹೊರಗೆ ಬಂದಿರಲಿಲ್ಲ. ಲಾಡ್ಜ್ ಸಿಬ್ಬಂದಿ ಕರೆ ಮಾಡಿದರೂ ಅವರು ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ. ಲಾಡ್ಜ್‌ನಲ್ಲಿ ದುರ್ವಾಸನೆ ಬಂದಾಗ, ಸಿಬ್ಬಂದಿ ಮಾಲೀಕರಿಗೆ ಮಾಹಿತಿ ನೀಡಿದ್ದರು. ಬಾಗಿಲು ತೆರೆದು ನೋಡಿದಾಗ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಬೆಳಕಿಗೆ ಬಂದಿದೆ. ತದನಂತರ ಸುದ್ದಿ ತಿಳಿದು ತುಮಕೂರು ನಗರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕಳೆದ ನಾಲ್ಕು ದಿನಗಳ ಹಿಂದೆ ಅವರು ನೇಣಿಗೆ ಶರಣಾಗಿದ್ದು, ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ತುಮಕೂರು ಜಿಲ್ಲಾಸ್ಪತ್ರೆಯ ಶವಗಾರಕ್ಕೆ ರವಾನಿಸಲಾಗಿದೆ.

ನಾಗರಾಜಪ್ಪ ಆತ್ಮಹತ್ಯೆ ಮಾಡಿಕೊಂಡ ರೂಮ್‌ನಲ್ಲಿ ಡೆತ್ ನೋಟ್ ಪತ್ತೆಯಾಗಿದೆ. 2 ಪುಟಗಳ ಡೆತ್ ನೋಟ್‌ನಲ್ಲಿ 'ನನ್ನ ಸಾವಿಗೆ ನಾನೇ ಕಾರಣ'. ಕೌಟುಂಬಿಕ ಕಲಹಕ್ಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ ಎಂದು ಬರೆದಿದ್ದಾರೆ. ಅಲ್ಲದೇ ಹೋಟೆಲ್ ಮಾಲೀಕರಿಗೂ ಡೆತ್‌ನೋಟ್‌ನಲ್ಲಿ ಕ್ಷಮೆ ಕೇಳಿದ್ದಾರೆ.

ಬಾಬುಜಿ ಪುಣ್ಯಸ್ಮರಣೆ; ಜಿಲ್ಲಾಡಳಿತ ಗೌರವ ಸಮರ್ಪಣೆ



ಡಾ.ಬಾಬು ಜಗಜೀವನರಾಮ್ ಪುಣ್ಯಸ್ಮರಣೆ ಹಿನ್ನೆಲೆಯಲ್ಲಿ ಮೈಸೂರಿನ ರೈಲ್ವೆ ನಿಲ್ದಾಣದ ಬಳಿ ಇರುವ ಬಾಬುಜಿ ಪ್ರತಿಮೆಗೆ ಜಿಲ್ಲಾಡಳಿತದಿಂದ ಗೌರವ ಸಮರ್ಪಿಸಲಾಯಿತು. ಈ ವೇಳೆ ಶಾಸಕ ತನ್ವೀರ್ ಸೇಠ್, ವಿಧಾನಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ, ನಗರಪಾಲಿಕೆ ಸದಸ್ಯ ಶೇಖ್ ತನ್ವೀರ್ ಆಸಿಫ್ ಮತ್ತಿತರರು ಮಾಲಾರ್ಪಣೆ ಮಾಡಿದರು.

ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್‌ನಿಂದ ಮಕ್ಕಳಿಗಾಗಿ 'ಶಿಕ್ಷಣ ತಜ್ಞರಿಂದ ಮಾರ್ಗದರ್ಶನ'

ಮೈಸೂರು, ಜು.6– ಮೈಸೂರಿನ ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್ ವತಿಯಿಂದ ಮಕ್ಕಳಿಗಾಗಿ 'ಶಿಕ್ಷಣ ತಜ್ಞರಿಂದ ಮಾರ್ಗದರ್ಶನ' ಕಾರ್ಯಕ್ರಮವನ್ನು ವಿಜಯನಗರದ ಕೊಡಗು ಗೌಡ ಸಮುದಾಯ ಭವನದಲ್ಲಿ ಭಾನುವಾರ ಏರ್ಪಡಿಸಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿದ ಹಿರಿಯ ರಂಗ ಕಲಾವಿದೆ ಶ್ರೀಮತಿ ಗೀತಾ ಮೋಂಟಡ್ಕ ಮಾತನಾಡಿ, ಜ್ಞಾನ ಕೇವಲ ಪಠ್ಯಪುಸ್ತಕದಲ್ಲಿ ಇಲ್ಲ. ಅದು ಜೀವನದ ಅನುಭವ ಮತ್ತು ಕಲಾತ್ಮಕ ಅಭಿವ್ಯಕ್ತಿಯಲ್ಲೂ ಅಡಗಿರುತ್ತದೆ. ಮಕ್ಕಳು ಜ್ಞಾನವನ್ನು ಪಡೆದಂತೆ ಸೃಜನಶೀಲತೆ ಮತ್ತು ಭಾವನಾತ್ಮಕ ಪ್ರಬುದ್ಧತೆಯನ್ನು ಬೆಳೆಸಿಕೊಳ್ಳಬೇಕು. ಮಕ್ಕಳು ಕಲಿಕೆ ಜೊತೆಗೆ ಕಲೆ ಮತ್ತು ಸಂಸ್ಕೃತಿಯನ್ನು ಅಳವಡಿಸಿಕೊಂಡಾಗ ಸಂಪೂರ್ಣ ವ್ಯಕ್ತಿತ್ವ ವಿಕಸನ ಸಾಧ್ಯ ಎಂದು ತಮ್ಮ ಕಲಾ ಜೀವನವನ್ನು ಉದಾಹರಿಸಿ, ವಿವರಿಸಿದರು.

ಕುವೆಂಪು ಭಾಷಾಭಾರತಿ ಮಾಜಿ ಅಧ್ಯಕ್ಷರಾದ ಹಿರಿಯ ವಿದ್ವಾಂಸ ಡಾ. ಪ್ರಧಾನ ಗುರುದತ್ತ ಅವರು ಮಾತನಾಡಿ, ಜ್ಞಾನವು ದಾರಿ ದೀಪವಾದರೆ, ಪ್ರಬುದ್ಧತೆ ಆ ದೀಪವನ್ನು ಎಲ್ಲಿ ಮತ್ತು ಹೇಗೆ ಬಳಸಬೇಕು ಎಂಬುದನ್ನು ಕಲಿಸುತ್ತದೆ. ಮಕ್ಕಳು ಕೇವಲ ಅಂಕ ಗಳಿಸುವುದಲ್ಲದೆ, ನೈತಿಕ ಮೌಲ್ಯಗಳು, ಸಾಮಾಜಿಕ ಕಳಕಳಿ ಮತ್ತು ವಿಮರ್ಶಾತ್ಮಕ ಚಿಂತನೆಯನ್ನು ಬೆಳೆಸಿಕೊಳ್ಳಬೇಕು. ಕರ್ತವ್ಯ ಪ್ರಜ್ಞೆ ಮತ್ತು ವಿವೇಕ ಅತ್ಯಂತ ಮಹತ್ವದ್ದಾಗಿವೆ ಎಂದು ನಿದರ್ಶನಗಳೊಂದಿಗೆ ವಿವರಿಸಿದರು.

ಉದ್ಯಮಿ ಹಾಗೂ ರೋಟರಿ ಜಿಲ್ಲೆ 3181ರ ಮಾಜಿ ಜಿಲ್ಲಾ ಗವರ್ನರ್ ಎಚ್.ಆರ್. ಕೇಶವ್ ಮಾತನಾಡಿ, ಮಕ್ಕಳಲ್ಲಿ ಉದ್ಯಮಶೀಲತೆ ಮತ್ತು ನಾಯಕತ್ವ ಗುಣಗಳನ್ನು ಬೆಳೆಸುವುದು ಅಗತ್ಯವಾಗಿದೆ. ಜ್ಞಾನವನ್ನು ಬಳಸಿಕೊಂಡು ಸವಾಲುಗಳನ್ನು ಅವಕಾಶಗಳಾಗಿ ಪರಿವರ್ತಿಸಿಕೊಂಡು ಸಾಧಿಸಬೇಕು ಎಂದು ತಿಳಿಸಿದರು.

ನಗರ ಪಾಲಿಕೆ ಮಾಜಿ ಸದಸ್ಯ, ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್ ಹಾಗೂ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಕೆ.ವಿ.ಶ್ರೀಧರ ಮಾತನಾಡಿ, ಮಕ್ಕಳಿಗೆ ಉತ್ತಮ ಶಿಕ್ಷಣದ ಜೊತೆಗೆ ಸಮಾಜಮುಖಿ ಚಿಂತನೆಗಳನ್ನು ಬೆಳೆಸುವ ಅಗತ್ಯವಿದೆ. ವಿದ್ಯಾಭ್ಯಾಸದ ನಂತರ ಕೇವಲ ಉದ್ಯೋಗ ಅರಸದೆ, ಉದ್ಯೋಗ ಸೃಷ್ಟಿಸುವವರಾಗಬೇಕು. ಆ ಮೂಲಕ ಸಮಾಜಕ್ಕೆ ಕೊಡುಗೆ ನೀಡುವ ಪ್ರಬುದ್ಧ ವ್ಯಕ್ತಿಗಳಾಗಬೇಕು. ಈ ನಿಟ್ಟಿನಲ್ಲಿ ಮಕ್ಕಳಿಗೆ ಮಾರ್ಗದರ್ಶನ ಕಲ್ಪಿಸುವ ಉದ್ದೇಶದಿಂದಲೇ ಟ್ರಸ್ಟ್ ವತಿಯಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮಕ್ಕಳ ಸಮಗ್ರ ಅಭಿವೃದ್ಧಿಗೆ ನಿರಂತರವಾಗಿ ಶ್ರಮಿಸುವುದಾಗಿ ಘೋಷಿಸಿದರು.



ಮೈಸೂರಿನ ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ 'ಶಿಕ್ಷಣ ತಜ್ಞರಿಂದ ಮಾರ್ಗದರ್ಶನ' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಗಣ್ಯರು.

ಬಾಬುಜಿ ಪುಣ್ಯಸ್ಮರಣೆ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ನಡೆದ ಮಾಜಿ ಉಪಪ್ರಧಾನಿ ದಿವಂಗತ ಬಾಬು ಜಗಜೀವನ್ ರಾಮ್ ಅವರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಅವರ ಫೋಟೋಗೆ ಬಿಜೆಪಿ ಎಸ್ಸಿ ಘಟಕದ ಅಧ್ಯಕ್ಷ ವಿ.ಶೈಲೇಂದ್ರ, ಚಿತ್ರನಟ ಹಾಗೂ ಬಿಜೆಪಿ ಮುಖಂಡ ಎಸ್.ಜಯಪ್ರಕಾಶ್(ಜೆಪಿ), ಎಸ್ಸಿ ಘಟಕದ ಪದಾಧಿಕಾರಿಗಳಾದ ಕಾರ್ತಿಕ್, ಧರ್ಮರಾಜ್, ರಂಗಸ್ವಾಮಿ, ಅಶೋಕ್, ವಿಷ್ಣು, ಹನುಮಂತ ಗೌಡ ಮತ್ತಿತರರು ಪುಷ್ಪಾರ್ಚನೆ ಮಾಡಿದರು.

ದಲಿತರ ಸಾಮಾಜಿಕ, ಆರ್ಥಿಕ ಸಮಾನತೆಗಾಗಿ ಡಾ.ಬಾಬು ಜಗಜೀವನರಾಮ್ ಹೋರಾಟ ಸ್ಮರಣೀಯ

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಗುಣಗಾನ

ಮೈಸೂರು, ಜು.6– ದಲಿತರ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಗಾಗಿ ಡಾ.ಬಾಬು ಜಗಜೀವನರಾಮ್ ಅವರು ಹೋರಾಡಿದ್ದನ್ನು ಸ್ಮರಿಸಿಕೊಳ್ಳಬೇಕು ಎಂದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಹೇಳಿದರು.

ಹಸಿರು ಕ್ರಾಂತಿಯ ಹರಿಕಾರ, ರಾಷ್ಟ್ರನಾಯಕರಾದ ಡಾ.ಬಾಬು ಜಗಜೀವನರಾಮ್ ಪುಣ್ಯಸ್ಮರಣೆ ಹಿನ್ನೆಲೆಯಲ್ಲಿ ಮೈಸೂರಿನ ರೈಲ್ವೆ ನಿಲ್ದಾಣದ ಬಳಿ ಇರುವ ಡಾ.ಬಾಬು ಜಗಜೀವನರಾಮ್ ರವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಅವರು, ಡಾ.ಬಾಬು ಜಗಜೀವನರಾಮ್ ಅವರು ದಲಿತರ ಹಕ್ಕುಗಳಿಗಾಗಿ ಹೋರಾಡಿದ ಪ್ರಮುಖ ರಾಜಕೀಯ ವ್ಯಕ್ತಿತ್ವ ಎಂದು ಬಣ್ಣಿಸಿದರು.

ಭಾರತ ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ, ಸಂವಿಧಾನ ರಚನಾ ಸಭೆಯ ಸದಸ್ಯರೂ ಆಗಿದ್ದ ಬಾಬು ಜಗಜೀವನ್‌ರಾಮ್ ಅವರು ರಕ್ಷಣಾ ಸಚಿವರಾಗಿದ್ದ ವೇಳೆ ಭಾರತ ಮತ್ತು ಪಾಕಿಸ್ತಾನ ಯುದ್ಧದ ಸಂದರ್ಭದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ದಲಿತರ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಗೆ ಕ್ರಾಂತಿಕಾರಿ ಹೆಜ್ಜೆ ಇಟ್ಟಿದ್ದರು. ವಿಧಾನಸಭೆ, ಕೇಂದ್ರ ಶಾಸಕಾಂಗ, ಸಂಸತ್ತಿನಲ್ಲಿ ವಿವಿಧ ಇಲಾಖೆಗಳ ಸಚಿವರಾಗಿ ಕಾರ್ಯ ನಿರ್ವಹಿಸಿದ್ದ ರೀತಿ ಇಂದಿಗೂ ಅನುಕರಣೀಯ. ಸಂವಿಧಾನದ ರಚನೆಯಲ್ಲೂ ಅವರ ಪಾತ್ರವನ್ನು ನೆನೆಯಲೇಬೇಕು. ಕೃಷಿ ಸಚಿವರಾಗಿ ಪರಿಣಾಮಕಾರಿ ನಿಲುವುಗಳ ಮೂಲಕ ಹಸಿರು ಕ್ರಾಂತಿಯ ಹರಿಕಾರರಾದರು ಎಂದು ತಿಳಿಸಿದರು.

ಈ ವೇಳೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್, ಮಾಜಿ ಮೇಯರ್‌ಗಳಾದ ನಾರಾಯಣ್, ಟಿ.ಬಿ.ಚಿಕ್ಕಣ್ಣ, ಮೋದಾಮಣಿ, ಪುಷ್ಪಲತಾ ಚಿಕ್ಕಣ್ಣ, ಮುಖಂಡರಾದ ಶಿವಪ್ರಸಾದ್, ಮಂಜುನಾಥ್, ಡಾ.ನಾಗರಾಜು, ಸಿದ್ದರಾಜು, ಮೋಹನ್, ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.



ಡಾ.ಬಾಬು ಜಗಜೀವನರಾಮ್ ಪುಣ್ಯಸ್ಮರಣೆ ಹಿನ್ನೆಲೆಯಲ್ಲಿ ಅವರ ಪ್ರತಿಮೆಗೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾಲಾರ್ಪಣೆ ಮಾಡಿದರು.

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರು ಈ ಕೆಳಗೆ ಉದಾಹರಿಸಿರುವ ಷೆಡ್ಯೂಲ್ ಸ್ವತ್ತಿನ ಸಂಖ್ಯೆ 28-1-527-149ಬಿ, ವಾರ್ಡ್ ಸಂಖ್ಯೆ: 28, ನಿರ್ಧರಣಾ ಸಂಖ್ಯೆ: 28-91-ಎಲ್-9 ಎಲ್-9/1, ಮೂರನೇ ತಿರುವು, ಹಳ್ಳದಕೇರಿ, ಲಷ್ಕರ್ ಮೊಹಲ್ಲಾ, ಮೈಸೂರು (ಇಲ್ಲಿಂದ ಮುಂದೆ ಷೆಡ್ಯೂಲ್ ಸ್ವತ್ತು ಎಂದು ಸಂಬೋಧಿಸುವ) ಸ್ವತ್ತನ್ನು ಮೈಸೂರು ನಗರ, ಲಷ್ಕರ್ ಮೊಹಲ್ಲಾ, ಹಳ್ಳದಕೇರಿ, ಮನೆ ನಂ: 2891ರಲ್ಲಿ ವಾಸವಾಗಿರುವ ಶ್ರೀ ಉದಯವೀರ್ ಸಿಂಗ್ ರವರ ಮಗನಾದ ಶಂಕರ್ ಸಿಂಗ್ ವಿ. ರವರಿಂದ ಕ್ರಯಕ್ಕೆ ಪಡೆಯಲು ಇಚ್ಛಿಸಿರುತ್ತಾರೆ. ಮೂಲತ: ಷೆಡ್ಯೂಲ್ ಸ್ವತ್ತು ಶಿವಭಾರದ್ವಾಜ್ ಅಲಿಯಾಸ್ ಶಿವರಾಮಯ್ಯ ರವರಿಗೆ ದೊರೆಸ್ವಾಮಿ ಅಯ್ಯಂಗಾರ್ ರವರು ದಿನಾಂಕ: 03/02/1920ರ 1ನೇ ಪುಸ್ತಕದ ದಾಖಲೆ ಸಂಖ್ಯೆ 2620 ಪುಟ 368-371ರ ಸಂಪುಟ 545ರಂತೆ ಮಾರಾಟ ಮಾಡಿದ್ದು, ಶಿವಭಾರದ್ವಾಜ್ ರವರು ಎಂ.ಎಸ್. ಸತ್ಯನಾರಾಯಣ ರಾವ್ ರವರನ್ನು ಏಕೈಕ ವಾರಸುದಾರರನ್ನಾಗಿ ಬಿಟ್ಟು ಮರಣ ಹೊಂದಿದ್ದು, ನಂತರ ಸ್ವತ್ತಿನ ಖಾತೆಯನ್ನು ಎಂ.ಎಸ್. ಸತ್ಯನಾರಾಯಣ ರಾವ್ ರವರ ಹೆಸರಿಗೆ ವರ್ಗಾಯಿಸಲ್ಪಟ್ಟು, ದಿನಾಂಕ: 26/11/1992ರಂದು ಸತ್ಯನಾರಾಯಣ ರಾವ್ ರವರು ಶ್ರೀಮತಿ ಪದ್ಮಾವತಮ್ಮ, ಕು. ಭಾರತಿ ಮತ್ತು ಎಂ.ಎಸ್ ಶಿವಕುಮಾರ್ ರವರನ್ನು ವಾರಸುದಾರರನ್ನಾಗಿ ಬಿಟ್ಟು ಮರಣ ಹೊಂದಿರುತ್ತಾರೆ. ನಂತರದಲ್ಲಿ ಮೈಸೂರು ಮಹಾನಗರ ಪಾಲಿಕೆಯವರು ಎಂ.ಎಸ್. ಪದ್ಮಾವತಮ್ಮ ಎಂ.ಎಸ್ ಶಿವಕುಮಾರ್, ಎಂ.ಎಸ್. ಭಾರತಿ ಯವರ ಹೆಸರಿಗೆ ಜಂಟಿಯಾಗಿ ಖಾತೆ ವರ್ಗಾಯಿಸಲ್ಪಟ್ಟು, ದಿನಾಂಕ: 18/08/2003ರಂದು ಮತ್ತು 20/07/2004ರಂದು ಪದ್ಮಾವತಮ್ಮ ಮತ್ತು ಎಂ.ಎಸ್ ಭಾರತಿ ಯವರು ಕ್ರಮವಾಗಿ ಎಂ.ಎಸ್. ಶಿವಕುಮಾರ್ ರವರನ್ನು ಏಕೈಕ ವಾರಸುದಾರರನ್ನಾಗಿ ಬಿಟ್ಟು ಮರಣ ಹೊಂದಿರುತ್ತಾರೆ. ದಿನಾಂಕ: 13/01/2021ರಂದು ಎಂ.ಎಸ್ ಶಿವಕುಮಾರ್ ರವರು ನೋಂದಾಯಿತ ಹಕ್ಕು ಖುಲಾಸೆ ಪತ್ರವನ್ನು ಶಂಕರ ಸಿಂಗ್ ವಿ. ರವರಿಗೆ ಮೈಸೂರು ಪೂರ್ವ ಉಪ ನೋಂದಾಣಾಧಿಕಾರಿಗಳ ಕಚೇರಿಯ ದಸ್ತಾವೇಜು ಸಂಖ್ಯೆ: ಎಂವೈಇ-1-08891-2020-2021ರ ಸಿಡಿ ಸಂಖ್ಯೆ: ಎಂವೈಇಡಿ623ರಂತೆ ವರ್ಗಾಯಿಸಲ್ಪಟ್ಟು ಅಂದಿನಿಂದ ಇಂದಿನವರೆಗೆ ಸ್ವತ್ತಿನ ಸ್ವಾಧೀನಾನುಭವದಲ್ಲಿ ಮೈಸೂರು ಮಹಾನಗರ ಪಾಲಿಕೆಯಿಂದ ಖಾತೆ ವರ್ಗಾಯಿಸಿಕೊಂಡು ಅನುಭೋಗದಲ್ಲಿರುತ್ತಾರೆ.

ಮೇಲೆ ಹೇಳಿದ ಕ್ರಯಕ್ಕೆ ಶಂಕರ್ ಸಿಂಗ್ ವಿ. ರವರ ಪ್ರತಿನಿಧಿಗಳಾಗಲಿ, ಯಾ ಎಂ.ಎಸ್ ಶಿವಕುಮಾರ್ ರವರ ವಾರಸುದಾರರಾಗಲಿ, ಯಾ ಎಂ.ಎಸ್ ಸತ್ಯನಾರಾಯಣ ರಾವ್, ಎಂ.ಎಸ್ ಪದ್ಮಾವತಮ್ಮ, ಎಂ.ಎಸ್ ಭಾರತಿ, ಯಾ ಶಿವರಾಮಯ್ಯ ರವರ ಇತರೆ ವಾರಾಸುದಾರರಾಗಲಿ ಯಾರಾದರೂ ಇದ್ದಲ್ಲಿ ಇತರೆ ಸಾರ್ವಜನಿಕರಾಗಲಿ, ಬೇರೆ ಯಾರಾದರೂ ಆಸಕ್ತಿ ಮತ್ತು ಕ್ರಯದ ಕರಾರು, ಜಪ್ತಿ, ಆದೇಶಗಳು ಇದ್ದಲ್ಲಿ ಈ ಕೆಳಗೆ ನಮೂದಿಸಿರುವ ವಕೀಲರ ಕಛೇರಿಗೆ ತಕರಾರನ್ನು ಪತ್ರಿಕಾ ಪ್ರಕಟಣೆಯಾದ 7 ದಿನಗಳೊಳಗಾಗಿ ಸಂಬಂಧಪಟ್ಟ ದಾಖಲೆಯೊಂದಿಗೆ ಕಳುಹಿಸಿ ಕೊಡಬೇಕಾಗಿ ನೀಡಿರುವ ಪ್ರಕಟಣೆ. ಒಂದು ವೇಳೆ ಯಾವುದೇ ತಕರಾರು ಬಾರದಿದ್ದಲ್ಲಿ ನಮ್ಮ ಕಕ್ಷಿದಾರರು ಸ್ವತ್ತನ್ನು ಕ್ರಯಕ್ಕೆ ಪಡೆಯುತ್ತಾರೆ. ನಂತರದಲ್ಲಿ ಬರುವ ತಕರಾರನ್ನು ಮಾನ್ಯ ಮಾಡುವುದಿಲ್ಲವೆಂದು ತಿಳಿಯಬಯಸುತ್ತೇವೆ.

ಅನುಸೂಚಿ: ಮೈಸೂರು ನಗರ, ಲಷ್ಕರ್ ಮೊಹಲ್ಲಾ, ಹಳ್ಳದಕೇರಿ, ಮೂರನೇ ತಿರುವಿನ ಸ್ವತ್ತಿನ ಸಂಖ್ಯೆ: 28-1-527-149ಬಿ ವಾರ್ಡ್ ಸಂಖ್ಯೆ: 28, ಸ್ವತ್ತಿನ ಹಳೆ ಸಂಖ್ಯೆ: 2891-ಎಲ್-9 1-9/ಎಲ್, ಸುತ್ತಳತೆ ಪೂರ್ವ ಪಶ್ಚಿಮ 10.363221 ಮೀಟರ್, ಉತ್ತರ ದಕ್ಷಿಣ 9.753620 ಮೀಟರ್ ಒಟ್ಟು 101.0789 ಚದರ ಮೀಟರ್ ಇದಕ್ಕೆ ಚೆಕ್ಕುಬಂಧಿ :ಪೂರ್ವಕ್ಕೆ: ಶ್ರೀ ವೆಂಕಟರಾಯರ ಮನೆ, ಪಶ್ಚಿಮಕ್ಕೆ ಗಲ್ಲಿ, ದಕ್ಷಿಣಕ್ಕೆ 20 ಅಡಿ ರಸ್ತೆ, ಉತ್ತರಕ್ಕೆ: ಶ್ರೀ ಗಣೇಶರಾಯರ ಮನೆ.

ಸಹಿ/– (ಸುಬ್ರಮಣ್ಯ ಜೆ) ವಕೀಲರು,
ಕಛೇರಿ: 890/4, ಮೊದಲನೇ ಮಹಡಿ ಮೂರನೇ ಹಂತ, 1ನೇ ಮೈನ್, ಲಕ್ಷ್ಮೀಪುರಂ,
ಮೈಸೂರು-570004 ಮೊ: 9844154581

ನಕ್ಕರೆ ಅದೇ ಸ್ವರ್ಗ

ಮಗು : ಪಪ್ಪಾ ನಾ ಶಾಲೆಗೆ ಹೋಗೋದಿಲ್ಲಾ ಜಾಬ್ ಮಾಡ್ತೀನಿ.
ಅಪ್ಪ : ನೀನು ಓದಿರೋ ಯುಕೆಜಿಗೆ ಏನ್ ಕೆಲ್ಸ ಮಾಡ್ತೀಯಾ?
ಮಗು : ಎಲ್‌ಕೆಜಿ ಹುಡುಗಿಯರಿಗೆ ಟ್ಯೂಷನ್ ಮಾಡ್ತೀನಿ.

ಮೈಸೂರು ಮಿತ್ರ
ಸೋಮವಾರ, 7 ಜುಲೈ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

'ನಾವು ನಮ್ಮನ್ನು ಹುರಿದುಂಬಿಸುವ ವಿಷಯಕ್ಕಿಂತಲೂ ನಮ್ಮನ್ನು ಭಯಭೀತರಾಗಿಸುವ ವಿಷಯದ ಬಗ್ಗೆಯೇ ಹೆಚ್ಚು ಯೋಚಿಸುತ್ತೇವೆ. ಇದೇ ನಮ್ಮನ್ನು ಹಿಂದೆ ಉಳಿಸುತ್ತದೆ.

– ಅನಾಮಿಕ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ದರಿದ್ರಕ್ಕೆ ಹೊಟ್ಟೆ ಹೆಚ್ಚು'

ನಿಮ್ಮ ಪತ್ರಗಳು

■ ಹೃದಯದ ವಿಷಯ ಎಲ್ಲರೂ ತಿಳಿದಿರಬೇಕು

ಮಾನ್ಯರೆ,

ಹೃದಯದ ಬೇನೆ ವಯಸ್ಸಿನ ಅಂತರವಿಲ್ಲದೆ ಎಲ್ಲರ ಜೀವಕ್ಕೆ ಲಗ್ಗೆ ಇಟ್ಟಿದೆ. ಇಂದು ಮನೆಯಿಂದ ಹೊರ ಹೋದವರು ಮನೆಗೆ ಬರುವ ತನಕ ಆತಂಕ ಇರುತ್ತದೆ. ಇತ್ತ ಶಾಲಾ ಕಾಲೇಜು ಮಕ್ಕಳನ್ನು ಬಿಟ್ಟಿಲ್ಲ. ಈ ಸಂದರ್ಭದಲ್ಲಿ ಹೃದಯದ ಆರೋಗ್ಯದ ಬಗ್ಗೆ ಪ್ರತಿ ಶಾಲಾ ಕಾಲೇಜುಗಳಲ್ಲಿ ಜಾಗೃತಿ ಮೂಡಿಸಬೇಕು. ಒಮ್ಮೆ ಪೋಷಕರ ಗಮನಕ್ಕೆ ಬರದ ವಿಷಯ ಶಾಲೆಯಲ್ಲಿ ಹೃದಯದ ತಪಾಸಣೆ ಮಾಡುವುದರಿಂದ ತಿಳಿಯುತ್ತದೆ. ಆಟದ ಸಮಯವನ್ನು ಬೆಳಗಿನ ಸಮಯ 10 ಗಂಟೆಗೆ ಮೀಸಲಿಡಬೇಕು. ಇದರಿಂದ ಮಕ್ಕಳಿಗೆ ಹೊಟ್ಟೆ ತುಂಬಿರುವುದರಿಂದ ಆಟದಲ್ಲಿ ಆಸಕ್ತಿ ಬರುತ್ತದೆ. ದೇಹ ದಣಿಯುವುದಿಲ್ಲ. ದೇಹವು ನಿರ್ಜಲ ಹಾಗೆ ನೀರನ್ನು ಮಕ್ಕಳಿಗೆ ಕುಡಿಯಲು ಪ್ರೋತ್ಸಾಹಿಸಬೇಕು. ಅನಿರೀಕ್ಷಿತವಾಗಿ ಹೃದಯಾಘಾತವಾದಾಗ ಪ್ರಥಮ ಚಿಕಿತ್ಸೆಯನ್ನು ಎಲ್ಲರಿಗೂ ಕಲಿಸಿರಬೇಕು. ಇದಕ್ಕೆ ವಯಸ್ಸಿನ ಅಂತರವಿಲ್ಲ. ಇದರಿಂದ ಜೀವವನ್ನು ಯಾವ ಸಂದರ್ಭದಲ್ಲಿ ಆದರೂ ಉಳಿಸಲು ಪ್ರಯತ್ನ ಪಡಬಹುದು. ಇಂದಿನ ಸಂದರ್ಭ ಹೃದಯದ ವಿಷಯಕ್ಕೆ ಮಹತ್ವ ನೀಡಬೇಕು. ಎಲ್ಲೆಲ್ಲಿ ಹೃದಯದ ತಜ್ಞರಿದ್ದಾರೆ ಎಂಬ ವಿಷಯವನ್ನು ಅರಿತಿರಬೇಕು. ಪ್ರತಿಯೊಬ್ಬರೂ ಈ ವಿಷಯದ ಬಗ್ಗೆ ತಿಳುವಳಿಕೆ ಇದ್ದರೆ ಅನೇಕ ಸಾವು ನೋವುಗಳು ತಪ್ಪಿದಂತಾಗುತ್ತದೆ. ಇದರ ಬಗ್ಗೆ ಪ್ರತಿಯೊಬ್ಬರು ಆಲೋಚಿಸಬೇಕು.

– ಎಂ.ಎಸ್. ಉಷಾಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

■ ತಂದೆ–ತಾಯಿಯನ್ನು ನೋಡದಿರುವ ಮನಸುಗಳು ಇರುವುದು ಶೋಚನೀಯ

ಮಾನ್ಯರೇ,

ತ್ರೇತಾಯುಗದಲ್ಲಿ ಮಾತಾ–ಪಿತೃಗಳ ಪರಿಪಾಲನೆಯನ್ನು ರಾಮಾಯಣದ ಪುರುಷೋತ್ತಮ ಶ್ರೀ ರಾಮ ತೋರಿಸಿಕೊಟ್ಟಿದ್ದಾರೆ. ಇನ್ನು ಶ್ರವಣ ಕುಮಾರ ತಂದೆ–ತಾಯಿ ಕುರುಡರಾಗಿದ್ದು, ವಯೋವೃದ್ದರಾಗಿದ್ದರೂ ಕೂಡ ಇವರೇ ಶ್ರವಣ ಕುಮಾರನ ಸರ್ವಸ್ವವಾಗಿದ್ದರು. ಮಾತಾ–ಪಿತೃಗಳ ಸೇವೆಯೇ ದೇವರ ಸೇವೆ ಎಂದು ಅವರ ಆಸೆಯಂತೆ ತೀರ್ಥಯಾತ್ರೆಗೆ ತಕ್ಕಡಿಯ ಮೂಲಕ ಹೊತ್ತುಕೊಂಡು ಹೋದದ್ದು. ಇಂದಿಗೂ ಮಾದರಿಯ ಮಗನ ಕಥೆಯಾಗಿ ಮಕ್ಕಳಿಗೆ ಹೇಳುತ್ತಾರೆ.

ಇಂತಹ ಭರತ ಖಂಡದಲ್ಲಿ ಇತ್ತೀಚಿನ ದಿನಗಳಲ್ಲಿ ಕೆಲವರು ತಮ್ಮ ವಯಸ್ಸಾದ ತಂದೆ–ತಾಯಂದಿರ ಯೋಗಕ್ಷೇಮ, ಅವರ ಆರೋಗ್ಯವನ್ನು ನೋಡಿಕೊಳ್ಳದೆ ವೃದ್ಧಾಶ್ರಮಗಳಿಗೆ ಬಿಟ್ಟು ಬರುವುದು ಅಲ್ಲಲ್ಲಿ ನೋಡಿದ್ದೇವೆ. ಹೆತ್ತ ತಂದೆ ತಾಯಂದಿರು ಹೊಟ್ಟೆ–ಬಟ್ಟೆ ಕಟ್ಟಿ ತಮ್ಮ ಮಕ್ಕಳನ್ನು ಸಾಕಿ ಬೆಳೆಸಿ ತಮ್ಮ ವಯಸ್ಸಾದ ಕಾಲಕ್ಕೆ ನಮಗೆ ಆಸರೆಯಾಗಿ ನಿಲ್ಲುತ್ತಾರೆ ಎಂಬ ಭರವಸೆಯಲ್ಲಿ ಇರುತ್ತಾರೆ. ಆದರೆ ಈ ಮಕ್ಕಳು ಅವರಿಂದ ದೂರ ಸರಿದು ಬೇರೆ ವಾಸಿಸುವ ಮೂಲಕ ಆ ವಯಸ್ಸಾದ ಮನಸುಗಳಿಗೆ ಮತ್ತಷ್ಟು ದುಃಖವನ್ನು ಕೆಲವರು ಕೊಡುತ್ತಾರೆ.

ಮತ್ತೊಂದು ಕಡೆಗಳಲ್ಲಿ ಬೆಳೆದ ಮಕ್ಕಳು ದೊಡ್ಡ ಉದ್ಯೋಗದಲ್ಲಿ ದೊಡ್ಡ ನಗರಗಳಲ್ಲಿ ದೊಡ್ಡ ನೌಕರಿಗಳನ್ನು ಮಾಡುತ್ತಾ ತಮ್ಮ ಐಷಾರಾಮಿ ಬದುಕನ್ನು ಹೆಂಡತಿ ಮಕ್ಕಳೊಂದಿಗೆ ಕಳೆಯುತ್ತಾರೆ. ಇನ್ನು ಕೆಲವರು ತಮ್ಮ ಊರಲ್ಲಿರುವ ತಂದೆ–ತಾಯಿಗಳನ್ನು ನೋಡಲು ಕೂಡ ಬರದೇ ಇರುವಂತಹ ಕೆಲವು ಉದಾಹರಣೆಗಳಿವೆ.

ಕೆಲವರಂತೂ ತಿಂಗಳಿಗಾಗಲೇ ವಾರಕ್ಕೆ ಒಮ್ಮೆಯಾದರೂ ತಂದೆ ತಾಯಿಗಳನ್ನು ನೋಡದೆ ತಮ್ಮ ಬದುಕನ್ನು ಸಾಗಿಸುತ್ತಾರೆ.

ಶ್ರೀರಾಮ ಮತ್ತು ಶ್ರವಣ ಕುಮಾರ ಹುಟ್ಟಿದ ಖಂಡದಲ್ಲಿ ಇಂತಹ ಮನಸ್ಥಿತಿಗಳಿರುವುದು ಶೋಚನೀಯ ಅಲ್ಲವೇ.

– ಪಿ.ಸಿ. ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು.

■ ಸರ್ಕಾರ ಹಳಿ ತಪ್ಪುತ್ತಿದೆಯೇ?

ಮಾನ್ಯರೆ,

ಆಡಳಿತಾರೂಢ ಕಾಂಗ್ರೆಸ್ ಪಕ್ಷದಲ್ಲಿ ನಡೆಯುತ್ತಿರುವ ರಾಜಕೀಯ ವಿದ್ಯಮಾನಗಳು ದಿನೇ ದಿನೆ ವಿಭಿನ್ನ ತಿರುವುಗಳನ್ನು ಪಡೆಯುತ್ತಿವೆ.

ಆಡಳಿತ ಪಕ್ಷದ ಹಿರಿಯ ಶಾಸಕರಾದ ಬಿ.ಆರ್.ಪಾಟೀಲ್, ರಾಜು ಕಾಗೆ ಮುಂತಾದವರು ನೀಡುತ್ತಿರುವ ಹೇಳಿಕೆಗಳು ಸುಗಮ ಆಡಳಿತಕ್ಕೆ ಮುಳ್ಳಾಗಿ ಪರಿಣಮಿಸಿದೆ. ಬಹುಮುಖ್ಯವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮುಂದಿನ ಅಕ್ಟೋಬರ್ ವೇಳೆಗೆ ಬದಲಾಗಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಲಿದ್ದಾರೆಂಬ ಗುಲ್ಲು ರಾಜ್ಯಾದ್ಯಂತ ಹರಡಿದೆ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಸ್ವತಃ ಸ್ಪಷ್ಟನೆ ನೀಡಿ, ಐದು ವರ್ಷ ಪೂರೈಸುವವರೆಗೆ ತಾವೇ ಮುಖ್ಯಮಂತ್ರಿಯಾಗಿ ಮುಂದುವರೆಯುವುದಾಗಿ ಹೇಳಿದ್ದಾರೆ. ಆದರೂ ಸಹ, ಊಹಾಪೋಹಗಳು ದಿನೇ ದಿನೆ ಹೆಚ್ಚುತ್ತಿದೆ.

ರಾಜ್ಯದ ಉಸ್ತುವಾರಿ ಸುರ್ಜೇವಾಲ ರಾಜ್ಯಕ್ಕೆ ಆಗಮಿಸಿ, ಶಾಸಕರ ಅಭಿಪ್ರಾಯ ಆಲಿಸಿರುವುದು, ನಾಯಕತ್ವ ಬದಲಾವಣೆಯ ಸೂಚನೆ ಎಂದೇ ಅರ್ಥೈಸಲಾಗುತ್ತಿದೆ. ಇದು ರಾಜ್ಯದ ಆಡಳಿತದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಹುದು. ಮತ್ತೊಂದು ಕಡೆ, ಇಂತಹ ಹೇಳಿಕೆಗಳು ವಿರೋಧ ಪಕ್ಷಗಳ ಕೈಗೆ ಸಿಕ್ಕ ಬ್ರಹ್ಮಾಸ್ತ್ರವಾಗಿ ಪರಿಣಮಿಸಿದೆ ಇಂತಹ ಸಂದರ್ಭದಲ್ಲಿ ಆಡಳಿತಶಾಹಿಯ ಮೇಲೆ ಸರ್ಕಾರದ ನಿಯಂತ್ರಣ ತಪ್ಪಿ ಅಂತಿಮವಾಗಿ ಸರ್ಕಾರದ ಯೋಜನೆಗಳು ದಿಕ್ಕು ತಪ್ಪಬಹುದು. ಈ ಬಗ್ಗೆ ಕಾಂಗ್ರೆಸ್ ವರಿಷ್ಠ ಮಂಡಳಿ ತುರ್ತು ಕ್ರಮ ತೆಗೆದುಕೊಂಡು ಪಕ್ಷದ ಸರ್ಕಾರವನ್ನು ಸರಿಯಾದ ದಿಕ್ಕಿನಲ್ಲಿ ಮುನ್ನಡೆಸಬೇಕಾಗಿದೆ.

– ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

■ ಜೀವನ ಮತ್ತು ಇಂಧನ

ಮಾನ್ಯರೆ,

ನೈಸರ್ಗಿಕ ಸಂಪನ್ಮೂಲವಾದ ಇಂಧನವು ನಾಗರಿಕ ಸಮಾಜದ ಚಟುವಟಿಕೆಗಳಿಗೆ ಮೂಲಾಧಾರವಾಗಿದೆ. ಮಿತವಾದ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸದೆ ದುರಾಸೆಯಿಂದ ಬಳಸುತ್ತಿರುವುದು ಮಾನವ ಸಮಾಜಕ್ಕೆ ಹಾನಿಕಾರಕ.ಮುಂದಿನ ಪೀಳಿಗೆಗೆ ನೈಸರ್ಗಿಕ ಸಂಪನ್ಮೂಲಗಳನ್ನು ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿ. ಜೈವಿಕ ಇಂಧನವನ್ನು ತೀರಿ ಹೋಗುತ್ತಿರುವ ನೈಸರ್ಗಿಕ ಇಂಧನದ ಪರ್ಯಾಯವಾಗಿ ಬಳಸಬೇಕಾದ ಅವಶ್ಯಕತೆ ಇದೆ.ಇಂಧನ ಇಲ್ಲದಿದ್ದ ಪರಿಸ್ಥಿತಿಯಲ್ಲಿ ನಾಗರಿಕ ಸಮಾಜ ಮುಂದುವರಿಯಲು ಸಾಧ್ಯವಿಲ್ಲ. ಭೂಮಿಯ ಮೇಲೆ ಮನುಷ್ಯನ ಎಲ್ಲಾ ಚಟುವಟಿಕೆಗಳು ಇಂಧನದ ಮೇಲೆ ಅವಲಂಬಿತವಾಗಿದೆ. ಇಂಧನ ನಾಶದಿಂದ ನಾಗರಿಕತೆ ಕುಸಿಯುವ ದುರಂತ ಕಣ್ಮುಂದೆ ಇದೆ. ಇದರಿಂದ ಹೊರ ಬರಲು ಜೈವಿಕ ಇಂಧನ ಬಹುಮುಖ್ಯ ಸಾಧನವಾಗುತ್ತದೆ.

– ಚೇತನ್ ಎನ್.ಆರ್, ನಗರ್ಲೆ, ನಂಜನಗೂಡು.



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ಅತಿಥಿಗಳಿಗೆ ಮನೆ–ಮನ ತೆರೆದಿರಲಿ...!

ಭಾರತೀಯ ಪರಂಪರೆಯಲ್ಲಿ ಅತಿಥಿಗಳಿಗೆ ಹೆಚ್ಚಿನ ಆದ್ಯತೆ ಇದೆ. ಅತಿಥಿಯನ್ನು ದೇವರಿಗೆ ಹೋಲಿಸುವಷ್ಟು ಹೃದಯ ವೈಶಾಲ್ಯತೆಯನ್ನು ಹೊಂದಿರುವವರು ನಾವು. ಅತಿಥಿಗಳಿಗೆ ಒದಗಿಸಿದ ಸೇವೆಯು ದೇವರಿಗೆ ಸಲ್ಲಿಸಿದ ಸೇವೆಗೆ ಸಮ ಎಂದು ನಂಬಿರುವವರು. ಆ ಕಾರಣಕ್ಕೆ 'ಅತಿಥಿ ದೇವೋ ಭವ' ಎಂಬ ಮಾತು ಹುಟ್ಟಿಕೊಂಡಿದೆ. ಆತಿಥ್ಯ ಮನೆಯ ಒಂದು ಸಂಸ್ಕೃತಿಯ ಭಾಗವೇ ಆಗಿದೆ. ದೇವರ ಮೂರ್ತಿಯ ಮುಂದೆ ಇರಿಸುವ ನೈವೇದ್ಯವನ್ನು ದೇವರು ಸ್ವೀಕರಿಸುತ್ತಾನೆ ಎಂದು ನಂಬಿ ಸಮಾಧಾನ ಹೊಂದುವಂತೆ ಅತಿಥಿಗಳಿಗೆ ನೀಡುವ ಆತಿಥ್ಯವನ್ನು ಅವರು ಸ್ವೀಕರಿಸಿದಾಗ ಒಂದು ಧನ್ಯತೆಯ ಭಾವ ಮೂಡುತ್ತದೆ. ಅದೊಂದು ಅವರ್ಣನೀಯ ತೃಪ್ತಿಯನ್ನು ನೀಡುತ್ತದೆ.

ಕೆಲವರು ಮನೆಗೆ ಬರುವ ಅತಿಥಿಗಳಿಗೆ ಬಗೆ ಬಗೆಯ ತಿಂಡಿ–ತಿನಿಸುಗಳನ್ನು ಮಾಡಿ, ಅವರಿಗಿಷ್ಟವಾದ ಭಕ್ಷ್ಯಭೋಜನವನ್ನು ಸಿದ್ಧಪಡಿಸಿ ಬಡಿಸಿ, ಅವರ ಶಯನಕ್ಕೆ ಉತ್ತಮ ಸೌಲಭ್ಯ ಕಲ್ಪಿಸಿ ಒಂದು ಕೃತಾರ್ಥ ಭಾವ ಅನುಭವಿಸುತ್ತಾರೆ. ಅತಿಥಿಗಳ ಸಂತೋಷವೇ ತಮ್ಮ ಸಂತೋಷ ಎನ್ನುತ್ತಾರೆ. ಮನೆಗೆ ಬಂದ ಅತಿಥಿಗಳಿಗೆ ಕಿಂಚಿತ್ತೂ ಕೊರತೆಯಾಗದಂತೆ ನೋಡಿಕೊಳ್ಳುವವರು ಅತಿಥಿಗಳಿಗೆ ಅವರ ಭೇಟಿ ಒಂದು ಸ್ಮರಣೀಯ ದಿನಗಳಲ್ಲಿ ಒಂದಾಗುವಂತೆ ನೋಡಿಕೊಳ್ಳುತ್ತಾರೆ. ಇದು ಸ್ನೇಹ ಸಂಬಂಧಗಳ ನಡುವ ಉತ್ತಮ ಬಾಂಧವ್ಯವನ್ನು ವೃದ್ಧಿಸುತ್ತದೆ. ಅಷ್ಟೇ ಅಲ್ಲ ಮಾನಸಿಕ ಸ್ವಾಸ್ಥ್ಯವನ್ನು ಉತ್ತಮಗೊಳಿಸಲು ಅತಿಥಿ ಸತ್ಕಾರ ನೆರವಾಗುತ್ತದೆ.

ಅತಿಥಿ ಸತ್ಕಾರ ಮಾಡಲು ಮನೆಗಳು ದೊಡ್ಡದಾಗಿದ್ದರೆ ಸಾಲದು, ಮನೆಯಲ್ಲಿರುವ ಮಂದಿಯ ಮನಸ್ಸು ಸಹ ದೊಡ್ಡದಾಗಿರಬೇಕು. ಎಷ್ಟೋ ಜನರ ಮನೆಯಲ್ಲಿ ಆತಿಥ್ಯ ನೀಡಲು ಸಕಲ ವ್ಯವಸ್ಥೆ ಇದ್ದರೂ, ಅತಿಥಿಗಳಿಗೆ ಸಕಾಲದಲ್ಲಿ ಸರಿಯಾದ ಸತ್ಕಾರ ದೊರೆಯುವುದಿಲ್ಲ. ಆ ಕಾರಣಕ್ಕೆ ಇರಬೇಕು 'ಬಡವರ ಮನೆ ಊಟ ಚೆಂದ, ಶ್ರೀಮಂತರ ಮನೆ ನೋಟ ಚೆಂದ' ಎಂಬ ಗಾದೆ ಮಾತು ಹುಟ್ಟಿರುವುದು. ಕೆಲವರಿಗೆ ಬಗೆಬಗೆಯ ಅಡುಗೆ ಮಾಡಿ ಅತಿಥಿಗಳಿಗೆ ಬಡಿಸಿ ಖುಷಿ ಸಿಕ್ಕರೆ, ಮತ್ತೆ ಕೆಲವರು ಮಾಡಿರುವುದನ್ನು ಉಳಿಸಿ ಖುಷಿ ಪಡುತ್ತಾರೆ. ಅದಕ್ಕೂ ಒಂದು ಗಾದೆ ಇದೆ, 'ಅಕ್ಕಿ ಮೇಲೆ ಆಸೆ, ನೆಂಟರ ಮೇಲೆ ಪ್ರೀತಿ' ಎಂದು. ಇವರು ಪರವಾಗಿಲ್ಲ, ಇನ್ನೂ ಕೆಲವು ಮಂದಿ ಇರುತ್ತಾರೆ, ಅವರು ಮನೆಗೆ ಬಂದ ಅತಿಥಿಗಳನ್ನು ಮನೆ ಒಳಗೆ ಕರೆಯದೆ ಇರುವಷ್ಟು ಸಂಕುಚಿತ ಮನೋಭಾವ ಹೊಂದಿರುತ್ತಾರೆ. ತಮ್ಮ ಮನೆ ಎಂಬ ಭದ್ರ ಕೋಟೆಗೆ ಯಾರೊಬ್ಬರಿಗೂ ಪ್ರವೇಶ ನೀಡಲು ಬಯಸುವುದಿಲ್ಲ. ಮತ್ತೆ ಕೆಲವರು ಮನಃಪೂರ್ವಕವಾಗಿ ಆತಿಥ್ಯ ನೀಡಲು ಬಯಸದಿದ್ದರೂ, ತಮ್ಮ ಮನೆಯ ಪ್ರತಿಷ್ಠೆ ಮೆರೆಯಲು ಆತಿಥ್ಯವನ್ನು ನೀಡುವ ಉಮೇದಿನಲ್ಲಿರುತ್ತಾರೆ.

ಹಿಂದೆ ಅತಿಥಿ ಸತ್ಕಾರದ ರೀತಿ ರಿವಾಜುಗಳು ವಿಶೇಷವಾಗಿರುತ್ತಿದ್ದವು. ಮನೆಗೆ ಬಂದವರನ್ನು 'ಈಗ ಬಂದ್ರಾ?' ಎಂದು ಅಕ್ಕರೆಯ ನುಡಿಗಳನ್ನು ಆಡುತ್ತಿದ್ದರು. ಅನೇಕರು ಪಾದರಕ್ಷೆ ಧರಿಸದೇ ಇದ್ದ ಕಾರಣಕ್ಕೋ ಏನೋ, ಮನೆಗೆ ಬಂದ ಅತಿಥಿಗಳಿಗೆ ಮೊದಲು 'ಕಾಲು ತೊಳೆಯಿರಿ' ಎನ್ನುತ್ತಿದ್ದರು. ಸಾಮಾನ್ಯವಾಗಿ ಮನೆಯ ಹೆಣ್ಣುಮಕ್ಕಳು. ಹೆಂಗಸರು ಕಾಲು ತೊಳೆಯಲು ನೀರು ನೀಡುತ್ತಿದ್ದರು. ಅವರನ್ನು ಸೂಚಿತ ಜಾಗದಲ್ಲಿ ಚಾಪೆಯ ಮೇಲೋ/ಕುರ್ಚಿಯ ಮೇಲೋ ಕೂರಿಸಿ, ಮರು ಮಾತನಾಡದೇ ಹೋಗುತ್ತಿದ್ದುದು ಅಡುಗೆ ಕೋಣೆಗೆ. ಸಮಯಕ್ಕೆ ಸರಿಯಾಗಿ ಕಾಫಿ/ಟೀ ಅಥವಾ ಜ್ಯೂಸ್ ಸಿದ್ಧಪಡಿಸುತ್ತಿದ್ದರು. ಈಗಿನ ಕಾಲದ ಹಾಗೆ ಶುಗರ್ ಅಥವಾ ಶುಗರ್‌ಲೆಸ್ ಎಂದು ಕೇಳುವ ಪ್ರಮೇಯವೇ ಇರುತ್ತಿರಲಿಲ್ಲ. ಬಹುಪಾಲು ಎಲ್ಲರೂ ಆರೋಗ್ಯವಂತರಾಗಿಯೇ ಇದ್ದ ಕಾರಣ, ಸಕ್ಕರೆ ಸಹಿತವೇ ಪಾನೀಯ ಸ್ವೀಕರಿಸುತ್ತಿದ್ದರು. ಬಿಸ್ಕೆಟ್‌ಗಳು ಲಭ್ಯವಿದ್ದ ಕಾಲದಲ್ಲಿಯೂ ಕೆಲವರು



> ಮನೆಯ ಶುಭಕಾರ್ಯ ಹಾಗೂ ಇನ್ನಿತರ ಕಾರ್ಯಗಳ ಆಹ್ವಾನ ಪತ್ರಿಕೆ ನೀಡುವ ನೆಪದಲ್ಲಾದರೂ ಹಿಂದೆ ಮನೆಗೆ ಹೆಚ್ಚಾಗಿ ಅತಿಥಿಗಳು ಬರುತ್ತಿದ್ದರು. ಇಂದಿನ ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಫೋನ್ ಕಾಲ್ ಅಥವಾ ವಾಟ್ಸಾಪ್ ಮುಖಾಂತರ ಹೆಚ್ಚು ಆಹ್ವಾನ ಬರುತ್ತಿದೆಯಾದ್ದರಿಂದ ಅತಿಥಿ ಸತ್ಕಾರಕ್ಕೆ ಅವಕಾಶವೇ ಕಡಿಮೆಯಾಗುತ್ತಿದೆ. ತಾಂತ್ರಿಕ ಆಹ್ವಾನಕ್ಕೆ ಯಾಂತ್ರಿಕವಾಗಿ ಜನ ಭಾಗವಹಿಸುತ್ತಿದ್ದಾರೆ. ಮದುವೆ ಮನೆಗಳಲ್ಲಿಯೂ ಹೂ ನೀಡಿ ಸ್ವಾಗತಿಸಲು, ಕುಂಕುಮ ಹಚ್ಚಲು, ತಾಂಬೂಲ ಕೊಡಲು ಬಾಡಿಗೆ ಮಹಿಳೆಯರನ್ನು ನಿಯೋಜಿಸುವ ಪರಿಪಾಠವಿದೆ. ಆರತಕ್ಷತೆ ಸಂದರ್ಭದಲ್ಲಿ ಸ್ಟೇಜ್ ಮೇಲೆ ನಗುಮುಖದಿಂದ ಪೋಸ್ ಕೊಡುವ ವಧು, ವರ ಹಾಗೂ ಅವರ ಕುಟುಂಬ, ಸ್ಟೇಜ್ ಹತ್ತುವ ಜನಗಳನ್ನು ನಿಯಂತ್ರಿಸಲು ಅಜಾನುಬಾಹು ಬೌನ್ಸರ್‌ಗಳನ್ನು ನಿಯೋಜಿಸುತ್ತಾರೆ.

ಎಣ್ಣೆಯಲ್ಲಿ ಕರಿದ ಹಪ್ಪಳ/ಸಂಡಿಗೆ ನೀಡುತ್ತಿದ್ದರು.

ಊಟ/ತಿಂಡಿಗೆ ಸಿಹಿಯನ್ನು ತಯಾರಿಸುತ್ತಿದ್ದರು. ದೂರದೂರಿನಿಂದ ಬಂದ ಅತಿಥಿಗಳಾದರೆ ತಕ್ಷಣ ಹಿಂತಿರುಗುವ ಪ್ರಮೇಯ ಇಲ್ಲದ ಕಾರಣ ತಂಗುತ್ತಿದ್ದರು. ಹೋಗುವ ಅವಕಾಶವಿದ್ದರೂ ಒತ್ತಾಯ ಪೂರ್ವಕವಾಗಿ ಅತಿಥಿಗಳನ್ನು ತಂಗುವಂತೆ ಮಾಡುತ್ತಿದ್ದರು. ಅತಿಥಿಗಳಿಗೆ ತಮ್ಮ ಬೆಡ್‌ರೂಂನಲ್ಲಿಯೇ ಮಲಗಲು ವ್ಯವಸ್ಥೆ ಮಾಡುತ್ತಿದ್ದರು. ಬಡವರ ಮನೆಯಾದರೂ ಸರಿ ಇರುವುದರಲ್ಲಿ ಉತ್ತಮ ಸೌಕರ್ಯ ಒದಗಿಸುತ್ತಿದ್ದರು. ಪ್ರೈವಸಿ ಎಂಬ ಪ್ರೇತ ಬಹುಪಾಲು ಜನರಿಗೆ ಅಷ್ಟಾಗಿ ಮೆಟ್ಟಿಕೊಂಡಿರಲಿಲ್ಲ. ತಾವು ಹಜಾರದಲ್ಲೋ, ಬೇರೆಲ್ಲೋ ಮಲಗುತ್ತಿದ್ದರು. ಅತಿಥಿಗಳಿಗೆ ಮಾತ್ರ ರಾಜೋಪಚಾರ ನೀಡಲು ಪ್ರಯತ್ನಿಸುತ್ತಿದ್ದರು. ಆತಿಥ್ಯ ನೀಡುವುದರಲ್ಲಿಯೇ ಆನಂದ ಅನುಭವಿಸುತ್ತಿದ್ದರು.

ಇಂದು ಕಾಲ ಬದಲಾಗಿದೆ. ಅತಿಥಿ ಸತ್ಕಾರದ ರೀತಿ ನೀತಿಗಳು ಸಹ ಬದಲಾಗಿವೆ. ಯಾರಿಗೂ ಯಾವುದಕ್ಕೂ ಸಮಯವಿಲ್ಲ, ಅತಿಥಿಗಳಿಗೂ, ಆತಿಥ್ಯ ನೀಡುವವರಿಗೂ ಸಹ. ಬಹುಪಾಲು ಜನರ ಬಳಿ ಸ್ವಂತ ವಾಹನ ವ್ಯವಸ್ಥೆ ಇರುವುದರಿಂದ ಒಂದು ರೀತಿಯ ಕುದುರೆ ಸವಾರಿಯಲ್ಲಿಯೇ ಬಂದಂತೆ ವರ್ತಿಸುತ್ತಾರೆ. ಆಹ್ವಾನ ಪತ್ರಿಕೆ ಕೊಡಲು ಬಂದರೂ ಸಹ ಪಾನೀಯ ಸ್ವೀಕರಿಸದೇ ಅದೊಂದು ಯಾಂತ್ರಿಕವಾದ ಕೆಲಸದಂತೆ ಕೊಟ್ಟು ಹೋಗುತ್ತಾರೆ. ಮನೆಯವರು ಅಷ್ಟೇ ಅವರಿಗೆ ಕೃತಕ ನಗೆ ಬೀರಿ ಬೀಳ್ಕೊಡುತ್ತಾರೆ. ಇನ್ನೂ ಊಟ/ತಿಂಡಿ ಮಾಡುವುದು ಅಪರೂಪ. ತಂಗುವ ಪ್ರಮೇಯವಂತೂ ಇಲ್ಲವೇ ಇಲ್ಲ ಎನ್ನಬಹುದು. ಹಿಂದೆ ಯಾವುದಾದರೂ ಪಟ್ಟಣ/ನಗರಗಳಲ್ಲಿ ಮದುವೆ ಇತ್ಯಾದಿ ಶುಭ ಕಾರ್ಯಗಳಿಗೆ ಹೋದಾಗ ತಮ್ಮ ಸಂಬಂಧಿಕರ ಮನೆ ಹುಡುಕಿಕೊಂಡು ಹೋಗಿ ತಂಗುವ ಪರಿಪಾಠವಿತ್ತು. ಇಂದು ಕಲ್ಯಾಣ ಮಂಟಪಕ್ಕೆ ಸಂಬಂಧಿಕರ ಮನೆ ಹತ್ತಿರವಿದ್ದರೂ ಅಲ್ಲಿಗೆ ಹೋಗುವ ಮನಸ್ಸು ಮಾಡುವುದಿಲ್ಲ. ಬೇಕಾದರೆ ಹೋಟೆಲ್ ರೂಂ ಒಂದನ್ನು ಬಾಡಿಗೆ ಪಡೆದು ತಂಗಿಯಾರು! ಅವರಿಗೇಕೆ ತೊಂದರೆ ಎಂದು ಭಾವಿಸುತ್ತಾರೆ. ಅಪ್ಪಿತಪ್ಪಿ ಸಂಬಂಧಿಕರ ಮನೆಗೆ ಹೋದರೂ, ಅವರ ಆತಿಥ್ಯವೂ ನಿರೀಕ್ಷೆ ಮಟ್ಟಕ್ಕೆ ಇರುವುದಿಲ್ಲ. ಮನೆ ನಿರ್ಮಾಣ ಮಾಡುವಾಗ ಗೆಸ್ಟ್ ರೂಂ ಎಂದು ಕಟ್ಟಿಸಿದ್ದರೂ, ಯಾವ ಗೆಸ್ಟ್‌ಗಳು ಉಳಿಯದೇ ಅವುಗಳು ಗೋಸ್ಟ್ (Ghost) ರೂಂಗಳಂತಾಗಿ ಪರಿವರ್ತಿತವಾಗಿವೆ ಎಂದರೆ ತಪ್ಪಿಲ್ಲ. ಇಂದು ಮನೆಗಳು ದೊಡ್ಡದಾಗಿರುತ್ತವೆ ಆದರೆ ಮನಸ್ಸು ಮಾತ್ರ ಕಿರಿದಾಗುತ್ತಲೇ ಇರುತ್ತವೆ. ಯಾರಾದರೂ ಅತಿಥಿಗಳು ಮನೆಗೆ ಬಂದರೆ ಹಿರಿಯರು, ಕಿರಿಯರು ಎನ್ನದೇ ತಮ್ಮ ಪ್ರೈವಸಿಗೆ ಧಕ್ಕೆಯಾಗುತ್ತದೆ ಎಂದು ಭಾವಿಸಿ, ಅತಿಥಿಗಳನ್ನು ಆದಷ್ಟು ಬೇಗ ಸಾಗಹಾಕಲು ಹೊಂಚುಹಾಕುತ್ತಿದ್ದಾರೆ. ಕೆಲವರು ಅತಿಥಿಗಳು ಮನೆ ಒಳಗೆ ಬಂದರೂ ಅವರನ್ನು ಮುಖಕೊಟ್ಟು ಮಾತನಾಡಿಸದೆ ಟಿ.ವಿ.ಕಾರ್ಯಕ್ರಮಗಳು ಅಥವಾ ಮೊಬೈಲ್ ಫೋನ್ ಕಡೆ ಮುಖ ಮಾಡಿರುತ್ತಾರೆ. ಆ ಕಾರಣಕ್ಕೆ ವಚನಕಾರರಾದ ಬಸವಣ್ಣನವರು 'ಏನ ಬಂದೀರಿ ಹದುಳವಿದ್ದಿರಿ ಎಂದಡೆ ನಿಮ್ಮ ಮೈಸಿರಿ ಹಾರಿ ಹೋಹುದೆ, ಕುಳ್ಳಿರೆಂದಡೆ ನೆಲಕುಳಿ ಹೋಹುದೆ ಒಡನೆ ನುಡಿದರೆ ಸಿರಿಹೊಟ್ಟೆ ಯೊಡೆವುದೆ' ಎಂದು ಹೇಳುವ ಮೂಲಕ ಇಂತ ಹವರಿಗೆ ಮಾರ್ಮಿಕವಾಗಿ ಚಾಟಿ ಬೀಸಿದ್ದಾರೆ. ಎಲ್ಲರೂ ಹೀಗೆ ಇರುತ್ತಾರೆ ಅಂತಲ್ಲ. ಇಂದಿಗೂ ಕೆಲವರ ಮನೆಗೆ ಹೋದಾಗ ಹಬ್ಬದ ವಾತಾವರಣವೇ ಸೃಷ್ಟಿಯಾಗಿಬಿಡುತ್ತದೆ. ಅವರ ಆತಿಥ್ಯವನ್ನು ಮರೆಯಲಾಗದಂತೆ ನೋಡಿಕೊಳ್ಳುತ್ತಾರೆ.

ಎಷ್ಟೋ ಮನೆಗಳಲ್ಲಿ ಅತಿಥಿಗಳಿಗೆ ಮನೆಯಲ್ಲಿ ಸಿಹಿ ತಿನಿಸುಗಳನ್ನು ಮಾಡುವ ಪ್ರಯತ್ನವನ್ನೇ ಮಾಡುವುದಿಲ್ಲ. ಸಮಯವಿಲ್ಲ ಎಂಬ ನೆಪ ಒಡ್ಡಿ ಹೋಳಿಗೆ, ಕಜ್ಜಾಯ, ರವೆ ಉಂಡೆ ಯಾವುದೇ ಸಿಹಿಯಾಗಲಿ ಮಾರುಕಟ್ಟೆಯಲ್ಲಿ ಸಿಗುವುದರಿಂದ ಅಲ್ಲಿಂದ ತರಿಸಿ ಬಡಿಸುತ್ತಾರೆ. ಇನ್ನೂ ಕೆಲವರು ಮನೆಗೆ ಬಂದ ಅತಿಥಿಗಳಿಗೆ ಮನೆಯಲ್ಲಿ ಊಟ ಹಾಕಿ ಖುಷಿ ಪಡಿಸದೇ ಅವರನ್ನು ಹೋಟೆಲ್‌ಗೆ ಕರೆದುಕೊಂಡು ಹೋಗಿ ಊಟ ಕೊಡಿಸುವ ಹೊಸ ಸಂಪ್ರದಾಯ ಹುಟ್ಟುಹಾಕಿದ್ದಾರೆ. ಇನ್ನು ಬುದ್ಧಿವಂತರು ತಮ್ಮ ಊರಿನಲ್ಲಿ ಸ್ಪೆಷಲ್ ಸಿಗುತ್ತದೆ ಎಂದು ಸ್ವಿಗ್ಗಿ /ಜೊಮ್ಯಾಟೋದಲ್ಲಿ ಆರ್ಡರ್ ಮಾಡಿ ತರಿಸಿ ಬಡಿಸುವುದು ಉಂಟು.

ನಮ್ಮ ಮನೆಗೆ ಬರುವ ಸ್ನೇಹಿತರು, ಸಂಬಂಧಿಗಳು, ಪರಿಚಿತರು ಸಹ ಅತಿಥಿಗಳೇ. ನಮ್ಮ ದೇಶಕ್ಕೆ ವಿದೇಶದಿಂದ ಪ್ರವಾಸಕ್ಕೆ ಬರುವ ಪ್ರವಾಸಿಗರು ಅತಿಥಿಗಳೇ. ಹಾಗೆಯೇ ಅವರನ್ನು ಉತ್ತಮವಾಗಿ ನೋಡಿಕೊಳ್ಳುವುದು ನಮ್ಮ ಧರ್ಮ. ನಮ್ಮ ದೇಶದ ವೈವಿಧ್ಯತೆಯ ಶ್ರೀಮಂತಿಕೆ, ಸಾಂಸ್ಕೃತಿಕ ವೈಶಿಷ್ಟ್ಯವನ್ನು ಕಂಡು ವಿದೇಶಿ ಪ್ರವಾಸಿಗರು ಆಕರ್ಷಿತರಾಗಿ ಬರುತ್ತಾರೆ. ಹಾಗೆ ಬಂದ ಅತಿಥಿಗಳನ್ನು ನಗುಮುಖದಿಂದ ಸ್ವಾಗತಿಸಿ ಸತ್ಕರಿಸುವ ಸಜ್ಜನರಂತೆ ಅವರನ್ನು ವಂಚಿಸಿ, ತೊಂದರೆ ಕೊಡುವ ದುರ್ಜನರು ಸಹ ನಮ್ಮ ದೇಶದಲ್ಲಿಯೇ ಇದ್ದಾರೆ. ವಿದೇಶಿ ಪ್ರವಾಸಿಗರಿಗೆ ವ್ಯಾಪಾರ ವಹಿವಾಟುಗಳಲ್ಲಿ ಅವರನ್ನು ವಂಚಿಸುತ್ತಾರೆ. ಅವರ ವಸ್ತುಗಳನ್ನು ಕದಿಯುತ್ತಾರೆ. ಇತ್ತೀಚೆಗೆ ವಿಶ್ವವಿಖ್ಯಾತ ಪ್ರವಾಸಿ ತಾಣವೊಂದರಲ್ಲಿ ಕುಡಿದ ಮತ್ತಿನಲ್ಲಿ ವಿದೇಶಿ ಪ್ರವಾಸಿಗರ ಮೇಲೆ ಹಲ್ಲೆ ಮಾಡಿ, ಲೈಂಗಿಕ ದೌರ್ಜನ್ಯ ಎಸಗಿದ ಕೃತ್ಯವೂ ವರದಿಯಾಗಿದೆ. ಇದು ಇಡೀ ದೇಶದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಆ ಕಾರಣಕ್ಕೆ ಪ್ರವಾಸೋದ್ಯಮ ಇಂದಿಗೂ ನಮ್ಮ ದೇಶದಲ್ಲಿ ಕುಂಟುತ್ತಲೇ ಸಾಗುತ್ತಿದೆ. ಅನೇಕ ಚಿಕ್ಕ ರಾಷ್ಟ್ರಗಳು ವಿದೇಶಿ ಪ್ರವಾಸಿಗರನ್ನು ಉತ್ತಮವಾಗಿ ನಡೆಸಿಕೊಳ್ಳುವ ಕಾರಣಕ್ಕೆ ಆ ದೇಶದ ಆರ್ಥಿಕ ಪ್ರಗತಿಗೆ ಪ್ರವಾಸೋದ್ಯಮವೇ ಕಾರಣವಾಗಿರುತ್ತದೆ. ಸರ್ಕಾರದ ನಿರ್ಲಕ್ಷ್ಯ ಹಾಗೂ ಸಾರ್ವಜನಿಕರ ಅಲಕ್ಷ್ಯದಿಂದ ಇಂದು ಪ್ರವಾಸೋದ್ಯಮ ಕುಂಟುತ್ತಾ ಸಾಗಿದೆ. ನಮ್ಮ ದೇಶದ ನೈಸರ್ಗಿಕ ಸಂಪತ್ತು, ಐತಿಹಾಸಿಕ ವೈವಿಧ್ಯತೆ, ಶ್ರೀಮಂತಿಕೆಯನ್ನು ಪರಿಗಣಿಸಿದರೆ ನಮ್ಮ ದೇಶವೂ ಪ್ರವಾಸೋದ್ಯಮದಲ್ಲಿ ಇಡೀ ವಿಶ್ವಕ್ಕೆ ಮೊದಲ ಸ್ಥಾನದಲ್ಲಿ ಇರಬೇಕಿತ್ತು.

ಮನೆಯ ಶುಭಕಾರ್ಯ ಹಾಗೂ ಇನ್ನಿತರ ಕಾರ್ಯಗಳ ಆಹ್ವಾನ ಪತ್ರಿಕೆ ನೀಡುವ ನೆಪದಲ್ಲಾದರೂ ಹಿಂದೆ ಮನೆಗೆ ಹೆಚ್ಚಾಗಿ ಅತಿಥಿಗಳು ಬರುತ್ತಿದ್ದರು. ಇಂದಿನ ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಫೋನ್ ಕಾಲ್ ಅಥವಾ ವಾಟ್ಸಾಪ್ ಮುಖಾಂತರ ಹೆಚ್ಚು ಆಹ್ವಾನ ಬರುತ್ತಿದೆಯಾದ್ದರಿಂದ ಅತಿಥಿ ಸತ್ಕಾರಕ್ಕೆ ಅವಕಾಶವೇ ಕಡಿಮೆಯಾಗುತ್ತಿದೆ. ತಾಂತ್ರಿಕ ಆಹ್ವಾನಕ್ಕೆ ಯಾಂತ್ರಿಕವಾಗಿ ಜನ ಭಾಗವಹಿಸುತ್ತಿದ್ದಾರೆ. ಮದುವೆ ಮನೆಗಳಲ್ಲಿಯೂ ಹೂ ನೀಡಿ ಸ್ವಾಗತಿಸಲು, ಕುಂಕುಮ ಹಚ್ಚಲು, ತಾಂಬೂಲ ಕೊಡಲು ಬಾಡಿಗೆ ಮಹಿಳೆಯರನ್ನು ನಿಯೋಜಿಸುವ ಪರಿಪಾಠವಿದೆ. ಆರತಕ್ಷತೆ ಸಂದರ್ಭದಲ್ಲಿ ಸ್ಟೇಜ್ ಬಳಿ ನಗುಮುಖದಿಂದ ಸ್ವಾಗತಿಸುವ ಮನೆಯವರ ಬದಲು ಅತಿಥಿಗಳನ್ನು ನಿಯಂತ್ರಿಸಲು ಅಜಾನುಬಾಹು ಬೌನ್ಸರ್‌ಗಳನ್ನು ನಿಯೋಜಿಸುತ್ತಾರೆ.

ಭಾರತೀಯ ಸಂಸ್ಕೃತಿಯಲ್ಲಿ ಅತಿಥಿ ಸತ್ಕಾರಕ್ಕೆ ತನ್ನದೇ ಆದ ಅರ್ಥ, ವ್ಯಾಪ್ತಿ, ವೈಶಿಷ್ಟ್ಯತೆ ಇದೆ. ತಾವು ಬಿಡುವಿದ್ದಾಗ ಅತಿಥಿಗಳಿಗೆ ಸಮಯ ನೀಡುವ ಸಂಸ್ಕೃತಿ ನಮ್ಮದಲ್ಲ. ಅತಿಥಿಗಳಿಗೋಸ್ಕರ ಬಿಡುವು ಮಾಡಿಕೊಂಡು ಆತಿಥ್ಯ ನೀಡುವುದು ಸಂಸ್ಕೃತಿ ನಮ್ಮದು. ಮನೆಗೆ ಬರುವ ಅತಿಥಿಗಳಿಗೆ ಮನೆಯ ಬಾಗಿಲು ಅಷ್ಟೇ ಅಲ್ಲ, ಮನದ ಬಾಗಿಲನ್ನು ತೆರೆದು ಹೃದಯಪೂರ್ವಕವಾಗಿ ಸತ್ಕರಿಸೋಣ. ಏನಂತೀರಿ ?

ಹೂರಣ: ಅತಿಥಿ ಸತ್ಕಾರದಲ್ಲೂ ತೃಪ್ತಿ ಕಂಡವರು ನಿಜಸುಖಿಗಳು.

ಒಬಿಸಿ ಸಲಹಾ ಅಧ್ಯಕ್ಷರಾಗಿ ಸಿದ್ದರಾಮಯ್ಯ ನೇಮಕವಾಗಿಲ್ಲ; ಸಿಎಂ ಕಚೇರಿ ಪ್ರಕಟಣೆ, ಆದರೆ ಜು.15, ಸಿಎಂ ಅಧ್ಯಕ್ಷತೆಯಲ್ಲೇ ಮೊದಲ ಸಭೆ!

ಬೆಂಗಳೂರು, ಜು.6–ಕಾಂಗ್ರೆಸ್ ಒಬಿಸಿ ಸಲಹಾ ಮಂಡಳಿಯ ಅಧ್ಯಕ್ಷರಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ನೇಮಕ ಮಾಡಿಲ್ಲ ಎಂದು ಸಿಎಂ ಕಚೇರಿ ತಿಳಿಸಿದೆ. ಆದರೆ, ಜು.15ರಂದು ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲೇ ಒಬಿಸಿ ಸಲಹಾ ಸಮಿತಿಯ ಮೊದಲ ಸಭೆ ಬೆಂಗಳೂರಿನಲ್ಲಿ ನಡೆಯುತಿರುವುದು ಅಚ್ಚರಿ ಮೂಡಿಸಿದೆ.

ತಾವು ಒಬಿಸಿ ಸಲಹಾ ಸಮಿತಿ ಅಧ್ಯಕ್ಷರಾಗಿ ನೇಮಕವಾಗಿರುವುದಾಗಿ ಮಾಧ್ಯಮಗಳ ಮೂಲಕ ತಿಳಿದಿದೆಯಷ್ಟೇ, ಆದರೆ, ಅಂತಹ ನೇಮಕ ಆಗಿಲ್ಲ. ಜು.15 ರಂದು ಒಬಿಸಿ ಸಲಹಾ ಸಮಿತಿ ಸಭೆ ನಡೆಸುವಂತೆ ತಮಗೆ ಎಐಸಿಸಿಯಿಂದ ತಿಳಿಸಿದ್ದಾರೆ ಎಂದು ಸಿಎಂ ಸಿದ್ದರಾಮಯ್ಯ ಮಾಧ್ಯಮಗಳಿಗೆ ಹೇಳಿದ್ದಾರೆ. ಅದೇ ವೇಳೆ ನೇಮಕವಾದರೆ ಒಪ್ಪಿಕೊಳ್ಳುತ್ತೀರಾ? ಎಂಬ ಪ್ರಶ್ನೆಗೆ, ಒಪ್ಪಕೊಳ್ಳದೇ ಬಿಡಲಾಗುತ್ತಾ ಎಂದು ಅವರು ಪ್ರಶ್ನೆ ಹಾಕಿದರು.



ಸಿದ್ದರಾಮಯ್ಯ

ದೇಶದಲ್ಲಿ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಸಮುದಾಯಗಳು ಎದುರಿಸುತ್ತಿರುವ ವಿವಿಧ ಸಮಸ್ಯೆಗಳನ್ನು ಪರಿಶೀಲಿಸಿ, ಅವುಗಳಿಗೆ ಸೂಕ್ತ ಪರಿಹಾರಗಳನ್ನು ಒದಗಿಸಲು, ಕಾರ್ಯತಂತ್ರವನ್ನು ರೂಪಿಸಲು ರಚಿಸಲಾದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ (ಎಐಸಿಸಿ) ಇತರ ಹಿಂದುಳಿದ ವರ್ಗಗಳ (ಒಬಿಸಿ) ಸಲಹಾ ಮಂಡಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವ ವಹಿಸಲಿದ್ದು, ಮಂಡಳಿಯ ಮೊದಲ ಸಭೆ ಜುಲೈ 15 ರಂದು ಬೆಂಗಳೂರಿನ ಕೆಪಿಸಿಸಿ ಕಚೇರಿಯ ಆವರಣದಲ್ಲಿ ನಡೆಯಲಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಈ ಮಂಡಳಿಯ ರಚನೆಗೆ ಇತ್ತೀಚೆಗೆ ಅನುಮೋದನೆ ನೀಡಿದ್ದು, ಮಂಡಳಿಯಲ್ಲಿ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಮತ್ತು ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯ್ಲಿ ಇದ್ದಾರೆ. ಮಂಡಳಿಯಲ್ಲಿ ನಾಲ್ವರು ಮಾಜಿ ಮುಖ್ಯಮಂತ್ರಿಗಳು ಸೇರಿದಂತೆ ಒಟ್ಟು 24 ಸದಸ್ಯರಿದ್ದಾರೆ.

ಕೆಪಿಸಿಸಿ ಕಚೇರಿಯ ಆವರಣದಲ್ಲಿರುವ ಭಾರತ್ ಜೋಡೊ ಭವನದಲ್ಲಿ ಮಂಡಳಿಯ ಮೊದಲ ಸಭೆ ಇದೇ 15ರಂದು ನಡೆಯಲಿದೆ. ಮಂಡಳಿಯ ಸದಸ್ಯರು, ಸಂಚಾಲಕರು, ಕಾರ್ಯದರ್ಶಿಗಳು, ಕಾಂಗ್ರೆಸ್‌ನ ಹಿಂದುಳಿದ ವರ್ಗಗಳ ಪ್ರಮುಖ ನಾಯಕರು ಸೇರಿದಂತೆ ದೇಶದ ವಿವಿಧ ರಾಜ್ಯಗಳ 90 ನಾಯಕರಿಗೆ ಈ ಸಭೆಯ ಆಹ್ವಾನ ನೀಡಲಾಗಿದೆ. ಐವರು ಮಾಜಿ ಮುಖ್ಯಮಂತ್ರಿಗಳು, ಹತ್ತು ಮಂದಿ ಕೇಂದ್ರದ ಮಾಜಿ ಸಚಿವರು ಕೂಡ ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ.


ಮುಂದಿನ ಕಾರ್ಯಯೋಜನೆಗಳು, ಅವುಗಳ ಅನುಷ್ಠಾನ, ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದಂತೆ ಕಾಂಗ್ರೆಸ್ ಕೈಗೆತ್ತಿಕೊಳ್ಳಬೇಕಾದ ವಿಷಯಗಳ ಕುರಿತು ಎಐಸಿಸಿಯ ಹಿಂದುಳಿದ ವರ್ಗಗಳ ಘಟಕಕ್ಕೆ ಈ ಸಲಹಾ ಮಂಡಳಿಯು ಸಲಹೆಗಳನ್ನು ನೀಡಲಿದೆ.

ರಾಜ್ಯದಲ್ಲಿ ಹಿಂದುಳಿದ ವರ್ಗಗಳ ನಾಯಕರಾಗಿರುವ ಸಿದ್ದರಾಮಯ್ಯ ಅವರ ವರ್ಚಸ್ಸನ್ನು ಬಳಸಿಕೊಂಡು ದೇಶದಾದ್ಯಂತ ಹಿಂದುಳಿದ ವರ್ಗಗಳನ್ನು ತನ್ನತ್ತ ಸೆಳೆಯಲು ಎಐಸಿಸಿ ಈ ಮಂಡಳಿ ರಚಿಸಿದೆ. ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಪೂರಕವಾಗಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆಯೂ ಈ ಮಂಡಳಿ ಸಲಹೆಗಳನ್ನು ನೀಡಲಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮಂಡಳಿಯಲ್ಲಿ ಅಶೋಕ್ ಗೆಹ್ಲೋಟ್, ಭೂಪೇಶ್ ಬಾಘೇಲ್, ವಿ ನಾರಾಯಣ ಸ್ವಾಮಿ, ಸಚಿನ್ ಪೈಲಟ್, ಗುರುದೀಪ್ ಸಿಂಗ್ ಸಪ್ಪಲ್, ಅರುಣ್ ಯಾದವ್, ವಿಜಯ್ ನಾಮದೇವರಾವ್ ವಡೆತ್ತಿವಾರ್, ವಿ ಹನುಮಂತ ರಾವ್, ಅಮಿತ್ ಚಾವ್ಡಾ, ಮಹೇಶ್ ಕುಮಾರ್ ಗೌಡ್, ಪೊನ್ನಂ ಪ್ರಭಾಕರ್, ಎಸ್.ಜೋತಿಮಣಿ, ಶ್ರೀಕಾಂತ್ ಜೆನ, ಕಮಲೇಶ್ವರ್ ಪಟೇಲ್, ಅಜಯ್ ಕುಮಾರ್ ಲುಲ್ಲು, ಸುಭಾಷಿಣಿ ಯಾದವ್, ಅದೂರ್ ಪ್ರಕಾಶ್ ಧಾನೇಂದ್ರ ಸಾಹು, ಹೀನಾ ಕಾವ್ರೆ, ಡಾ.ಅನಿಲ್ ಜೈ ಹಿಂದ್ ಇದ್ದಾರೆ. ಸಲಹಾ ಮಂಡಳಿಯ ಸಂಚಾಲಕರಾಗಿ ಡಾ ಅನಿಲ್ ಜೈಹಿಂದ್ ಮತ್ತು ಕಾರ್ಯದರ್ಶಿಯಾಗಿ ಜಿತೇಂದರ್ ವಾಘೇಲ್ ಇದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಬಿಎಂಶ್ರೀ ಮೊಮ್ಮಗಳು ರಾಜಲಕ್ಷ್ಮಿ ಎನ್.ರಾವ್ ಅವರ ಸಾಹಿತ್ಯ ಲೋಕ ಅನಾವರಣ



ಗೋಷ್ಠಿಗೂ ಮುನ್ನ 'ಸಂಗಮ' ಎಂಬ ಕಥಾಸಂಕಲನ ಬಿಡುಗಡೆ ಮಾಡಲಾಯಿತು. (ಎಡದಿಂದ) ಮೈಸೂರು ಲಿಟರರಿ ಫೋರಂ ಚಾರಿಟೆಬಲ್ ಟ್ರಸ್ಟ್ ಹಾಗೂ ಮೈಸೂರು ಬುಕ್ ಕ್ಲಬ್ಸ್ ಚಾರಿಟೆಬಲ್ ಟ್ರಸ್ಟ್‌ನ ಸಂಸ್ಥಾಪಕ ನಿರ್ದೇಶಕರೂ ಆದ ಅಧ್ಯಕ್ಷೆ ಶುಭಾ ಸಂಜಯ್ ಅರಸ್, ಉದ್ಯಮಿ ಅರುಣ್ ರಾಮನ್, ಹಿರಿಯ ಲೇಖಕಿ ರಾಜಲಕ್ಷ್ಮಿ ಎನ್.ರಾವ್, ಕಥಾಸಂಕಲನದ ಸಂಪಾದಕ ಚಂದನ್‌ಗೌಡ, ಮನು ಚಕ್ರವರ್ತಿ, ವನಮಾಲಾ ವಿಶ್ವನಾಥ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಜು.6(ಪಿಎಂ)– ಹೋಟೆಲ್ ಸದರನ್ ಸ್ಟಾರ್‌ನ ಗಾರ್ಡೇನಿಯಾ ಆವರಣದ ಈಜುಕೊಳದ ಬದಿ ಅಂಗಳದಲ್ಲಿ ಭಾನುವಾರ ಮೈಸೂರು ಸಾಹಿತ್ಯ ಸಂಭ್ರಮದ 9ನೇ ಆವೃತ್ತಿಯ ಕನ್ನಡದ 10ನೇ ಗೋಷ್ಠಿಯಲ್ಲಿ ಬಿ.ಎಂ.ಶ್ರೀಯವರ ಮೊಮ್ಮಗಳಾದ ರಾಜಲಕ್ಷ್ಮಿ ಎನ್.ರಾವ್ ಅವರ 'ಸಂಗಮ' ಎಂಬ ಕಥಾಸಂಕಲನದ ಪುಸ್ತಕದ ಬಿಡುಗಡೆ ಮಾಡಲಾಯಿತು.

ಪುಸ್ತಕದ ಸಂಪಾದಕ ಚಂದನ್‌ಗೌಡ ಅವರು ಕಥಾಗುಚ್ಛವಾಗಿ ಈ ಪುಸ್ತಕವನ್ನು ಸಂಪಾದಿಸಿರುವ ಬಗೆಯನ್ನು ವಿವರಿಸಿದರು. ವನಮಾಲಾ ವಿಶ್ವನಾಥ್ ಮಾತನಾಡುತ್ತ ರಾಜಲಕ್ಷ್ಮಿಯವರ ಬರವಣಿಗೆಯ ಸಮಕಾಲೀನ ಲೇಖಕಿಯರನ್ನು ನೆನೆಯುತ್ತ ಆಂಗ್ಲ ಶಿಕ್ಷಣವು ಇವರೆಲ್ಲರ ಸಾಹಿತ್ಯ ಕ್ಷೇತ್ರದೆಡೆಗಿನ ನಡಿಗೆಯ ಮೇಲೆ ಹೇಗೆ ಪ್ರಭಾವ ಬೀರಿರಬಹುದೆಂಬುದನ್ನು ತಿಳಿಸಿಕೊಟ್ಟರಲ್ಲದೆ, ಇವರದು ಕಾವ್ಯದ ನೆಲೆಯಲ್ಲಿರುವ ಕಥಾಶೈಲಿಯೆಂದು ಬಣ್ಣಿಸಿದರು.

ಮನು ಚಕ್ರವರ್ತಿಯವರು ರಾಜಲಕ್ಷ್ಮೀ ಅವರ ಅಗಾಧ ಸಾಹಿತ್ಯ ಕೃಷಿ ಮೇಲೆ ಬೆಳಕು ಚೆಲ್ಲಿದರು. ಅಬ್ದುಲ್ ರಶೀದ್ ಅವರು ಮಾತನಾಡಿ, ಪ್ರಾಯಶಃ ರಾಜಲಕ್ಷ್ಮಿಯವರು ಬರವಣಿಗೆಯನ್ನು ಸ್ಥಗಿತಗೊಳಿಸಿ ಆಧ್ಯಾತ್ಮದೆಡೆಗೆ ಹೊರಳಲು ಅಂದಿನ ಸಮಾಜದಲ್ಲಿ ಕಂಡು ಬರುವ ಪ್ರೋತ್ಸಾಹದ ಕೊರತೆ ಕಾರಣವಿರಬಹುದು ಎಂದು ಅಭಿಪ್ರಾಯಪಟ್ಟರು. ಕೊನೆಯಲ್ಲಿ ಹಿರಿಯ ಲೇಖಕಿ ರಾಜಲಕ್ಷ್ಮಿ ಎನ್.ರಾವ್, ಜೀವನದ ಬಗ್ಗೆ ಹಿತವಚನಗಳನ್ನಾಡಿ ಸಭಿಕರನ್ನು ಚಿಂತನೆಗೆ ಹಚ್ಚಿದರು.

'ಥಿಂಗ್ಸ್ ಲೆಫ್ಟ್ ಅನ್‌ಸೇಡ್' ಕೃತಿ ಬಿಡುಗಡೆ



ಮೈಸೂರು ಸಾಹಿತ್ಯ ಉತ್ಸವ 9ನೇ ಆವೃತ್ತಿಯಲ್ಲಿ ಲೇಖಕಿ ಸುಜಾತಾ ರಾಜ್‌ಪಾಲ್ ರಚಿತ 'ಥಿಂಗ್ಸ್ ಲೆಫ್ಟ್ ಅನ್‌ಸೇಡ್' ಕೃತಿಯನ್ನು ಬಿಡುಗಡೆ ಮಾಡಲಾಯಿತು. (ಎಡದಿಂದ)ಲೇಖಕಿಯರಾದ ಅನಿಶಾ ಲಾಲ್ವಾನಿ, ಅರುಂಧತಿ ಘೋಷ್, ಶಾರದಾ ಗುಲಾಟಿ, ಮೈಸೂರು ಲಿಟರರಿ ಫೋರಂ ಚಾರಿಟೆಬಲ್ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷೆ ಶುಭಾ ಸಂಜಯ್ ಅರಸ್ ಉಪಸ್ಥಿತರಿದ್ದರು.

ಮೈಸೂರು ಬುಕ್ ಕ್ಲಬ್ಸ್ ಚಾರಿಟೆಬಲ್ ಟ್ರಸ್ಟ್ ಲಾಂಛನ ಅನಾವರಣ...



ಹೋಟೆಲ್ ಸದರನ್ ಸ್ಟಾರ್‌ನ ಗಾರ್ಡೇನಿಯಾ ಆವರಣದ ಈಜುಕೊಳದ ಬದಿ ಅಂಗಳದಲ್ಲಿ ಭಾನುವಾರ ಮೈಸೂರು ಬುಕ್ ಕ್ಲಬ್ಸ್ ಚಾರಿಟೆಬಲ್ ಟ್ರಸ್ಟ್ ಹಾಗೂ ಟ್ರಸ್ಟ್‌ನಡಿಯ ವಿವಿಧ ಬುಕ್ಸ್ ಕ್ಲಬ್‌ಗಳ ಓದುಗರ ಒಕ್ಕೂಟಕ್ಕೆ ಹದಿನೈದರ ಸಂಭ್ರಮದ ನೆನಪಿನಲ್ಲಿ ಭಾನುವಾರ ಬುಕ್ ಕ್ಲಬ್ಸ್ ಚಾರಿಟೆಬಲ್ ಟ್ರಸ್ಟ್‌ನ ಲಾಂಛನ ಬಿಡುಗಡೆ ಮಾಡಲಾಯಿತು. (ಎಡದಿಂದ) ಮೈಸೂರು ಲಿಟರರಿ ಫೋರಂ ಚಾರಿಟೆಬಲ್ ಟ್ರಸ್ಟ್ ಹಾಗೂ ಮೈಸೂರು ಬುಕ್ ಕ್ಲಬ್ಸ್ ಚಾರಿಟೇಬಲ್ ಟ್ರಸ್ಟ್‌ನ ಸಂಸ್ಥಾಪಕ ನಿರ್ದೇಶಕರೂ ಆದ ಅಧ್ಯಕ್ಷೆ ಶುಭಾ ಸಂಜಯ್ ಅರಸ್, ಖ್ಯಾತ ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್, ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ, ನಟಿ ಸುಧಾ ಬೆಳವಾಡಿ, ಉದ್ಯಮಿ ಅರುಣ್ ರಾಮನ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಭಾಷೆ ಮೂಲಭೂತವಾಗಿ ಹುಟ್ಟಿದ್ದು ಮಾತನಾಡುವ ಸಲುವಾಗಿಯೇ, ಬರವಣಿಗೆ ಅನಂತರದ ಕ್ರಿಯೆ

ವಿದ್ವಾಂಸರೂ ಆದ ಖ್ಯಾತ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ

ಮೈಸೂರು,ಜು.6(ಪಿಎಂ)– ಮೂಲಭೂತವಾಗಿ ಭಾಷೆ ಹುಟ್ಟಿದ್ದು ಮಾತನಾಡಲು ಸಲುವಾಗಿಯೇ. ಅಂದರೆ ಮಾತನಾಡಬೇಕೆಂಬ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿದ್ದಾಗಿದೆ. ಬರವಣಿಗೆ ಎಂಬುದು ಇದರ ನಂತರದ ಕ್ರಿಯೆ. ಭಾಷೆಯನ್ನು ಆಡುವುದರಿಂದಲೇ ಕಲಿಯಬೇಕೇ ಹೊರತು ಅದನ್ನು ಬರೆಯುವುದರಿಂದ ಅಲ್ಲ ಎಂದು ವಿದ್ವಾಂಸರೂ ಆದ ಖ್ಯಾತ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಹೇಳಿದರು.

ಹೋಟೆಲ್ ಸದರನ್ ಸ್ಟಾರ್‌ನ ಗಾರ್ಡೇನಿಯಾ ಆವರಣದ ಈಜುಕೊಳದ ಬದಿ ಅಂಗಳದಲ್ಲಿ ಭಾನುವಾರ ಮೈಸೂರು ಸಾಹಿತ್ಯ ಸಂಭ್ರಮದ 9ನೇ ಆವೃತ್ತಿಯ ಕನ್ನಡ ಗೋಷ್ಠಿಯಲ್ಲಿ 'ಭಾಷೆಯೆಂಬ ಸೋಜಿಗ' ಕುರಿತು ಮಾತನಾಡಿದ ಅವರು, ಎಂದಿನಂತೆ ತಮ್ಮ ಹಾಸ್ಯಧಾಟಿಯ ಮಾತುಗಾರಿಕೆ ಮೂಲಕ ಆಗಾಗ್ಗೆ ಸಭಿಕರಿಗೆ ನಗುವಿನ ಕಚಗುಳಿ ಇಟ್ಟರು.

ನಾವು ಓದಿದವರು ಮಾತಿನ ಅರ್ಥದ ಜೊತೆ ಒದ್ದಾಡುತ್ತೇವೆ. ಯಾವುದಾದರೂ ಹೊಸ ಭಾಷೆ ಕಲಿಯುವವರು ಶಬ್ದದ ಅರ್ಥವೇನೆಂದು ನೋಡುತ್ತಾರೆ. ಅವರ ಮಿತಿ ಅಲ್ಲಿಗೇ ಸೀಮಿತ. ಒಂದು ಭಾಷೆಯನ್ನು ಹೊಸದಾಗಿ ಕಲಿಯುವವನು ಆ ಭಾಷೆ ಬಳಸುವುದನ್ನು ಕಲಿಯಬಹುದೇ ಹೊರತು ಅದರ ಶಕ್ತಿ–ಸಾಮರ್ಥ್ಯ ಅರ್ಥೈಸಿಕೊಳ್ಳಲು ಸಾಧ್ಯವಿಲ್ಲ. ಇಂಗ್ಲಿಷ್, ಬೆಂಗಾಲಿ ಕಲಿತರೆ ಅದನ್ನು ಬಳಸುವ ಬಗೆ ತಿಳಿಯುತ್ತೇವೆ. ಕನ್ನಡವನ್ನೇ ತೆಗೆದುಕೊಂಡರೆ ನಾನು ಅದರ ಶಕ್ತಿಯ ಸಮೇತ ಹಾಗೂ ಅದರ ವಿವಿಧ ಆಯಾಮಗಳ ಸಮೇತ ಬಳಸುತ್ತೇನೆ ಎಂದು ವಿವರಿಸಿದರು.

ಸೇವಿಸಿದ ಆಹಾರ ಅರಗಿಸುವುದಕ್ಕೆ ಪೂರಕವಾಗಿ ನಮ್ಮ ಜೀರ್ಣಾಂಗ ವ್ಯವಸ್ಥೆ ಜೈವಿಕವಾಗಿಯೇ ರೂಪುಗೊಂಡಿರುತ್ತದೆ. ಹಾಗೆಯೇ ಮುಂದೆ ಮಾತನಾಡುವ ಭಾಷೆಯನ್ನು ನಮ್ಮ ತಲತಲಾಂತರದಿಂದ ನಾವು ಆನುವಂಶಿಕವಾಗಿಯೇ ಈಗಾಗಲೇ ಪಡೆದುಕೊಂಡು ಬಂದಿರುತ್ತೇವೆಂದು ವಿದ್ವಾಂಸರೊಬ್ಬರು ಹೇಳುತ್ತಾರೆ. ಉದಾಹರಣೆಗೆ ಕನ್ನಡಿಗರಲ್ಲಿ ಹುಟ್ಟುವ ಮಗುವಿಗೆ ಅವರ ತಂದೆ–ತಾಯಿ ಸೇರಿದಂತೆ ಪೂರ್ವಿಕರು ಕನ್ನಡವನ್ನೇ ಮಾತನಾಡುತ್ತಾ ಬಂದಿದ್ದಲ್ಲಿ ಆ ಕನ್ನಡ ಭಾಷೆಯನ್ನು ಆಡುವುದಕ್ಕೆ ಬೇಕಾದಂತೆ ಧ್ವನಿತಂತುಗಳು ಜೈವಿಕವಾಗಿಯೇ ಆ ಮಗುವಿನಲ್ಲಿ ರೂಪುಗೊಂಡಿರುತ್ತವೆ. ಆದ್ದರಿಂದ ಬೇರೆ ಭಾಷೆ ಕಲಿಯುವುದು ಕೇವಲ ಕಲಿಕೆ ಎಂದು ವಿಶ್ಲೇಷಿಸಿದರು.



ಮೈಸೂರು ಸಾಹಿತ್ಯ ಸಂಭ್ರಮದಲ್ಲಿ ವಿದ್ವಾಂಸ ಪ್ರೊ.ಎಂ.ಕೃಷ್ಣೇಗೌಡ ಮಾತನಾಡಿದರು.

ಮೂಲಭೂತವಾಗಿ ಭಾಷೆ ಇರುವುದು ಬರೆಯಲಿಕ್ಕಾಗಿ ಅಲ್ಲ. ಬರೆಯಬೇಕೆಂಬುದು ನಂತರದ ಕ್ರಿಯೆ. ಭಾಷೆ ಮಾತನಾಡಬೇಕೆಂಬ ಹಿನ್ನೆಲೆಯಲ್ಲಿ ಹುಟ್ಟಿದ್ದಾಗಿದೆ. ಭಾಷೆ ಎಂಬುದು ಇರುವುದು ಮಾತನಾಡಲು. ಮಾತನಾಡುವ ಭಾಷೆಯನ್ನು ಬರಹಕ್ಕೆ ಇಳಿಸುವಾಗಲೇ ನಾವು ಅರ್ಥ ಸೋತು ಹೋಗುತ್ತೇವೆ. ಭಾಷೆಯನ್ನು ಆಡುವುದರಿಂದಲೇ ಕಲಿಯುವುದಾಗಿಯೇ ಹೊರತು ಅದನ್ನು ಬರೆಯುವುದರಿಂದ ಅಲ್ಲ. ಮಾತು ಆಡಿದ ಮೇಲೆ ಅದನ್ನು ಬರವಣಿಗೆಯಲ್ಲಿ ಹಿಡಿಯುವ ಪ್ರಯತ್ನ ನಡೆಯುತ್ತದೆ. ಹಾಗಾಗಿ 'ಮಾತು ಮುಂದು, ಬರವಣಿಗೆ ಹಿಂದು' ಎಂದು ಹೇಳಬಹುದು ಎಂದರು.

ಇಷ್ಟು ವರ್ಷ ಕನ್ನಡದೊಂದಿಗೆ ಜೀವನ ಮಾಡಿದ್ದೇನೆ. ಇಂದಿನ ಗೋಷ್ಠಿಯಲ್ಲಿ ಏನು ಮಾತನಾಡುತ್ತೀರಾ ಎಂದು ಕೇಳಿದಾಗ, ಬೇಕೆಂದೇ ಭಾಷೆಯೆಂಬ ಸೋಜಿಗ ಎಂದು ಹೇಳಿದ್ದೆ. ಏಕೆಂದರೆ ಈ ಸೋಜಿಗವನ್ನು ನಾನು ಮಾತನಾಡುವಾಗ ಅನುಭವಿಸುತ್ತೇನೆ ಎಂದ ಅವರು, ಡಾ.ರಾಜ್‌ಕುಮಾರ್ ಅವರ ಕೆಲ ಸಂಭಾಷಣೆ ಪ್ರಸ್ತುತಪಡಿಸಿ, ರಾಜ್‌ಕುಮಾರ್ ಏಕೆ ನಮ್ಮ ಮನಸ್ಸಿಗೆ ತಾಕುತ್ತಾರೆಂದರೆ ಅವರಿಗೆ ಭಾಷೆಯ ಲಯ ಗೊತ್ತಿತ್ತು. ಭಾಷೆಯಲ್ಲಿ ನಾವು ಅಂದುಕೊಂಡದ್ದಕ್ಕಿಂತಲೂ ವಿಶೇಷವಾದ ಡೈನಾಮಿಕ್ಸ್ ಏನೋ ಇರುತ್ತದೆ. ನಾವೆಲ್ಲರೂ ಸೋಲುತ್ತಿರುವುದೆಲ್ಲೆಂದರೆ ಕನ್ನಡವಾಗಲಿ, ಇಂಗ್ಲಿಷ್ ಆಗಲಿ ಅವನ್ನು ಸಹಜವಾಗಿ ಮಾತನಾಡುವುದಿಲ್ಲ ಎಂದು ಹೇಳಿದರು.

ನಾನು ಯಾವ ಭಾಷೆಯನ್ನೂ ಹೀಯಾಳಿಸುತ್ತಿಲ್ಲ. ಎಲ್ಲಾ ಭಾಷೆಗಳಿಗೂ ಆಯಾಯ ನೆಲ, ವಾತಾವರಣಕ್ಕೆ ಸೋಜಿಗವೇ. ಕನ್ನಡ ನಮಗೆ ಹೇಗೆ ಸೋಜಿಗವೋ ಹಾಗೆ. ಇಂಗ್ಲಿಷಿನವರಿಗೆ ಅವರ ಭಾಷೆ ಸೋಜಿಗವೇ. ನಮ್ಮ ನಾಡಿನ ಅನಕ್ಷರಸ್ಥರು ಯಾವುದೇ ಕಲಿಕೆ ಇಲ್ಲದೇ ಕನ್ನಡ ಮಾತನಾಡುತ್ತಾರೆ. ಯಾವುದೇ ಶಬ್ದದ ಅರ್ಥವನ್ನು ಅವರು ಹುಡುಕುವುದಿಲ್ಲ. ನಿಮ್ಮ ಭಾಷೆ ಯಾವುದು ಎಂದರೆ 'ಕನ್ನಡ' ಎಂದು ಹೇಳುವುದಕ್ಕೂ ಅವರಿಗೆ ಬರುವುದಿಲ್ಲ. ಬದಲಿಗೆ ನಮ್ಮ ಮಾತು ಎನ್ನುತ್ತಾರೆ. ಅವರಲ್ಲಿ ಕನ್ನಡವೆಂದು ಹೆಸರು ಹೇಳುತ್ತಿದ್ದಂತೆ ಹೈಸ್ಕೂಲ್‌ಗೆ ಹೋಗುವವರು ಮಾತನಾಡುತ್ತಾರಲ್ಲ, ಅದು ಎಂದುಕೊಂಡಿರುತ್ತಾರೆ ಎಂದು ಕನ್ನಡ ಭಾಷೆಯ ಸೂಕ್ಷ್ಮತೆ ಮೇಲೆ ಬೆಳಕು ಚೆಲ್ಲಿದರು.

ಅರ್ಥವೆಂಬ ಬಂಧನದಿಂದ ಮುಕ್ತಿ: ನಮ್ಮವರು ಒಗಟುಗಳನ್ನು ಕಟ್ಟುವಾಗ ಮಾಡಿರುವ ಉಪಕಾರವೆಂದರೆ ಅವರು ಭಾಷೆಯನ್ನು ಅರ್ಥವೆಂಬ ಬಂಧನದಿಂದ ಮುಕ್ತಗೊಳಿಸಿದ್ದಾರೆ. ಭಾಷಣ ಮಾಡುವವನು ತಾನು ಭಾಷೆಯನ್ನು ಸಂಭ್ರಮಿಸಿ ಬಳಸದಿದ್ದರೆ, ಸಭಿಕರನ್ನು ಸಂಭ್ರಮಿಸುವಂತೆ ಮಾಡಲಾರ. ಭಾಷೆ ಅರ್ಥಬಂಧಿ ಆದಲ್ಲಿ ಅದಕ್ಕಿರುವ ಸೌಂದರ್ಯ, ಸೌಲಭ್ಯಗಳನ್ನು ಮರೆತಂತೆಯೇ. ಮನುಷ್ಯ ಬುದ್ಧಿವಂತನಾಗುತ್ತಿದ್ದಂತೆ ಕರುಳ, ಧ್ವನಿ ಹಾಗೂ ತಂತುಗಳ ಭಾಷೆ ಮರೆತು ಬುದ್ಧಿಯ ಭಾಷೆ ಹಿಂದೆ ಹೊರಟಿದ್ದಾನೆ. ಬುದ್ಧಿಗೆ ಭಾಷೆ ಸಿಲುಕಿದರೆ ಅದು ಇನ್ನೊಬ್ಬರನ್ನು ತಾಕುವುದಿಲ್ಲ (ಪರಿಣಾಮಕಾರಿ ಆಗದು) ಎಂದು ಹೇಳಿದರು.

ಬರಹ ಮಾತಿಗಿಂತ ಶ್ರೇಷ್ಠವಲ್ಲ: ನನಗೆ ಈಗಲೂ ಅನ್ನಿಸುವುದು ನಾವು ಮಾತಿನ ಎಲ್ಲಾ ಸಾಧ್ಯತೆಗಳನ್ನು ಬರವಣಿಗೆಯಲ್ಲಿ ಹಿಡಿಯುವ ಪ್ರಯತ್ನ ಮಾಡುತ್ತಿದ್ದೇವಷ್ಟೆ. ಆದರೆ ಬರಹ ಯಾವತ್ತಿಗೂ ಮಾತಿಗಿಂತ ಶ್ರೇಷ್ಠವಾದುದಲ್ಲ. ಜನ ಜಗತ್ತು ಗ್ರಹಿಸುವ ಕ್ರಮಕ್ಕೆ ಆ ಜನರ ಭಾಷೆ ಒಳಾದರೆ ಆಗ ಆ ಭಾಷೆಯ ಶಬ್ದಕೋಶ ಹಾಗೂ ರಚನೆ ವಿಕಾಸಗೊಳ್ಳಲು ಸಾಧ್ಯ ಎಂದು ತಿಳಿಸಿದರು.

ಯಾವ ಭಾಷೆ ಮೊದಲೆಂಬುದು ಮುಖ್ಯವಲ್ಲ: ಈಗ ಯಾವ ಭಾಷೆ ಮೊದಲು ಎಂಬಿತ್ಯಾದಿಯಾಗಿ ಚರ್ಚೆ ಶುರುವಾಯಿತಲ್ಲವೇ? ಯಾವ ಭಾಷೆ ಮೊದಲು ಹುಟ್ಟಿತು ಎಂಬುದು ದೊಡ್ಡ ವಿಷಯವಲ್ಲ. ಅದು ಭಾಷಾಶಾಸ್ತ್ರಜ್ಞರಿಗೆ ಬಿಟ್ಟ ವಿಚಾರ. ನಮ್ಮ ಗ್ರಹಿಕೆಗಳು ಬೆಳೆಯದೇ ಇದ್ದರೆ ನಮ್ಮ ಭಾಷೆ ಸಹ ಬೆಳೆಯಲು ಸಾಧ್ಯವಿಲ್ಲ. ಪ್ರತಿಯೊಬ್ಬನಿಗೂ ತಾನು ಆಡುವ ಭಾಷೆ ಸೋಜಿಗ ಎಂದು ಅನುಭವಿಸುವ ಶಕ್ತಿ ಸಾಧ್ಯವಾದರೆ ಆ ಭಾಷೆ ಬೇರೆ ಇನ್ನೇನೂ ಬಿಟ್ಟು ಕೊಡಲಿದೆ ಎಂದರು.

ಕಥೆ, ಕಾದಂಬರಿಗಳಲ್ಲಿ ಮಾನವೀಯತೆ ಜೊತೆ ಸಾಮಾಜಿಕ ಪ್ರಸ್ತುತತೆಯನ್ನು ಪರಿಗಣಿಸುವುದು ಮುಖ್ಯ



'ಬರವಣಿಗೆಯಲ್ಲಿ ಸಾಮಾಜಿಕ ಪ್ರಸ್ತುತತೆ' ಕುರಿತು ನಡೆದ ಸಂವಾದದಲ್ಲಿ ಲೇಖಕಿಯರಾದ ಅನಿಶಾ ಲಾಲ್ವಾನಿ, ದಿವ್ಯತಾ ರಾಜಾರಾಮ್ ಮತ್ತು ಶಾಲಿನಿ ಪಿ.ಸಾವ್ಕರ್ ಭಾಗವಹಿಸಿದ್ದರು.

ಮೈಸೂರು, ಜು.6(ಎಂಕೆ)– ಕಥೆ, ಕಾದಂಬರಿಗಳ ಬರವಣಿಗೆಯಲ್ಲಿ ಮಾನವೀಯತೆಯ ಜೊತೆಗೆ ಸಾಮಾಜಿಕ ಪ್ರಸ್ತುತತೆಯನ್ನು ಪರಿಗಣಿಸುವುದು ಮುಖ್ಯವಾಗಿದೆ ಎಂದು ಲೇಖಕಿಯರಾದ ಅನಿಶಾ ಲಾಲ್ವಾನಿ, ದಿವ್ಯತಾ ರಾಜಾರಾಮ್ ಮತ್ತು ಶಾಲಿನಿ ಪಿ.ಸಾವ್ಕರ್ ಅಭಿಪ್ರಾಯಪಟ್ಟರು.

ಮೈಸೂರು ಸಾಹಿತ್ಯ ಸಂಭ್ರಮದ 9ನೇ ಆವೃತ್ತಿಯಲ್ಲಿ 'ಬರವಣಿಗೆಯಲ್ಲಿ ಸಾಮಾಜಿಕ ಪ್ರಸ್ತುತತೆ' ಕುರಿತು ಸಂವಾದ ನಡೆಸಿದ ಅವರು, ಆಧುನಿಕ ಯುಗದಲ್ಲಿ ಕೃತಕ ಬುದ್ಧಿಮತ್ತೆಯು ಕಥೆ, ಕಾದಂಬರಿಗಳನ್ನು ಹೇಳುತ್ತದೆ. ಆದರೆ, ಕೃತ ಬುದ್ಧಿಮತ್ತೆ ಹೇಳುವ ಕಥೆ, ಕಾದಂಬರಿಗಳು ಸಾಮಾಜಿಕ ಪ್ರಸ್ತುತತೆ ಮತ್ತು ಮಾನವೀಯ ಮೌಲ್ಯವನ್ನು ಒಳಗೊಂಡಿರುವುದಿಲ್ಲ ಎಂದರು.

ಲೇಖಕರು ಬರವಣಿಗೆಯ ಮೂಲಕ ತಮ್ಮಲ್ಲಿರುವ ಭಾವನೆಗಳನ್ನು ವ್ಯಕ್ತಪಡಿಸುತ್ತಾರೆ. ಆದರೆ, ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಭಿನ್ನವಾಗಿದೆ. ಮನುಷ್ಯ ಮತ್ತು ಎಐ ತಂತ್ರಜ್ಞಾನದ ಆಲೋಚನೆಗಳಿಗೆ ಸಾಕಷ್ಟು ವ್ಯತ್ಯಾಸವಿರಲಿದೆ. ಪುಸ್ತಕಗಳನ್ನು ಓದುವುದು, ಬರೆಯುವುದು ಮನರಂಜನೆಯ ಒಂದು ಭಾಗವಾಗಿದ್ದು, ಮನಸ್ಸಿಗೆ ಮುದ ನೀಡುವಂತಿರಬೇಕೇ ಹೊರತು ಯಾಂತ್ರಿಕ ರೂಪ ಪಡೆಯಬಾರದು ಎಂದರು.

ಲೇಖಕಿ ದಿವ್ಯತಾ ರಾಜಾರಾಮ್ ತಮ್ಮ 'ದಿ ಸೀಕ್ರೆಟ್ಸ್ ವಿ ಕೀಪ್' ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಈ ಕೃತಿಯಲ್ಲಿ ಸೋತು ಗೆಲ್ಲುವ ಸ್ಫೂರ್ತಿಯ ಅಂಶ ಅಡಕವಾಗಿದೆ. ಭಾವನಾತ್ಮಕ ಸ್ಥಿತಿಸ್ಥಾಪಕತ್ವವನ್ನು ಅನ್ವೇಷಿಸುತ್ತದೆ. ಓದುಗರನ್ನು ಮರುಶೋಧನೆಯ ಜಗತ್ತಿಗೆ ಆಹ್ವಾನಿಸುತ್ತದೆ ಎಂದು ತಿಳಿಸಿದರೆ, ಲೇಖಕಿ ಅನಿಶಾ ಲಾಲ್ವಾನಿ ಮಾತನಾಡಿ, ಆತ್ಮಾವಲೋಕನ ಮತ್ತು ಪ್ರೇರಿತ ಅಂಶಗಳಿಂದ 'ಗರ್ಲ್ಸ್ ಹೂ ಸ್ಟೇ' ಕೃತಿ ರೂಪ ತಾಳಿದೆ. ಈ ಪುಸ್ತಕವು ತನ್ನದೇ ಆದ ಮತ್ತು ತನ್ನ ಸುತ್ತಲಿನ ಜನರ ಸಂಕೀರ್ಣ ಆಂತರಿಕ ಭೂದೃಶ್ಯಗಳನ್ನು ನ್ಯಾವಿಗೇಟ್ ಮಾಡುವ ಮಾರ್ಗವಾಗಿದೆ ಎಂದು ಹೇಳಿದರು.

ಲೇಖಕಿ ಶಾಲಿನಿ ಪಿ. ಸಾವ್ಕರ್, ತಮ್ಮ 'ಕನ್ಫೆಷನ್ಸ್ ಆಫ್ ಆನ್ ಐಟಿ ಎಂಪ್ಲಾಯಿ' ಕಾದಂಬರಿಯನ್ನು ಪರಿಚಯಿಸಿದರು, ಇದು ಕಾರ್ಪೊರೇಟ್ ಜೀವನದ ಬೇಡಿಕೆಗಳನ್ನು ತಿಳಿಸುವ, ಆಂತರಿಕ ಹೋರಾಟಗಳು, ಸಾಮಾಜಿಕ ನಿರೀಕ್ಷೆಗಳು ಮತ್ತು ಸಾರ್ವತ್ರಿಕ ಅನ್ವೇಷಣೆಯೊಂದಿಗೆ ಹೋರಾಡುವ ನಾಲ್ಕು ವಿಶಿಷ್ಟ ಪಾತ್ರಗಳ ಮೇಲೆ ಬೆಳಕು ಚೆಲ್ಲುತ್ತದೆ ಎಂದರು. ಪತ್ರಕರ್ತೆ ಭಾರತಿ ಘನಶ್ಯಾಮ್ ನಿರೂಪಿಸಿದರು.

ಮೈಸೂರು ಸಾಹಿತ್ಯ ಸಂಭ್ರಮದಲ್ಲಿ ಮೈಸೂರಿನ ಕಲೆ, ಬೆಂಗಳೂರಿನ ಲಾಲ್‌ಬಾಗ್ ವೈಶಿಷ್ಟ್ಯ, ಹೈದರಾಬಾದ್‌ನ ಇತಿಹಾಸ ಅನಾವರಣ



'ಸಂಗೀತ ಮತ್ತು ಇತಿಹಾಸದ ಪರಂಪರೆಗಳೊಂದಿಗೆ ಹೊಳೆಯುವ ರತ್ನ ನಗರಗಳು' ಸಂವಾದದಲ್ಲಿ ಉದ್ಯಮಿ ಆರ್.ಜಿ.ಸಿಂಗ್, ಬರಹಗಾರ ಸುರೇಶ್ ಜಯರಾಮ್, ಲೇಖಕಿ ಮೌಪಿಯ ಬಸು ಭಾಗವಹಿಸಿದ್ದರು.

ಮೈಸೂರು, ಜು.6(ಎಂಕೆ)– ಸಾಂಸ್ಕೃತಿಕ ನಗರಿ ಮೈಸೂರಿನ ಕಲೆ, ಬೆಂಗಳೂರಿನ ಲಾಲ್‌ಬಾಗ್ ವೈಶಿಷ್ಟ್ಯ ಹಾಗೂ ಹೈದರಾಬಾದ್‌ನ ಇತಿಹಾಸವನ್ನು ಮೈಸೂರು ಸಾಹಿತ್ಯ ಸಂಭ್ರಮದಲ್ಲಿ ಪರಿಚಯಿಸಲಾಯಿತು.

2ನೇ ದಿನ 'ಕಲೆ, ಸಂಗೀತ ಮತ್ತು ಇತಿಹಾಸದ ಪರಂಪರೆಗಳೊಂದಿಗೆ ಹೊಳೆಯುವ ರತ್ನ ನಗರಗಳು' ಸಂವಾದದಲ್ಲಿ ಉದ್ಯಮಿ ಆರ್.ಜಿ.ಸಿಂಗ್, ಮೈಸೂರು ಕಲೆಯ ಬಗ್ಗೆ ತಿಳಿಸಿದರೆ, ಬರಹಗಾರ ಸುರೇಶ್ ಜಯರಾಮ್ ಬೆಂಗಳೂರಿನ ಲಾಲ್ ಬಾಗ್ ಹಾಗೂ ಲೇಖಕಿ ಮೌಪಿಯ ಬಸು ಹೈದರಾಬಾದ್ ಕುರಿತು ತಿಳಿಸಿದರು.


ಮೈಸೂರಿನ ಕಲೆ ಬಿಂಬಿಸುವ ಅತ್ಯಾಕರ್ಷಕ ಚಿತ್ರಪಟಗಳನ್ನು ಪರಿಚಯಿಸಿದ ಉದ್ಯಮಿ ಆರ್.ಜಿ.ಸಿಂಗ್, ಮೈಸೂರಿನ ಶ್ರೇಷ್ಠ ದೃಶ್ಯ ಕಲಾವಿದರ ಪರಂಪರೆಯನ್ನು ಶ್ಲಾಘಿಸಿದರು. ಅರಮನೆಯ ದರ್ಬಾರ್ ಹಾಲ್ ಮತ್ತು ಕಲ್ಯಾಣ ಮಂಟಪಕ್ಕೆ ವಿಶಿಷ್ಟವಾದ ಬಣ್ಣಗಳನ್ನು ನೀಡಿದ ಕಲಾವಿದರು, ಮೈಸೂರಿಗೆ ಶಾಶ್ವತ ದೃಶ್ಯ ಗುರುತ ನೀಡಿದ್ದಾರೆ ಎಂದು ಶ್ಲಾಘಿಸಿದರು.

ಬೆಂಗಳೂರಿಗೆ ಉದ್ಯಾನನಗರಿ ಎಂಬ ಖ್ಯಾತಿ ಬರಲು ಮುಖ್ಯ ಕಾರಣವಾದ ಲಾಲ್ ಬಾಗ್ ಕುರಿತು ಮಾಹಿತಿ ಹಂಚಿಕೊಂಡ ಬರಹಗಾರ ಸುರೇಶ್ ಜಯರಾಮ್, ತಮ್ಮ 'ಬೆಂಗಳೂರ್ ಲಾಲ್‌ಬಾಗ್: ಎ ಕ್ರಾನಿಕಲ್ ಆಫ್ ದಿ ಗಾರ್ಡನ್ ಅಂಡ್ ದಿ ಸಿಟಿ' ಕೃತಿಯನ್ನು ಪರಿಚಯಿಸುವ ಮೂಲಕ ಲಾಲ್ ಬಾಗ್‌ನ ವಿನ್ಯಾಸ, ಅಭಿವೃದ್ಧಿಗೊಂಡ ಇತಿಹಾಸ ಮಜಲುಗಳನ್ನು ತಿಳಿಸಿಕೊಟ್ಟರು.

ಹಾಗೆಯೇ ತಮ್ಮ 'ಭಾಗಮತಿ: ವೈ ಹೈದರಾಬಾದ್ಸ್ ಲಾಸ್ಟ್ ಕ್ವೀನ್ ಈಸ್ ದಿ ಸೋಲ್ ಆಫ್ ದಿ ಸಿಟಿ' ಪುಸ್ತಕದ ಕುರಿತು ಮಾತನಾಡಿದ ಲೇಖಕಿ ಮೌಪಿಯಾ ಬಸು, ಹೈದರಾಬಾದ್‌ಗೆ ತಮ್ಮ ಪ್ರಯಾಣವನ್ನು ಹಂಚಿಕೊಂಡರು. ಹೈದರಾವಾದ್ ಕೋಮು ಸೌಹಾರ್ದತೆಯ ಚೈತನ್ಯದಿಂದ ಪ್ರಭಾವಿತವಾಯಿತು ಎಂದು ತಿಳಿಸಿದರು. ರಂಗಭೂಮಿ ಕಲಾವಿದೆ ಪ್ರೀತಿ ನಾಗರಾಜ್ ನಿರೂಪಣೆ ನಡೆಸಿಕೊಟ್ಟರು.

ಕಥೆ ಬರೆಯುವ ಮುನ್ನ ಸಾಮಾಜಿಕ ಜವಾಬ್ದಾರಿ, ಭಾಷೆ ಬಳಕೆಯ ಇತಿ–ಮಿತಿಯ ಅರಿವು ಅಗತ್ಯ

ಲೇಖಕ ಜೋಗಿ ಅಭಿಪ್ರಾಯ



'ಕಥೆ ಹುಟ್ಟುವ ಹೊತ್ತು' ಕುರಿತ ಸಂವಾದದಲ್ಲಿ ಲೇಖಕರಾದ ಜೋಗಿ, ನಾಗರಾಜ ವಸ್ತಾರೆ ಭಾಗವಹಿಸಿದ್ದರು. ಹೆಚ್.ಬಿ.ಇಂದ್ರಕುಮಾರ್ ಉಪಸ್ಥಿತರಿದ್ದರು.

ಮೈಸೂರು, ಜು.6(ಎಂಕೆ)– ಹೊತ್ತು–ಗೊತ್ತಿಲ್ಲದೆ ಮನದಲ್ಲಿ ಹುಟ್ಟುವ ಕಥೆಯನ್ನು ಬರೆಯುವ ಮುನ್ನ ಸಾಮಾಜಿಕ ಜವಾಬ್ದಾರಿ ಮತ್ತು ಭಾಷೆ ಬಳಕೆಯ ಇತಿ–ಮಿತಿಯ ಅರಿವು ಅಗತ್ಯ ಎಂದು ಲೇಖಕರಾದ ಜೋಗಿ ತಿಳಿಸಿದರು.

ಮೈಸೂರು ಸಾಹಿತ್ಯ ಸಂಭ್ರಮದ 9ನೇ ಆವೃತ್ತಿಯ 2ನೇ ದಿನ 'ಕಥೆ ಹುಟ್ಟುವ ಹೊತ್ತು' ಕುರಿತ ಸಂವಾದದಲ್ಲಿ ಮಾತನಾಡಿದ ಲೇಖಕ ಜೋಗಿ ಮಾತನಾಡಿ, ಕಥೆ ಬರೆಯುವ ಸಂದರ್ಭದಲ್ಲಿ ಸಾಮಾಜಿಕ ಜವಾಬ್ದಾರಿ ಮತ್ತು ಲೇಖಕನ ಮಿತಿಯನ್ನು ನೋಡಬೇಕು. 'ಹಸ್ತಿನಾವತಿ' ಕಾದಂಬರಿಯನ್ನು ನಾನು ಒಂದು ನೂರು ಪುಟದಲ್ಲಿ ಮುಗಿಸಬೇಕು ಎಂದುಕೊಂಡಿದ್ದೆ. ಆದರೆ, ಬರೆಯುತ್ತಾ ಬರೆಯುತ್ತಾ ಕೈ ಮೀರಿತು. ಜೀವನದಲ್ಲಿಯೂ ಹಾಗೆಯೇ ನಾವು ಹೀಗೆ ಬದುಕಬೇಕು ಎಂದುಕೊಳ್ಳುತ್ತೇವೆ. ಆದರೆ, ಬೇರೆಯದ್ದೇ ರೀತಿಯಲ್ಲಿ ಬದುಕುತ್ತೇವೆ ಎಂದು ಹೇಳಿದರು.

ಮಹಾಭಾರತವನ್ನು ಬರೆದ ವ್ಯಾಸರೂ ಅದಕ್ಕೆ ಸಂಬಂಧಿಸಿದ್ದರೂ, ತಪ್ಪು–ಒಪ್ಪುಗಳನ್ನು ಹೇಳಲಿಲ್ಲವೇಕೆ ಎಂದು ಯೋಚಿಸುವಾಗ, ಲೇಖಕನಿಗೆ ತನ್ನದೇ ಆದ ಇತಿ–ಮಿತಿ ಇರುತ್ತದೆ. ಆತ ಪಾತ್ರಗಳ ಮನೋಧರ್ಮದ ಒಳಗೆ ಪ್ರವೇಶಿಸುವಂತಿಲ್ಲ. ಆತನಿಗೆ ಸಾಮಾಜಿಕ ಜವಾಬ್ದಾರಿ ಮತ್ತು ಇತಿ–ಮಿತಿ ನೋಡಬೇಕು ಎಂದರು.

ನನಗೆ ಬರೆಯುವುದು ಒಂದು ಚಟ. ಯಾರ್‍ಯಾರನ್ನೋ ನೋಡಿದಾಗ ಕಥೆ ಹುಟ್ಟಿಕೊಳ್ಳುತ್ತದೆ. ನಮ್ಮ ಊರಿಗೆ ಒಂದೊಂದು ಬಾರಿ ಹೋದಾಗಲು ಒಂದೊಂದು ರೀತಿ ಕಾಣುತ್ತದೆ. ಕೋವಿಡ್‌ಗೆ ಮುನ್ನ ಹೋಗಿದ್ದಾಗ ವೃದ್ಧಾಶ್ರಮದಂತೆ ಇತ್ತು. ಕೋವಿಡ್ ಬಳಿಕ ಹೋದಾಗ ಎಲ್ಲರೂ ಹಳ್ಳಿಗೆ ಬಂದಿದ್ದರು. ಹೀಗೆ ಒಂದೊಂದು ರೀತಿ ಕಂಡಾಗಲೂ ಒಂದೊಂದು ಕಥೇ ಹುಟ್ಟಿಕೊಳ್ಳುತ್ತದೆ ಮುಖ್ಯವಾಗಿ ಕಥೆಯ ವಸ್ತು, ಸನ್ನಿವೇಶ ಮುಖ್ಯವಾಗುತ್ತದೆ. ಒಂದು ಪಾತ್ರದ ಸುತ್ತ ಕಥೆ ಎಣೆದುಕೊಂಡು ಹೋಗುತ್ತೇನೆ. ಕತೆಗಾರ ಒಂದಲ್ಲ ಒಂದು ವಿಷಯವನ್ನು ಹೊಸದಾಗಿ ಹೇಳಿಕೊಳ್ಳಬೇಕು ಎಂಬ ಗುಂಗಿನಲ್ಲಿ ಇರುತ್ತಾನೆ ಎಂದು ಹೇಳಿದರು.

ಅನ್ನಿಸಿದ ಕೂಡಲೇ ಬರೆಯಬೇಕು: ಲೇಖಕ ನಾಗರಾಜ ವಸ್ತಾರೆ ಮಾತನಾಡಿ, ಕಥೆ ಬರೆಯಬೇಕು ಅನ್ನಿಸಿದ ಕೂಡಲೇ ಬರೆಯಬೇಕು. ಇಲ್ಲವಾದರೆ ಆ ಕ್ಷಣದಲ್ಲಿ ಮನಸ್ಸಿಗೆ ವಿಚಾರಗಳು, ಕೆಲ ಹೊತ್ತಿನಲ್ಲಿ ಮರೆಯಾಗಬಹುದು. ಆದ್ದರಿಂದ ನನಗೆ ಕಥೆ ಬರೆಯಬೇಕು ಎಂದು ಅನ್ನಿಸಿದ ಕೂಡಲೇ ಬರೆಯುತ್ತೇನೆ. ನಾವು ಹಿಂದೆ ಗುಡಿಸಲಿನಲ್ಲಿದ್ದೆವು. ಹೆಂಚಿನ ಮನೆಗೆ ಬಂದಾಗ ಎಲ್ಲಾವೂ ಸರಿ ಇಲ್ಲ ಗುಡಿಸಲೇ ಸರಿ ಅಂದೆವು. ಹೆಂಚಿನ ಮನೆ ಬಿಟ್ಟು ತಾರಸಿಗೆ ಮನೆಗೆ ಬಂದಾಗ ಹೆಂಚಿನ ಮನೆಯೇ ಸರಿ ಎಂದೆವು. ಈಗ ಪುಸ್ತಕ ಬಿಟ್ಟು ಟ್ಯಾಬ್‌ಗೆ ಬಂದಾಗ ಯಾಕೆ ಆತಂಕಪಡಬೇಕು. ಹಿಂದಿನದನ್ನು ಹಿಡಿದುಕೊಂಡು ಜಗ್ಗಾಡ ಬೇಕಿಲ್ಲ ನನ್ನ ಅನುಭವ ದಾಟಿಸಲು ಕನ್ನಡ ಬಳಸುತ್ತಿದ್ದೇನೆ. ಕನ್ನಡದ ಮೆರವಣಿಗೆ ಆಗಬೇಕು ಎಂದು ಅಭಿಪ್ರಾಯಿಸಿದರು. ಲೇಖಕ ಹೆಚ್.ಬಿ. ಇಂದ್ರಕುಮಾರ್ ಸಂವಾದ ನಡೆಸಿಕೊಟ್ಟರು.

ಲೇಖಕರಿಂದ ಉತ್ತಮ ಪುಸ್ತಕಗಳು ಬರುತ್ತಿದ್ದರೂ ಓದುಗರ ಸಂಖ್ಯೆ ವಿರಳ

ಸಂವಹನ ಪ್ರಕಾಶನದ ಡಿ.ಎನ್.ಲೋಕಪ್ಪ ಬೇಸರ



ಮೈಸೂರು ಸಾಹಿತ್ಯ ಸಂಭ್ರಮದಲ್ಲಿ 'ಕನ್ನಡ ಸಾಹಿತ್ಯಕ್ಕೆ ಸದ್ದಿಲ್ಲದ ಸಾಹಸಮಯ ಸಹಕಾರ ನೀಡುವ ಪ್ರಕಾಶಕರು ಮತ್ತು ಸವಾಲುಗಳು' ಕುರಿತಾದ ವಿಚಾರ ಸಂಕಿರಣ ನಡೆಯಿತು.

ಮೈಸೂರು, ಜು.6(ಎಸ್‌ಪಿಎನ್)– ಕನ್ನಡದಲ್ಲಿ ಉತ್ತಮ ಪುಸ್ತಕಗಳು ಬರುತ್ತಿವೆ. ಉತ್ತಮ ಲೇಖಕರೂ ಇದ್ದಾರೆ. ಆದರೆ, ದಿನೇ ದಿನೆ ಓದುಗರ ಸಂಖ್ಯೆ ವಿರಳವಾಗುತ್ತಿದೆ ಎಂದು ಸಂವಹನ ಪ್ರಕಾಶನದ ಡಿ.ಎನ್.ಲೋಕಪ್ಪ ಬೇಸರ ವ್ಯಕ್ತಪಡಿಸಿದರು.

ಮೈಸೂರು ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಮೈಸೂರು ಸಾಹಿತ್ಯ ಸಂಭ್ರಮದ ಎರಡನೇ ದಿನದ 'ಕನ್ನಡ ಸಾಹಿತ್ಯಕ್ಕೆ ಸದ್ದಿಲ್ಲದ ಸಾಹಸಮಯ ಸಹಕಾರ ನೀಡುವ ಪ್ರಕಾಶಕರು ಮತ್ತು ಸವಾಲುಗಳು' ಕುರಿತಾದ ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಮಾತನಾಡಿದರು.

ಸಭಿಕರೊಬ್ಬರು ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಹೆಚ್ಚಿನ ಪುಸ್ತಕಗಳು ಬರುತ್ತಿಲ್ಲ. ಇದಕ್ಕೆ ಕಾರಣವೇನು ಎಂದು ವೇದಿಕೆಯಲ್ಲಿ ಪ್ರಕಾಶಕರಿಗೆ ಪ್ರಶ್ನಿಸಿದಾಗ, ಇದಕ್ಕೆ ಪ್ರತಿಕ್ರಿಯಿಸಿ ಇತ್ತೀಚೆಗೆ ಮಕ್ಕಳ ಸಾಹಿತ್ಯ ಸಮ್ಮೇಳನ ಆಯೋಜಿಸಲಾಗಿತ್ತು. ಎಂದಿನಂತೆ ಶಾಲಾ ಮಕ್ಕಳು, ಶಿಕ್ಷಕರೊಂದಿಗೆ ಈ ಸಮ್ಮೇಳನಕ್ಕೆ ದಂಡಿದಂಡಿಯಾಗಿ ಬಂದು, ಈ ಪುಸ್ತಕ ಮೇಳಕ್ಕೂ ಕಾಲಿಟ್ಟರು. ಈ ವೇಳೆ ಮಕ್ಕಳು ಕನ್ನಡ ಪುಸ್ತಕಗಳನ್ನು ನೋಡಿ, ಈ ಪುಸ್ತಕ ಇಂಗ್ಲಿಷ್‌ನಲ್ಲಿ ಇಲ್ಲವೆ ಎಂದು ಕೇಳಿದ್ದ ಪ್ರಸಂಗವನ್ನು ವಿವರಿಸಿದರು.

ಈ ನಡುವೆ ನಿರೂಪಕ ಗಣೇಶ್ ಅಮೀನ್‌ಗಡ ಮಧ್ಯಪ್ರವೇಶಿಸಿ, ಉತ್ತಮ ಪುಸ್ತಕಗಳನ್ನು ಜನರು ಇಂದಿಗೂ ಖರೀದಿಸಿ ಓದುತ್ತಾರೆ. ಇದಕ್ಕೆ ಉದಾಹರಣೆ ಎಂದರೆ ಅಭಿರುಚಿ ಪ್ರಕಾಶನ ಹೊರತಂದಿರುವ ಬೂಕರ್ ಪ್ರಶಸ್ತಿ ಪುರಸ್ಕೃತೆ ಬಾನು ಮುಸ್ತಾಕ್ ರಚಿತ 'ಹಸೀನಾ' ಮತ್ತು ಇತರೆ ಕಥೆಗಳು' 4 ಬಾರಿ ಮುದ್ರಣಗೊಂಡು 9 ಸಾವಿರ ಪುಸ್ತಕಗಳು ಮಾರಾಟವಾಗಿವೆ. 'ಎದೆಯ ಹಣತೆ' ಪುಸ್ತಕ 5ಕ್ಕೂ ಹೆಚ್ಚು ಬಾರಿ ಮುದ್ರಣಗೊಂಡು 6 ಸಾವಿರ ಪುಸ್ತಕಗಳು ಮಾರಾಟವಾಗಿವೆ. ಬೂಕರ್ ಪ್ರಶಸ್ತಿ ಬಂದು ಕೆಲವೇ ದಿನಗಳಲ್ಲಿ ಜನರಿಂದ ಇಷ್ಟೊಂದು ಪ್ರೋತ್ಸಾಹ ದೊರಕುತ್ತಿರುವುದು ಉತ್ತಮ ವಿಚಾರ. ಪ್ರಕಾಶಕ ಶ್ರೀರಾಮು ಅವರು ಲೇಖಕ ಪೂರ್ಣಚಂದ್ರ ತೇಜಸ್ವಿ ಅವರ ಪುಸ್ತಕಗಳನು ಪ್ರಕಟಿಸಿದ್ದು, ಇವರ ಪ್ರಕಟಿಸಿರುವ 'ಕರ್ವಾಲೋ' ಪುಸ್ತಕ 83ನೇ ಮುದ್ರಣ ಕಂಡಿರುವುದು ಸಂತೋಷದ ವಿಚಾರ ಎಂದರು.

> ಪುಸ್ತಕವನ್ನು ಕೈಯಲ್ಲಿ ಹಿಡಿದು ಓದುವ ಸುಖವೇ ಬೇರೆ. ಈ ಅನುಭವವೇ ಉದ್ಯಮವನ್ನು ಕಾಪಾಡುತ್ತಿರುವುದು. ಪುಸ್ತಕವನ್ನು ಜನರಿಗೆ ತಲುಪಿಸಲು ವಿಭಿನ್ನ ಕ್ರಮಗಳನ್ನು ಅನುಸರಿಸಬೇಕು. ಓದುಗರು ಸಾಕಷ್ಟಿದ್ದು, ಬರೆಯುವವರ ಸಂಖ್ಯೆಯೂ ಅಪಾರ. ಅಲ್ಲದೆ, ಇಂದಿನ ಮಕ್ಕಳಿಗೆ ಕನ್ನಡವೇ ಬರುತ್ತಿಲ್ಲ. ಅವರಿಗಾಗಿ ಪುಸ್ತಕ ಪ್ರಕಟಿಸಿದರೆ, ಈ ಪುಸ್ತಕ ಇಂಗ್ಲಿಷ್‌ನಲ್ಲಿ ಇಲ್ಲವೇ ಎಂದು ಕೇಳುತ್ತಾರೆ. ಒಂದು ತಲೆಮಾರಿಗೆ ಕನ್ನಡ ಕಲಿಸಿದರೆ ಎರಡು ತಲೆಮಾರಿನ ಓದುಗರನ್ನು ಬೆಳೆಸಬಹುದು.
>
> – ವೀರಕಪುತ್ರ ಶ್ರೀನಿವಾಸ್, ಪ್ರಕಾಶಕ

ಪುಸ್ತಕ ಪ್ರಕಾಶನದ ಪ್ರೊ.ಬಿ.ಎನ್.ಶ್ರೀರಾಮು ಮಾತನಾಡಿ, ಕನ್ನಡ ಪುಸ್ತಕ ಉದ್ಯಮ ಬೆಳವಣಿಗೆಗೆ ಸರ್ಕಾರದಿಂದಲೂ ಸಹ ಹೆಚ್ಚಿನ ಪ್ರೋತ್ಸಾಹ ದೊರಕುತ್ತಿಲ್ಲ. ಇದರಿಂದ ಉದ್ಯಮ ಸಂಕಷ್ಟ ಪರಿಸ್ಥಿತಿ ಎದುರಿಸುತ್ತಿದೆ. ಸಂಕಷ್ಟದ ಪರಿಸ್ಥಿತಿ ನಡುವೆಯು ಪ್ರಕಾಶಕರು ಕನ್ನಡ ಉದ್ಯಮ ಬೆಳೆಸಲು ಮುಂದಾಗಿದ್ದಾರೆ. ಮಕ್ಕಳ ಸಾಹಿತ್ಯ ಕ್ಷೇತ್ರ ಅಭಿವೃದ್ಧಿ ಹೊಂದಲು ಮನೆಯಿಂದಲೇ ಮಕ್ಕಳಿಗೆ ಪುಸ್ತಕ ಪ್ರೇಮ ಬೆಳಸಿದಾಗ ಮಾತ್ರ ದೊಡ್ಡವರಾದ ಮೇಲೆ ಪುಸ್ತಕ ಓದುವ ಅಭಿರುಚಿ ಬೆಳೆಯುತ್ತದೆ ಎಂದರು.

ವೀರಲೋಕ ಪ್ರಕಾಶನದ ವೀರಕಪುತ್ರ ಶ್ರೀನಿವಾಸ ಮಾತನಾಡಿ, ಓದುಗರು ಮನಸ್ಸು ಮಾಡಿದರೆ, ಕನ್ನಡ ಪುಸ್ತಕವನ್ನು ಬೆಳೆಸಲು ಅವಕಾಶವಿದೆ. ಆದರೆ, ಓದುಗರೇ ಇಷ್ಟಪಡದಿದ್ದರೆ ಕನ್ನಡ ಪುಸ್ತಕೋದ್ಯಮ ಬೆಳವಣಿಗೆ ಕುಂಟುತ್ತದೆ. ಹಾಗಾಗಿ ನಿರ್ದಿಷ್ಟ ಕ್ಷೇತ್ರದ ಪುಸ್ತಕಗಳನ್ನು ಓದುಗರು ಖರೀದಿಸುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು. ಈ ವೇಳೆ ವೀರಲೋಕ ಪ್ರಕಾಶನದ ವೀರಕಪುತ್ರ ಶ್ರೀನಿವಾಸ, ಪುಸ್ತಕ ಪ್ರಕಾಶನದ ಪ್ರೊ.ಬಿ.ಎನ್.ಶ್ರೀರಾಮು, ಚಿಂತನಚಿತ್ತಾರ ಪ್ರಕಾಶನದ ನಿಂಗರಾಜ್ ಚಿತ್ತಣ್ಣವರ್, ಅಭಿರುಚಿ ಗಣೇಶ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಸೋಮವಾರ 7 ಜುಲೈ 2025

ಪುತ್ರನ ಅಂಗಾಂಗ ದಾನ ಮಾಡಿ ಸಾವಿನಲ್ಲೂ ಸಾರ್ಥಕತೆ ಮೆರೆದ ಪೋಷಕರು

ರಸ್ತೆ ಅಪಘಾತದಲ್ಲಿ ಮೃತಪಟ್ಟ ನೀತಿಮಂಗಲದ ರಘು ಕುಟುಂಬದ ಮಾನವೀಯತೆ..!



ಎನ್.ರಘು

ಕೆ.ಆರ್.ಪೇಟೆ,ಜು.6(ಶ್ರೀನಿವಾಸ್)– ತಾಲೂಕಿನ ಶೀಳನೆರೆ ಹೋಬಳಿಯ ನೀತಿಮಂಗಲ ಗ್ರಾಮದಲ್ಲಿ ಇತ್ತೀಚೆಗೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ಗಾಯಗೊಂಡು ಮೆದುಳು ನಿಷ್ಕ್ರಿಯಗೊಂಡಿದ್ದ ತಾಲೂಕಿನ ಹರಳಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನೀತಿಮಂಗಲ ಗ್ರಾಮದ ನಂಜುಂಡಯ್ಯ ಮತ್ತು ಬೋರಮ್ಮ ದಂಪತಿಗಳ ಪುತ್ರ ಎನ್.ರಘು(36) ಅವರ ಅಂಗಾಂಗಗಳನ್ನು ಕುಟುಂಬದವರು ದಾನ ಮಾಡುವ ಮೂಲಕ ಸಾವಿನ ದುಃಖದಲ್ಲಿಯೂ ಸಾರ್ಥಕತೆ ಮೆರೆದಿದ್ದಾರೆ.

ಜೂ.26ರಂದು ರಘು ನೀತಿಮಂಗಲ ಗ್ರಾಮದ ಕ್ರಾಸ್‌ನಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಹಿಂದಿನಿಂದ ಬಂದ ಬೈಕೊಂದು ಡಿಕ್ಕಿ ಹೊಡೆದ ಪರಿಣಾಮ ರಘು ಅವರು ಗಂಭೀರವಾಗಿ ಗಾಯಗೊಂಡು ಕೋಮಾ ತಲುಪಿದ್ದರು. ಕೂಡಲೇ ಕೆ.ಆರ್.ಪೇಟೆಯ ದುಂಡಶೆಟ್ಟಿ ಲಕ್ಷ್ಮಮ್ಮ ಸ್ಮಾರಕ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ನಂತರ ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆ ಕೊಡಿಸಿದ್ದರೂ ಅವರು ಚಿಕಿತ್ಸೆಗೆ ಸ್ಪಂದಿಸಿರಲಿಲ್ಲ. ಪ್ರಜ್ಞೆ ಕೂಡ ಮರಳಿರಲಿಲ್ಲ.

ರಘು ಅವರ ಮಿದುಳು ನಿಷ್ಕ್ರಿಯಗೊಂಡಿರುವುದಾಗಿ ವೈದ್ಯರು ತಿಳಿಸಿದ್ದರು. ನಂತರ ಪೋಷಕರು ತಮ್ಮ ಪುತ್ರ ಬದುಕಬಹುದೆಂಬ ಆಸೆಯಿಂದ ಹೆಚ್ಚಿನ ಚಿಕಿತ್ಸೆ ಕೊಡಿಸುವ ಉದ್ದೇಶದಿಂದ ಅಪೋಲೋ ಆಸ್ಪತ್ರೆಗೆ ದಾಖಲಿಸಿದ್ದರು. ಆದರೂ ಸಹ ಚಿಕಿತ್ಸೆ ಫಲಕಾರಿಯಾಗದೇ ರಘು ಬದುಕುಳಿಯುವ ಲಕ್ಷಣಗಳು ಕಂಡು ಬರಲಿಲ್ಲ. ಆಗ ರಘು ಕುಟುಂಬದವರು ರಘು ಅವರ ಅಂಗಾಂಗಗಳನ್ನು ದಾನ ಮಾಡುವ ನಿರ್ಧಾರ ಕೈಗೊಂಡರು.

ರಘು ಮೊದಲಿನಿಂದಲೂ ಸಮಾಜಮುಖಿ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು. ಅಕಾಲಿಕ ಅಪಘಾತಕ್ಕೆ ತುತ್ತಾಗಿದ್ದರಿಂದ ಆತನ ದೇಹದ ಅಂಗಾಂಗಗಳನ್ನು ಅಪೋಲೋ ಆಸ್ಪತ್ರೆಯಲ್ಲಿ ಅಗತ್ಯವಿರುವ ರೋಗಿಗಳಿಗಾಗಿ ದಾನ ಮಾಡಲು ನಿಶ್ಚಯಿಸಿದೆವು. ರಘು ಹೃದಯ, ಹೃದಯದ ವಾಲ್ವ್‌ಗಳು, ಶ್ವಾಸಕೋಶ, ಯಕೃತ್ತು, ಮೂತ್ರಪಿಂಡ ಮತ್ತಿತರ ಅಂಗಾಂಗಗಳನ್ನು ಅಪೋಲೋ ಆಸ್ಪತ್ರೆಗೆ ದಾನ ನೀಡಲಾಯಿತು ಎಂದು ರಘು ಅವರ ತಂದೆ ನಂಜುಂಡಯ್ಯ, ತಾಯಿ ಬೋರಮ್ಮ, ಪತ್ನಿ ಆಶಾ ರಾಣಿ ಮತ್ತು ರಘು ಅವರ ಸಹೋದರ ತಿಳಿಸಿದರು.

ರಘು ಅವರಿಗೆ ಅಕ್ಷಯ್ ಮೌರ್ಯ(8) ಸಿದ್ಧಾರ್ಥ ಮೌರ್ಯ(5) ಎಂಬ ಇಬ್ಬರು ಪುತ್ರರಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಮಂಗಳವಾರ ನಡೆಯಿತು. ನೂರಾರು ಮಂದಿ ಭಾಗವಹಿಸಿ ಅಂತಿಮ ದರ್ಶನ ಪಡೆದರಲ್ಲದೆ, ಅಂಗಾಂಗ ದಾನ ಮಾಡಿ ಮಾನವೀಯತೆ ಮೆರೆದ ರಘು ಮತ್ತು ಆತನ ಕುಟುಂಬದವರನ್ನು ತಾಲೂಕು ಆರೋಗ್ಯಾಧಿಕಾರಿ ಡಾ.ಅಜಿತ್ ಹಾಗೂ ತಾಲೂಕು ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಶಶಿಧರ್ ಅವರು ಅಭಿನಂದಿಸಿದ್ದಾರೆ.

ಉತ್ತರ ಕರ್ನಾಟಕದಲ್ಲಿ ನಾಲ್ವಡಿಯಂತಹ ದೂರದೃಷ್ಟಿ ಮಹಾರಾಜ ಹುಟ್ಟದಿರುವುದು ದುರಂತ

ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ

ಮಂಡ್ಯ, ಜು.6– ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಅಂದಿನ ಕಾಲದಲ್ಲೇ ಈ ರಾಜ್ಯ ಮುಂದೆ ಹೇಗಿರಬೇಕೆಂಬ ದೂರದೃಷ್ಟಿ ಹೊಂದಿದ್ದರು. ಶಿಕ್ಷಣಕ್ಕೆ ಒತ್ತು ನೀಡಿ, ರೈತರು ಬದುಕು ಕಟ್ಟಿಕೊಳ್ಳಲು ಸಹಕಾರಿಯಾದರು. ನೀರಾವರಿ ಕ್ಷೇತ್ರಕ್ಕೆ ಆದ್ಯತೆ ನೀಡಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾಯಿತ ಪ್ರತಿನಿಧಿ ಹೇಗಿರಬೇಕೆಂದು ಹೇಳಿಕೊಟ್ಟು ಈ ಭಾಗದ ಜನತೆಗೆ ಸಮೃದ್ಧಿ ಬದುಕು ಕಟ್ಟಿಕೊಟ್ಟರು. ನಮ್ಮ ಕಡೆ ಇಂತಹ ಒಬ್ಬ ರಾಜರು ಹುಟ್ಟಿಲ್ಲ ಎಂಬುದೇ ಚಿಂತೆ. ಇಂತಹ ಮಹಾತ್ಮರು ನಮ್ಮ ಮುಂದೆ ಇಲ್ಲ. ಆದರೆ, ನಿರಂತರವಾಗಿ ನಮ್ಮ ಮುಂದೆ ಇದ್ದಾರೆ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಬಣ್ಣಿಸಿದರು.

ನಂಜಮ್ಮ ಮೋಟೇಗೌಡ ಚಾರಿಟಬಲ್ ಮತ್ತು ಎಜುಕೇಷನ್ ಟ್ರಸ್ಟ್ ವತಿಯಿಂದ ನಗರದ ಕರ್ನಾಟಕ ಸಂಘದ ಆವರಣದಲ್ಲಿನ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ನಡೆದ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ ಹಾಗೂ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ನಾಲ್ವಡಿ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, ನಾನು ಹಲವು ಪ್ರಶಸ್ತಿಗಳನ್ನು ಈವರೆಗೆ ಸ್ವೀಕರಿಸಿದ್ದು, ನಾಲ್ವಡಿ ಹೆಸರಿನ ಪ್ರಶಸ್ತಿ ಸ್ವೀಕರಿಸಲು ಬಹಳ ಹೆಮ್ಮೆಯಿದೆ. ಅಂತಹವರ ಹೆಸರಿನ ಪ್ರಶಸ್ತಿ ಪಡೆಯಲು ನಾನು ಪುಣ್ಯ ಮಾಡಿದ್ದೆ ಎಂದು ಪ್ರಶಂಸಿಸಿದರು.

ರಾಜ್ಯದಲ್ಲಿ ವಿಧಾನಪರಿಷತ್ ರಚನೆಯಾಗಿದ್ದೇ ನಾಲ್ವಡಿ ಅವರಿಂದ. ಅವರ ಆಳ್ವಿಕೆಯಲ್ಲಿ ಪ್ರಜಾಪ್ರತಿನಿಧಿ ಸಂಘ ರಚನೆ ಮಾಡಿ, 26 ಜನರನ್ನು ನಾಮನಿರ್ದೇಶನಗೊಳಿಸಿದರು. ಅರಮನೆಯಲ್ಲಿದ್ದುಕೊಂಡು ನನಗೆ ಜನರ ಕಷ್ಟ ತಿಳಿಯಲು ಆಗಲ್ಲ. ನೀವು ಎಲ್ಲೆಡೆ ಓಡಾಡಿ ಜನರ ಸಮಸ್ಯೆ ಅರಿಯಿರಿ ಎಂದು ಪ್ರತಿನಿಧಿಗಳಿಗೆ ಸೂಚನೆ ಕೊಟ್ಟಿದ್ದರು. ಕ್ರಮೇಣ 26 ಇದ್ದ ಸದಸ್ಯರ ಸಂಖ್ಯೆ 50 ದಾಟಿ ಕರ್ನಾಟಕದಲ್ಲಿ ವಿಧಾನಪರಿಷತ್ ರಚನೆಯಾಯಿತು. ಇದಕ್ಕೆ ಕಾರಣ ನಾಲ್ವಡಿ ಅವರು ಎಂದು ಶ್ಲಾಘಿಸಿದರು.

ಇಂದಿನ ಮಕ್ಕಳು, ಮೊಬೈಲ್ ಮತ್ತು ಸಾಮಾಜಿಕ ಜಾಲತಾಣದಲ್ಲಿ ಮಗ್ನರಾಗಿದ್ದಾರೆ. ಹಿರಿಯರು, ತಂದೆ–ತಾಯಿಗಳ ಮೇಲೆ ಪ್ರೀತಿ ಮತ್ತು ಭಾವನೆ ಕಡಿಮೆಯಾಗುತ್ತಿದೆ. ವಯಸ್ಸಾದ ತಂದೆ–ತಾಯಿಯರನ್ನು ನೋಡದೇ ವೃದ್ಧಾಶ್ರಮಕ್ಕೆ ಬಿಡುತ್ತಿದ್ದಾರೆ. ಇದರಿಂದಲೇ ಸಮಾಜದಲ್ಲಿ ವೃದ್ಧಾಶ್ರಮಗಳು ಹೆಚ್ಚುತ್ತಿವೆ. ಮಕ್ಕಳನ್ನು ಕಿರಿಯ ವಯಸ್ಸಿನಿಂದಲೇ ಮಹನೀಯರ ಸಾಧನೆಗಳನ್ನು ಹೇಳುತ್ತಾ, ಹಿರಿಯರಿಗೆ ಗೌರವ ಕೊಡುವುದನ್ನು ಕಲಿಸಬೇಕೆಂದು ಪೋಷಕರಿಗೆ ತಿಳಿ ಹೇಳಿದರು.

ಎಂಟು ಬಾರಿ ವಿಧಾನಪರಿಷತ್ ಸದಸ್ಯನಾಗಿ ಹಲವು ಇಲಾಖೆಗಳ ಸಚಿವನಾಗಿ ನಾನು ಕಾರ್ಯನಿರ್ವಹಿಸಿದ್ದೇನೆ. ಪಶ್ಚಿಮ ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾಗುವ ನಾನು ಶಿಕ್ಷಣ ಖಾತೆ ನಿರ್ವಹಿಸಿದ್ದು, ವಿಶೇಷ. ಶಿಕ್ಷಣ ಕ್ಷೇತ್ರಕ್ಕೆ ಹೊಸ ಮೆರುಗು ತಂದು ಕೊಟ್ಟ ಗೋವಿಂದೇಗೌಡರು, ನಿತ್ಯ ಸಚಿವ ಎಂದೇ ಕರೆಯಲ್ಪಡುವ ಮಂಡ್ಯದ ಕೆ.ವಿ. ಶಂಕರಗೌಡರು ನನಗೆ ಪ್ರೇರಣೆಯಾಗಿದ್ದಾರೆ. ಶಂಕರಗೌಡರಂತೆ ನಾನು ಆಗಬೇಕೆಂಬ ಕನಸು ಕಂಡಿದ್ದೆ. ಅವರ ಆದರ್ಶವನ್ನು ಪಾಲಿಸಿದ್ದೇನೆ. ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ನನಗೆ ಶಿಕ್ಷಣ ಖಾತೆ ಕೊಟ್ಟಿದ್ದರು. ಅದಕ್ಕೂ ಮುನ್ನ ಧರಂ ಸಿಂಗ್ ಅವರ ಸಮ್ಮಿಶ್ರ ಸರ್ಕಾರದಲ್ಲಿ ಹೆಚ್.ಡಿ. ದೇವೇಗೌಡರು ಯಾವ ಖಾತೆ ಬೇಕೆಂದು ಕೇಳಿದಾಗ ಶಿಕ್ಷಣ ಖಾತೆಯನ್ನೇ ಬಯಸಿದ್ದೆ. ಆಗ ಗೌಡರು ಶಿಕ್ಷಣ ಖಾತೆ ಬೇಡ, ಶಿಕ್ಷಣ ಮಂತ್ರಿಯಾಗುವ ವ್ಯಕ್ತಿಯಿಂದ ರಾಜ್ಯದ ಶಿಕ್ಷಣ ಇಲಾಖೆಗೆ ಇಂತದ್ದು ಬೇಕೆಂದು ಬೇಡಿಕೆ ಇಟ್ಟು ಕೆಲಸ ಮಾಡಿಸು ಎಂದೇಳಿ, ನನಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆ ಕೊಟ್ಟಿದ್ದರು. ಆದರೆ ಕುಮಾರಸ್ವಾಮಿ ಸರ್ಕಾರದಲ್ಲಿ ಶಿಕ್ಷಣ ಮಂತ್ರಿಯಾಗಿ 20 ತಿಂಗಳುಗಳ ಕಾಲ ಆಳ್ವಿಕೆ ನಡೆಸಿ, ಶಿಕ್ಷಣ ಇಲಾಖೆಯಲ್ಲಿ ಹಲವು ಸುಧಾರಣೆಗಳನ್ನು ತಂದಿದ್ದೇನೆ ಎಂದು ಸ್ಮರಿಸಿದರು.

ಯಾವ ಶಿಕ್ಷಕರು ಮಾನಸಿಕವಾಗಿ ಕುಗ್ಗಬಾರದು, ಮಕ್ಕಳಿಗೆ ಉತ್ತಮ ಶಿಕ್ಷಣ ಅವರಿಂದ ದೊರೆಯಬೇಕೆಂಬ ನಿಟ್ಟಿನಲ್ಲಿ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳ ಶಿಕ್ಷಕರಿಗೆ 5ನೇ ತಾರೀಖಿನೊಳಗೆ ಸಂಬಳ ನೀಡುವ ವ್ಯವಸ್ಥೆ ಶುರು ಮಾಡಿಸಿದೆ. ಇಲಾಖೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಸುಮಾರು ಹತ್ತು ಸಾವಿರಕ್ಕೂ ಹೆಚ್ಚು ಶಿಕ್ಷಕರನ್ನು ನೇಮಿಸುವ ಮೂಲಕ ಶಿಕ್ಷಣ ವ್ಯವಸ್ಥೆ ಸರಾಗವಾಗಿ ನಡೆಯಲು ಅನುವು ಮಾಡಿಕೊಟ್ಟೆ. ಶಿಕ್ಷಣ ಇಲಾಖೆಯಲ್ಲಿ ಆಮೂಲಾಗ್ರ ಬದಲಾವಣೆ ಮಾಡಲು ಶ್ರಮಿಸಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಲೇಖಕ ಲೋಕೇಶ್ ಚಂದಗಾಲು ಅವರ 'ನಾಲ್ವಡಿ ನಾಡು' ಪುಸ್ತಕ ಬಿಡುಗಡೆ ಮಾಡಲಾಯಿತು. ವೇದಿಕೆಯಲ್ಲಿ ಮಾಜಿ ಸಚಿವ ಡಿ.ಸಿ.ತಮ್ಮಣ್ಣ, ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶ್ ಗೌಡ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಕೆ.ಎಸ್.ರಾಜಣ್ಣ, ಟ್ರಸ್ಟ್‌ನ ಅಧ್ಯಕ್ಷ ಕೆ.ಟಿ. ಹನುಮಂತು, ಕರ್ನಾಟಕ ಸಂಘದ ನಿರ್ದೇಶಕ ನಾಗಣ್ಣ ಉಪಸ್ಥಿತರಿದ್ದರು.



ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

> ಒಡೆಯರ್ ಇರಲಿಲ್ಲ ಎಂದಿದ್ದರೆ ವಿಧಾನಪರಿಷತ್ ರಚನೆಯಾಗುತ್ತಿರಲಿಲ್ಲ. ನಾನು ಸತತ ಎಂಟು ಬಾರಿ ಪರಿಷತ್ ಸದಸ್ಯನಾಗುತ್ತಿರಲಿಲ್ಲ. ನಾಲ್ವಡಿ ಪ್ರಶಸ್ತಿ ಸಹ ಸಿಗುತ್ತಿರಲಿಲ್ಲ ಎಂದ ಅವರು, ರಾಜಮಹಾರಾಜರೆಂದರೆ ನೀವು ಓದಿರಬಹುದು, ಅರಮನೆಯಲ್ಲಿ ನೃತ್ಯ, ಮೋಜು, ಮಸ್ತಿಗೆ ಹೆಸರಾಗಿದ್ದವರು. ಆದರೆ ಈ ಪುಣ್ಯಾತ್ಮ ನಾಡಿನ ಪ್ರಜೆಗಳಿಗೆ ಏನು ಮಾಡಬೇಕು? ಅವರ ಬದುಕು ಹಸನು ಮಾಡಬೇಕೆಂಬ ವಿಚಾರ ಮಾಡಿ, ಜನಪ್ರತಿನಿಧಿಗಳು, ಸಿಎಂ, ಸರ್ಕಾರ ಮಾಡಬೇಕೆಂಬ ಕೆಲಸವನ್ನು ಅವತ್ತೇ ಮಾಡಿ, ಮಂಡ್ಯ–ಮೈಸೂರು ಜನರನ್ನು ಸುಖವಾಗಿರುವಂತೆ ಮಾಡಿದರು.
> –ಬಸವರಾಜ ಹೊರಟ್ಟಿ, ಸಭಾಪತಿ.

ತುಮಕೂರಲ್ಲಿ ಮಂಡ್ಯ ಯುವತಿಯ ಭೀಕರ ಹತ್ಯೆ

ಪ್ರೀತಿಸಿ ಮದುವೆಯಾಗಿದ್ದವನಿಂದ ದುಷ್ಕೃತ್ಯ, ಹತ್ಯೆಗೈದು ಪರಾರಿ



ಗೀತಾ



ನವೀನ್

ತುಮಕೂರು: ಸಾಮಾಜಿಕ ಜಾಲತಾಣದಲ್ಲಿ ಪರಿಚಯವಾದ ಮಂಡ್ಯದ ಯುವತಿಯನ್ನು ಪ್ರೀತಿಸಿ ಮದುವೆಯಾದ ಯುವಕನೊಬ್ಬ ಹೆಂಡತಿಯನ್ನು 25ಕ್ಕೂ ಹೆಚ್ಚು ಬಾರಿ ಚಾಕುವಿನಿಂದ ಚುಚ್ಚಿ ಅಮಾನುಷವಾಗಿ ಕೊಲೆ ಮಾಡಿದ ಆಘಾತಕಾರಿ ಘಟನೆ ತುಮಕೂರು ಜಿಲ್ಲೆಯ ಅಂತರಸನಹಳ್ಳಿ ಪ್ರದೇಶದಲ್ಲಿ ನಡೆದಿದೆ.

ಮೃತ ಯುವತಿಯನ್ನು ಮಂಡ್ಯ ಮೂಲದ ಗೀತಾ(22) ಎಂದು ಗುರುತಿಸಲಾಗಿದೆ. ಕೃತ್ಯವೆಸಗಿದ ಆರೋಪಿ ಪತಿ ನವೀನ್ (25) ಪರಾರಿಯಾಗಿದ್ದಾನೆ.

ಕೊರಟಗೆರೆ ತಾಲೂಕಿನ ಅಮೃತಗಿರಿ ಗ್ರಾಮದ ನವೀನ್ ಹಾಗೂ ಮಂಡ್ಯ ಜಿಲ್ಲೆ ಗಣನೂರಿನ ಗೀತಾ ಮೂರು ವರ್ಷಗಳ ಹಿಂದೆ ಮದುವೆಯಾಗಿದ್ದು, ಕಳೆದ ಒಂದೂವರೆ ವರ್ಷಗಳಿಂದ ತುಮಕೂರು ಹೊರವಲಯದ ಅಂತರಸನಹಳ್ಳಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಈ ದಂಪತಿಗೆ ಒಂದೂವರೆ ವರ್ಷದ ಗಂಡು ಮಗು ಕೂಡ ಇದೆ. ಗೀತಾ ಈಚೆಗೆ ಮಗುವನ್ನು ತವರು ಮನೆಗೆ ಕಳುಹಿಸಿದ್ದರು. ಮದುವೆಯಾದ ನಂತರ ಪತಿಯ ನಡವಳಿಕೆಯಲ್ಲಿ ವ್ಯತ್ಯಾಸ ಕಂಡು ಬಂದಿದೆ. ವೈವಾಹಿಕ ಕಲಹಗಳ ಹಿನ್ನೆಲೆಯಲ್ಲಿ ಇಬ್ಬರ ನಡುವೆ ಪದೇ ಪದೆ ಜಗಳ ನಡೆಯುತ್ತಿದ್ದುದಾಗಿ ನೆರೆಹೊರೆಯವರು ಹೇಳುತ್ತಿದ್ದಾರೆ. ಕೆಲವೊಮ್ಮೆ ಮನೆಯ ಮಾಲೀಕರೇ ಜಗಳ ಬಿಡಿಸುವಂತ ಸ್ಥಿತಿಯೂ ಉಂಟಾಗಿತ್ತು. ಈ ಮಧ್ಯೆ ಕೆಲವು ತಿಂಗಳು ಬಾಡಿಗೆ ಕೊಡುವ ಸ್ಥಿತಿಯಲ್ಲಿಲ್ಲವೆಂದು ನವೀನ್ ಅವರು ಮನೆ ಖಾಲಿ ಮಾಡಿಕೊಂಡಿದ್ದರು. ಆದರೆ ಇದೀಗ ಮತ್ತೆ ಹಿಂದಿನ ಬಾಡಿಗೆ ಮನೆಯಲ್ಲಿಯೇ ವಾಸವಿದ್ದರು.

ನಿನ್ನೆ ರಾತ್ರಿ ಗಂಡ ಹೆಂಡತಿಯ ನಡುವೆ ಗಲಾಟೆ ನಡೆದಿದ್ದು, ಅದೇ ವೇಳೆ ನವೀನ್ ಪತ್ನಿ ಗೀತಾಳನ್ನು ಚಾಕುವಿನಿಂದ 25ಕ್ಕೂ ಹೆಚ್ಚು ಬಾರಿ ಚುಚ್ಚಿ ಭೀಕರವಾಗಿ ಹತ್ಯೆ ಮಾಡಿದ್ದಾನೆ. ಇಂದು ಬೆಳಿಗ್ಗೆ ಬಾಡಿಗೆ ಹಣ ತರುತ್ತೇನೆಂದು ಮಾಲೀಕರ ಮಗ ಬಂದು ಮನೆಯ ಬಾಗಿಲು ತೆರೆದಾಗ ಗೀತಾ ರಕ್ತದ ಮಡುವಿನಲ್ಲಿ ಬಿದ್ದು ಸಾವನ್ನಪ್ಪಿರುವುದು ಕಂಡುಬಂದಿದೆ.

ಕೂಡಲೇ ಈ ಕುರಿತು ಮಾಲೀಕರು ಪೊಲೀಸರು ಹಾಗೂ ಸಂಬಂಧಿಕರಿಗೆ ಮಾಹಿತಿ ನೀಡಲಾಗಿದೆ. ಘಟನಾ ಸ್ಥಳಕ್ಕೆ ತುಮಕೂರು ಗ್ರಾಮಾಂತರ ಎಸ್‌ಪಿ, ಡಿವೈಎಸ್‌ಪಿ, ಎಎಸ್‌ಪಿ ಸೇರಿದಂತೆ ಹಿರಿಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಶ್ವಾನ ದಳ, ಬೆರಳಚ್ಚು ತಂಡ ಸ್ಥಳಕ್ಕೆ ಧಾವಿಸಿವೆ. ಹತ್ಯೆ ಬಳಿಕ ನಾಪತ್ತೆಯಾಗಿರುವ ನವೀನ್ ಪತ್ತೆ ಹಚ್ಚಲು ಭಾರಿ ಹುಡುಕಾಟ ನಡೆದಿದೆ.

ವಿಕಲಚೇತನರ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಮಂಡ್ಯ, ಜು.6– ಜಿಲ್ಲೆಯ ವಿವಿಧ ಶಾಲೆ ಮತ್ತು ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿಕಲಚೇತನ ವಿದ್ಯಾರ್ಥಿಗಳಿಂದ 2025–26ನೇ ಸಾಲಿನ ವಿದ್ಯಾರ್ಥಿ ವೇತನ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಗಳು ಹಿಂದಿನ ತರಗತಿಯಲ್ಲಿ ಕನಿಷ್ಠ ಶೇಕಡ 40ರಷ್ಟು ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು. ಅರ್ಜಿಯನ್ನು https://ssp.postmatric.karnataka.gov.in ವೆಬ್‌ಸೈಟ್ ಮೂಲಕ ಸಲ್ಲಿಸಬಹುದಾಗಿದೆ.

ರೈಲಿನಿಂದ ಇಳಿಯುವಾಗ ಬಿದ್ದು ವ್ಯಕ್ತಿ ಸಾವು



ಭಾರತೀನಗರ, ಜು.6– ರೈಲಿನಿಂದ ಇಳಿಯುವಾಗ ಆಯತಪ್ಪಿ ಬಿದ್ದು ವ್ಯಕ್ತಿಯೋರ್ವ ಮೃತಪಟ್ಟಿರುವ ಘಟನೆ ಮಂಡ್ಯನಗರದ ರೈಲ್ವೆ ನಿಲ್ದಾಣದ ಬಳಿ ಜರುಗಿದೆ.

ಇಲ್ಲಿಗೆ ಸಮೀಪದ ಬಿದರಹೊಸಹಳ್ಳಿ ಗ್ರಾಮದ ಎಸ್.ನಾಗರಾಜು(59) ಎಂಬುವರೇ ರೈಲಿಗೆ ಸಿಲುಕಿ ಮೃತಪಟ್ಟ ದುರ್ದೈವಿ.

ಇವರು ಧಾರವಾಡ ಜೆಎಸ್‌ಎಸ್ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕೆಲಸ ನಿರ್ವಹಿಸುತ್ತಿದ್ದು, ಭಾನುವಾರ ಧಾರವಾಡದಿಂದ ತಮ್ಮ ಸ್ವಗ್ರಾಮವಾದ ಬಿದರಹೊಸಹಳ್ಳಿ ಗ್ರಾಮಕ್ಕೆ ಬರಲು ಮಂಡ್ಯದ ರೈಲ್ವೆ ನಿಲ್ದಾಣದಲ್ಲಿ ಇಳಿಯುವ ವೇಳೆಯಲ್ಲಿ ಆಯತಪ್ಪಿ ಬಿದ್ದು ರೈಲಿಗೆ ಸಿಲುಕಿ ಮೃತಪಟ್ಟಿದ್ದಾರೆ. ಮೃತದೇಹವನ್ನು ಮಂಡ್ಯ ವಿಮ್ಸ್ ಆಸ್ಪತ್ರೆಯ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಭಾನುವಾರ ಸಂಜೆ 5 ಗಂಟೆಯಲ್ಲಿ ಒಪ್ಪಿಸಿದ್ದಾರೆ.

ಮೃತರು ಪತ್ನಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಮೃತದೇಹವನ್ನು ಸ್ವಗ್ರಾಮವಾದ ಬಿದರಹೊಸಳ್ಳಿ ಗ್ರಾಮಕ್ಕೆ ತಂದು ಅಂತ್ಯಸಂಸ್ಕಾರ ನೆರವೇರಿಸಲಾಯಿತು.

ನಾಲೆಗೆ ಬೈಕ್ ಬಿದ್ದು ಇಬ್ಬರ ಸಾವು

ಮದ್ದೂರು, ಜು.6– ಚಲಿಸುತ್ತಿದ್ದ ದ್ವಿಚಕ್ರ ವಾಹನ ಸೇತುವೆಯ ತಡೆಗೋಡೆಗೆ ಡಿಕ್ಕಿ ಹೊಡೆದ ಪರಿಣಾಮ ಸವಾರರಿಬ್ಬರು ನಾಲೆಗೆ ಬಿದ್ದು ಮೃತಪಟ್ಟಿರುವ ಘಟನೆ ತಾಲೂಕಿನ ದೊಡ್ಡಹೊಸಗಾವಿ ಗ್ರಾಮದಲ್ಲಿ ಭಾನುವಾರ ಸಂಜೆ ಜರುಗಿದೆ. ತುಮಕೂರು ಜಿಲ್ಲೆಯ ಕುಣಿಗಲ್ ತಾಲೂಕಿನ ಹೊಸಹಳ್ಳಿ ಗ್ರಾಮದ ಹುಚ್ಚೇಗೌಡರ ಪುತ್ರ ರಾಮಣ್ಣ(70) ಹಾಗೂ ಹಿಂಬದಿ ಸವಾರ ಕೊಪ್ಪ ಹೋಬಳಿಯ ಸೋಮನಹಳ್ಳಿ ಗ್ರಾಮದ ರಾಜುರವರ ಪುತ್ರ ಭರತ್(19) ಮೃತಪಟ್ಟ ದುರ್ದೈವಿಗಳಾಗಿದ್ದಾರೆ.

ಮೃತರಿಬ್ಬರು ಮದನಹಟ್ಟಿಯಮ್ಮ ದೇವಾಲಯಕ್ಕೆ ತೆರಳುತ್ತಿದ್ದ ವೇಳೆ ಅತಿ ವೇಗವಾಗಿ ಚಲಿಸುತ್ತಿದ್ದ ಟಿವಿಎಸ್ ದ್ವಿಚಕ್ರ ವಾಹನ ನಾಲಾ ತಡೆಗೋಡೆಗೆ ಡಿಕ್ಕಿ ಹೊಡೆದ ಪರಿಣಾಮ ನಾಲೆಗೆ ಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದು ಈ ಸಂಬಂಧ ಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಂದನೇ ಪುಟದಿಂದ

ಉತ್ತಮ ಆಡಳಿತಕ್ಕಿಂತ ಧರ್ಮ ರಾಜಕಾರಣಕ್ಕೆ ಜನ ಮನ್ನಣೆ

ಮತ ಹಾಕುತ್ತಿದ್ದಾರೆ. ಇದರಿಂದ ಈಗಿನ ಪರಿಸ್ಥಿತಿಯಲ್ಲಿ ಜನಪರವಾಗಿ ಕೆಲಸ ಮಾಡುವ ರಾಜಕಾರಣಿಗಳು ಚುನಾವಣೆಯಲ್ಲಿ ಜಯಗಳಿಸಲು ಸಾಧ್ಯವಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಧಾನಿ ನರೇಂದ್ರ ಮೋದಿ ಸರ್ಕಾರದ ಆಡಳಿತವನ್ನು ವಿಶ್ಲೇಷಿಸಿದ ಮಣಿಶಂಕರ್ ಅಯ್ಯರ್ ಅವರು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಆಡಳಿತದಿಂದ ಈ ದೇಶವನ್ನು ಪಾರು ಮಾಡದಿದ್ದರೆ ಭವಿಷ್ಯತ್ತಿನಲ್ಲಿ ದೊಡ್ಡ ಗಂಡಾಂತರ ಕಟ್ಟಿಟ್ಟ ಬುತ್ತಿ ಎಂದು ಎಚ್ಚರಿಸಿದರು.

ನರೇಂದ್ರ ಮೋದಿ ಅವರ ಆಡಳಿತದ ದುಷ್ಪರಿಣಾಮಗಳ ಬಗ್ಗೆ ದೇಶದ ಜನರು ಸೂಕ್ಷ್ಮವಾಗಿ ಅವಲೋಕಿಸಬೇಕು ಎಂದು ಸಲಹೆ ನೀಡಿದ ಮಣಿ ಶಂಕರ್ ಅಯ್ಯರ್ ಅವರು, ಹಿಂದೂ ಧರ್ಮದ ಎಲ್ಲರೂ ಬಿಜೆಪಿಗೆ ಮತ ಹಾಕಿದ್ದಾರೆ ಎಂಬ ತಪ್ಪು ಭಾವನೆ ಇದೆ. ಒಟ್ಟಾರೆ ಮತದಾನದಲ್ಲಿ ಅರ್ಧದಷ್ಟು ಹಿಂದೂಗಳು ಮಾತ್ರ ಬಿಜೆಪಿಗೆ ಮತದಾನ ಮಾಡಿದ್ದಾರೆ ಎಂದು ಮಣಿಶಂಕರ್ ಅಯ್ಯರ್ ಹೇಳಿದರು.

ಬಿಜೆಪಿ ಆಡಳಿತದ ಬಗ್ಗೆ ಜನರಲ್ಲಿ ನಕರಾತ್ಮಕ ನಿಲುವು ಇದೆ. ಬಿಜೆಪಿ ಸರ್ಕಾರಕ್ಕೆ ಇಷ್ಟೆಲ್ಲಾ ವಿರೋಧವಿದ್ದರೂ ನರೇಂದ್ರ ಮೋದಿ ಅವರು ರಾಜಕೀಯವಾಗಿ ಪ್ರಬಲವಾಗಿದ್ದಾರೆ. ಇದರಿಂದಲೇ ಮೂರನೇ ಬಾರಿ ಅಧಿಕಾರದ ಚುಕ್ಕಾಣಿ ಹಿಡಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಭಾರತೀಯ ವಿದೇಶ ಸೇವೆ ಅಧಿಕಾರಿ(ಐಎಫ್‌ಎಸ್)ಯಾಗಿದ್ದ ತಾವು ರಾಜಿನಾಮೆ ನೀಡಿ ರಾಜಕೀಯಕ್ಕೆ ಬಂದ ಹಿನ್ನೆಲೆಯನ್ನು ಪ್ರಶ್ನಿಸಿದಾಗ, ಈ ವಿಚಾರದ ಬಗ್ಗೆ ಮೈಸೂರಿನಲ್ಲೆ ಪ್ರಶ್ನಿಸುತ್ತಿರುವುದು ಹಾಗೂ ಇಲ್ಲೇ ನಾನು ಉತ್ತರ ನೀಡುತ್ತಿರುವುದು ಸಂದರ್ಭೋಚಿತವಾಗಿದೆ. 1989ರಲ್ಲಿ ನಾನು ಅಂದಿನ ಪ್ರಧಾನಿ ರಾಜೀವ್ ಗಾಂಧಿ ಅವರ ಜೊತೆ ಮೈಸೂರಿನಿಂದ ಕಡಪಗೆ ಹೆಲಿಕಾಪ್ಟರ್‌ನಲ್ಲಿ ಹೋಗುವಾಗ, ನಾನು ರಾಜಕೀಯಕ್ಕೆ ಬರಬಹುದೇ ಎಂದು ಪ್ರಶ್ನಿಸಿದೆ. ಒಬ್ಬ ಅಧಿಕಾರಿಯಾಗಿರುವ ನೀವು ರಾಜಕೀಯಕ್ಕೆ ಬಂದರೆ ಯಶಸ್ವಿ ಹಾದಿಯಲ್ಲಿ ಸಾಗಬಹುದು ಎಂದು ರಾಜೀವ್ ಗಾಂಧಿ ಉತ್ತೇಜಿಸಿದರು ಎಂದರು.

ನಾನು 7ನೇ ತರಗತಿಯಲ್ಲಿ ಓದುವಾಗ ನಡೆದ ಮೊದಲ ಸಾರ್ವತ್ರಿಕ ಚುನಾವಣೆಯ ಪ್ರಕ್ರಿಯೆ ನನ್ನನ್ನು ಅತೀವವಾಗಿ ಆಕರ್ಷಿಸಿತ್ತು. ಅಂದಿನಿಂದಲೇ ರಾಜಕಾರಣದ ಸೆಳೆತ ನನ್ನಲ್ಲಿತ್ತು. ರಾಜೀವ್ ಗಾಂಧಿ ಅವರನ್ನು ಭೇಟಿ ಮಾಡಿ, ಅವರಿಂದ ಉತ್ತೇಜನ ದೊರೆತ ಮೇಲೆ ರಾಜಕಾರಣಕ್ಕೆ ಬರಲು ನಿರ್ಧರಿಸಿದೆ. ತರುವಾಯ ಐಎಫ್‌ಎಸ್ ಹುದ್ದೆಗೆ ರಾಜಿನಾಮೆ ನೀಡಿ ರಾಜಕಾರಣಕ್ಕೆ ಪಾದಾರ್ಪಣೆ ಮಾಡಿದೆ ಎಂದು ಹೇಳಿದರು.

ರಾಜಕಾರಣದಲ್ಲಿ ಸೋಲು–ಗೆಲುವು ಇರುತ್ತದೆ. ಹಾಗೆಯೇ ಸವಾಲುಗಳು ಎದುರಾಗುತ್ತದೆ. ಸೋತಾಗ ಕುಗ್ಗದೆ ಗೆಲುವಿಗಾಗಿ ಮುನ್ನುಗ್ಗಬೇಕು. ಸವಾಲುಗಳನ್ನು ಸಮರ್ಥವಾಗಿ ಎದುರಿಸಿ ಗುರಿ ಮುಟ್ಟಬೇಕು. ಆಗ ಮಾತ್ರ ರಾಜಕಾರಣದಲ್ಲಿ ಯಶಸ್ವಿಯಾಗಲು ಸಾಧ್ಯ ಎಂದು ಮಣಿಶಂಕರ್ ಅಯ್ಯರ್ ಈಗಿನ ಪೀಳಿಗೆಯ ರಾಜಕಾರಣಿಗಳಿಗೆ ಸಲಹೆಯಿತ್ತರು.

ಭಾರತದಲ್ಲಿ ವಿವಿಧತೆಯಲ್ಲಿ ಏಕತೆ ಇದೆ. ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ವಿವಿಧ ಜಾತಿ, ಧರ್ಮ, ಭಾಷೆಗಳಿವೆ. ದೇಶಾಭಿಮಾನದ ಪ್ರಶ್ನೆ ಬಂದಾಗ ಏಕತೆಯ ಘೋಷಣೆ ಮೊಳಗುತ್ತದೆ. ಜ್ಯಾತ್ಯಾತೀತ ಸಂದೇಶ ಸಾರಲಾಗುತ್ತದೆ. ಆದರೆ, ವಿಶ್ವದ ಬೇರೆ ರಾಷ್ಟ್ರಗಳಲ್ಲಿ ಈ ಪರಿಸ್ಥಿತಿ ಇಲ್ಲ. ಉದಾಹರಣೆಗೆ ರಷ್ಯಾದ ಮಾಸ್ಕೋದಿಂದ ಲಿಜ್ಬನ್ ವರೆಗೆ 43 ರಾಜ್ಯಗಳಿವೆ. ಒಂದೊಂದು ರಾಜ್ಯಗಳೂ ಭಿನ್ನವಾಗಿದ್ದು, ಒಗ್ಗಟ್ಟು ಇಲ್ಲ. ಆದರೆ ಭಾರತದಲ್ಲಿ ಏಕತೆ, ಒಗಟ್ಟು ಇದ್ದು, ಸ್ವಾತಂತ್ರ್ಯ ಬಂದು 75 ವರ್ಷವಾದರೂ ಇದನ್ನು ಕಾಪಾಡಿಕೊಂಡು ಬರುತ್ತಿದ್ದೇವೆ. ಇಂತಹ ವಿಶಿಷ್ಟ ರಾಷ್ಟ್ರ ವಿಶ್ವದಲ್ಲಿ ಬೇರೆಲ್ಲೂ ಕಾಣಲು ಸಾಧ್ಯವಿಲ್ಲ ಎಂದು ಮಣಿಶಂಕರ್ ಅಯ್ಯರ್ ಅಭಿಪ್ರಾಯ ವ್ಯಕ್ತಪಡಿಸಿದರು.

ನೀವು ಕಂಡಂತೆ ಉತ್ತಮ ಪ್ರಧಾನಮಂತ್ರಿ ಯಾರೆಂದು ಕೇಳಿದಾಗ ಸ್ಪಷ್ಟ ಉತ್ತರ ನೀಡಿದ ಮಣಿಶಂಕರ್ ಅಯ್ಯರ್ ಅವರು, ನಾನು ಕಂಡಂತೆ ಜವಾಹರಲಾಲ್ ನೆಹರು ಮೊದಲ ಉತ್ತಮ ಪ್ರಧಾನ ಮಂತ್ರಿ, ರಾಜೀವ್ ಗಾಂಧಿ ಎರಡನೇ ಉತ್ತಮ ಪ್ರಧಾನಮಂತ್ರಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಮೂರನೇ ಉತ್ತಮ ಪ್ರಧಾನ ಮಂತ್ರಿ ಎಂದರು.

ಇಂದಿರಾ ಗಾಂಧಿ ಅವರನ್ನು ಉತ್ತಮ ಪ್ರಧಾನಮಂತ್ರಿ ಎಂದೇ ನಾನು ಭಾವಿಸಿದ್ದೆ. ಆದರೆ ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿ ಜನರ ಸ್ವಾತಂತ್ರ್ಯವನ್ನು ಕಸಿದುಕೊಂಡು ಸರ್ವಾಧಿಕಾರ ಧೋರಣೆ ತಳೆದಾಗ ಅವರ ಬಗ್ಗೆ ನನ್ನಲ್ಲಿದ್ದ ಅಭಿಪ್ರಾಯ ಬದಲಾಯಿತು ಎಂದರು.

ಪಿ.ವಿ.ನರಸಿಂಹರಾವ್ ಅವರ ಬಗ್ಗೆ ನನಗಿರುವ ಅಭಿಪ್ರಾಯವೇ ಬೇರೆಯಾಗಿದೆ. ನರಸಿಂಹ ಬೇರೆಯಾದರೆ, ರಾವ್ ಬೇರೆ ಎಂದು ಪ್ರತ್ಯೇಕಿಸುವೆ. ಬಾಬ್ರಿ ಮಸೀದಿ ಧ್ವಂಸ ಮಾಡಲು ಸಂಘ ಪರಿವಾರದವರಿಗೆ ಪರೋಕ್ಷವಾಗಿ ಬೆಂಬಲ ನೀಡಿದ ಪಿ.ವಿ.ನರಸಿಂಹರಾವ್ ಅವರು ಈ ದೇಶದಲ್ಲಿ ಬಿಜೆಪಿ ಅಧಿಕಾರಿದ ಚುಕ್ಕಾಣಿ ಹಿಡಿಯಲು ಕಾರಣೀಭೂತರಾದರು ಎಂದು ಮಣಿಶಂಕರ್ ಅಯ್ಯರ್ ಆಕ್ರೋಶ ವ್ಯಕ್ತಪಡಿಸಿದರು.

ಒಡೆಯರ್‌ಗೆ ನೀಡಿದಷ್ಟು ಮನ್ನಣೆ, ಟಿಪ್ಪು, ಮಿರ್ಜಾ ಇಸ್ಮಾಯಿಲ್‌ಗೇಕೆ ನೀಡಲ್ಲ?

ಮೈಸೂರು ರಾಜ್ಯ ಸಂಸ್ಥಾನದಲ್ಲಿ ಒಡೆಯರ್ ವಂಶಸ್ಥರಷ್ಟೇ ಮುಸ್ಲಿಂರಾದ ಟಿಪ್ಪು ಸುಲ್ತಾನ್ ಮತ್ತು ಮಿರ್ಜಾ ಇಸ್ಮಾಯಿಲ್ ಅವರ ಕೊಡುಗೆ ಇದ್ದರೂ ಒಡೆಯರ್ ವಂಶಸ್ಥರಿಗೆ ಹೆಚ್ಚಿನ ಮನ್ನಣೆ ನೀಡಲಾಗುತ್ತಿದೆ ಎಂದು ಮಣಿಶಂಕರ್ ಅಯ್ಯರ್ ಅಸಮಾಧಾನ ವ್ಯಕ್ತಪಡಿಸಿದರು.

ಮೈಸೂರು ಮಹಾರಾಜರು ಮಾಡಿರುವ ಅಭಿವೃದ್ಧಿ ಬಗ್ಗೆ ಗುಣಗಾನ ಮಾಡಲಾಗುತ್ತದೆ. ಆದರೆ ಟಿಪ್ಪು ಸುಲ್ತಾನ್ ಮತ್ತು ಮಿರ್ಜಾ ಇಸ್ಮಾಯಿಲ್ ಬಹಳಷ್ಟು ಅಭಿವೃದ್ಧಿ ಮಾಡಿದ್ದಾರೆ. ಇವರು ನೀಡಿರುವ ಕೊಡುಗೆಗಳ ಬಗ್ಗೆ ಯಾರೂ ಕೂಡ ಅಷ್ಟಾಗಿ ಮಾತನಾಡುವುದಿಲ್ಲ ಎಂದರು. ಭಾರತದಲ್ಲಿ ಹಿಂದು, ಮುಸ್ಲಿಂ, ಕ್ರಿಶ್ಚಿಯನ್ ಸೇರಿದಂತೆ ಸರ್ವ ಧರ್ಮದ ಜನರು ಇದ್ದಾರೆ. ಆದ ಕಾರಣ ಭಾರತವನ್ನು ಹಿಂದೂ ರಾಷ್ಟ್ರ ಎಂಬ ಹೆಸರಿನಿಂದ ಕರೆಯಲು ಸಾಧ್ಯವಿಲ್ಲ. ಇದು ಹಿಂದೂ ರಾಷ್ಟ್ರವಲ್ಲ, ಜ್ಯಾತ್ಯಾತೀತ ರಾಷ್ಟ್ರ ಎಂದು ಅಭಿಪ್ರಾಯಪಟ್ಟರು.

ವಿಪರ್ಯಾಸವೆಂದರೆ ಹಿಂದು ಸಮುದಾಯದಲ್ಲೆ ಒಬ್ಬರಿಗೊಬ್ಬರು ಹೊಡೆದಾಡಿಕೊಂಡಿರುವ ನಿದರ್ಶನಗಳಿವೆ. ಈ ಗಲಾಟೆಗಳು ಇಂದಿಗೂ ಮುಂದುವರೆಯುತ್ತಿದೆ ಎಂದು ಹೇಳಿದರು.

ಬಿ.ವೈ.ವಿಜಯೇಂದ್ರಗೆ ಅಭಿನಂದನೆ...



ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ನಾಡದೇವತೆ ಶ್ರೀ ಚಾಮುಂಡೇಶ್ವರಿ ಫೋಟೋ ನೀಡಿ, ಮೈಸೂರು ನಗರ ಎಸ್ಸಿ ಮೋರ್ಚಾ ಅಧ್ಯಕ್ಷ, ಮಾಜಿ ಉಪಮೇಯರ್ ವಿ.ಶೈಲೇಂದ್ರ, ಗ್ರಾಮಾಂತರ ಎಸ್ಸಿ ಮೋರ್ಚಾ ಅಧ್ಯಕ್ಷ ಎಂ.ಅನಿಲ್‌ಕುಮಾರ್ ಅಭಿನಂದಿಸಿದರು. ಈ ವೇಳೆ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಮುಖಂಡರಾದ ಅಶೋಕಪುರಂ ಮಹೇಶ್, ಸ್ವಾಮಿ, ಕಿರಣ್ ಜಯರಾಮ್ ಉಪಸ್ಥಿತರಿದ್ದರು.



ಕಾರ್ಯ ನಿಮಿತ್ತ ಮೈಸೂರಿಗೆ ಭೇಟಿ ನೀಡಿದ್ದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಪಕ್ಷದ ಕಚೇರಿಯಲ್ಲಿ ಸ್ವಾಗತಿಸಿ, ಅಭಿನಂದಿಸಲಾಯಿತು. ಬಿಜೆಪಿ ಹಿರಿಯ ಮುಖಂಡ ಗುರುಪಾದಸ್ವಾಮಿ, ನಗರ ಬಿಜೆಪಿ ರೈತಮೋರ್ಚಾ ಪ್ರಧಾನ ಕಾರ್ಯದರ್ಶಿ ಜಿ.ಎಂ.ಪಂಚಾಕ್ಷರಿ, ವರುಣ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಬಿದರಗೂಡು ಕುಮಾರ್, ಶಕ್ತಿ ಕೇಂದ್ರದ ಅಧ್ಯಕ್ಷ ಅಹಲ್ಯ ನಾಗರಾಜು, ಬಿದರಗೂಡು ಮಹಾದೇವಸ್ವಾಮಿ, ಮಂಜು, ನಂಜನಗೂಡಿನ ಯುವ ಮುಖಂಡ ಅಜಿತ್ ಶೈವ ಮತ್ತಿತರರು ಚಿತ್ರದಲ್ಲಿದ್ದಾರೆ.

ಅತೀ ವೇಗದ ಅಜಾಗರೂಕ ಚಾಲನೆಗೆ ಇಬ್ಬರ ಸಾವು

(ಕೆಎ–09, ಜೆಟಿ–9292)ನಲ್ಲಿ ಮುಂಜಾನೆ 2 ಗಂಟೆ ಸುಮಾರಿನಲ್ಲಿ ಮೈಸೂರಿನ ನೆಲ್ಸನ್ ಮಂಡೇಲ ರಸ್ತೆಯಲ್ಲಿ ಮಿತಿ ಮೀರಿದ ವೇಗದಲ್ಲಿ ಬಂದು ಪಂಜಿನ ಕವಾಯತ್ ಮೈದಾನದ ಬಳಿ ಫುಡ್ ಡಿಲಿವರಿ ಮಾಡಲು ಹೋಗುತ್ತಿದ್ದ ಮೈಸೂರು ತಾಲೂಕಿನ ಶೆಟ್ಟಿನಾಯಕನಹಳ್ಳಿ ತೋಟವೊಂದರಲ್ಲಿ ನೆಲೆಸಿರುವ ಎಂ.ಎಸ್.ಕಾರ್ತಿಕ್(42) ಸ್ಕೂಟರ್‌ಗೆ (ಕೆಎ–09, ಹೆಚ್‌ಎಕ್ಸ್–6546) ಡಿಕ್ಕಿ ಹೊಡೆದು, ನಂತರ ರಸ್ತೆ ಬದಿಯಲ್ಲಿದ್ದ ಬೀದಿ ದೀಪದ ಕಂಬಕ್ಕೆ ಅಪ್ಪಳಿಸಿದ್ದಾನೆ. ಡಿಕ್ಕಿ ಹೊಡೆದ ರಭಸಕ್ಕೆ ಹಯಾಬೂಸ ಬೈಕ್ ಛಿದ್ರಗೊಂಡಿದೆಯಲ್ಲದೆ, ಬೆಂಕಿಗೆ ಆಹುತಿಯಾಗಿದೆ.

ಕೂಡಲೆ ದಾರಿಯಲ್ಲಿ ಹೋಗುತ್ತಿದ್ದ ವಾಹನ ಸವಾರರು ಹಾಗೂ ಸೈಯ್ಯದ್ ಶರೆನ್ ಸ್ನೇಹಿತರು ಎರಡೂ ಬೈಕ್‌ಗಳ ಸವಾರರನ್ನು ರಕ್ಷಿಸಲು ಪ್ರಯತ್ನಿಸಿದರಾದರೂ ಯಾವುದೆ ಪ್ರಯೋಜನವಾಗಿಲ್ಲ. ಇಬ್ಬರೂ ಬೈಕ್ ಸವಾರರಿಗೂ ತಲೆಗೆ ತೀವ್ರವಾಗಿ ಏಟು ಬಿದ್ದಿದೆ. ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಎನ್.ಆರ್.ಸಂಚಾರ ಠಾಣೆ ಪೊಲೀಸರು ಬೈಕ್ ಸವಾರರನ್ನು ಆಸ್ಪತ್ರೆಗೆ ಕೊಂಡೊಯ್ದು ಚಿಕಿತ್ಸೆ ಕೊಡಿಸುವ ಪ್ರಯತ್ನ ಮಾಡಿದರು. ಆದರೆ, ಮಾರ್ಗ ಮಧ್ಯೆಯೇ ಬೈಕ್ ಸವಾರರು ಮೃತಪಟ್ಟಿರುವುದಾಗಿ ವೈದ್ಯರು ಖಚಿತಪಡಿಸಿದರು.

ಪರಿಚಯಸ್ಥರ ಮನೆಯಲ್ಲಿ ಆಶ್ರಯ: ಹಯಾಬೂಸ ಬೈಕ್ ಸವಾರನ ನಿರ್ಲಕ್ಷ್ಯಕ್ಕೆ ಬಲಿಯಾದ ಫುಡ್‌ಡೆಲಿವರಿ ವ್ಯಕ್ತಿಯ ಕಥೆ ಮರುಕ ಹುಟ್ಟಿಸುವಂತಿದೆ. ಮೂಲತಃ ಮೈಸೂರಿನ ಇಟ್ಟಿಗೂಡಿನ ನಿವಾಸಿಯಾಗಿದ್ದ ಎಂ.ಎಸ್.ಕಾರ್ತಿಕ್‌ಗೆ ತಂದೆ, ತಾಯಿ, ಒಡಹುಟ್ಟಿದವರು ಯಾರೂ ಇಲ್ಲದ ಕಾರಣ, 12 ವರ್ಷದ ಹಿಂದೆ ಮೈಸೂರು ತಾಲೂಕಿನ ಬೋಗಾದಿ ಸಮೀಪದ ಶೆಟ್ಟಿನಾಯಕನಹಳ್ಳಿಯಲ್ಲಿ ತೋಟವೊಂದರಲ್ಲಿ ನೆಲೆಸಿರುವ ಯೋಗಾವಿಧಾನಂದ ಎಂಬುವರ ಬಳಿ ಆಶ್ರಯ ಪಡೆದಿದ್ದರು. ಯೋಗಾವಿಧಾನಂದ ಅವರು ಕಾರ್ತಿಕ್‌ನನ್ನು ತಮ್ಮ ಮನೆಯಲ್ಲಿಯೇ ಇರಿಸಿಕೊಂಡು ಸಾಕುತ್ತಿದ್ದರು. ಸಂಜೆ ವೇಳೆ ಫುಡ್ ಡೆಲಿವರಿ ಬಾಯ್ ಆಗಿ ಕಾರ್ತಿಕ್ ದುಡಿಯುತ್ತಿದ್ದರು. ಮುಂಜಾನೆ ಆರ್‌ಎಂಸಿ ವೃತ್ತದ ಹೋಟೆಲ್‌ವೊಂದರಿಂದ ಗ್ರಾಹಕರು ಆರ್ಡರ್ ಮಾಡಿದ್ದ ಊಟವನ್ನು ಪಾರ್ಸಲ್ ಪಡೆದು ಗ್ರಾಹಕರಿಗೆ ತಲುಪಿಸಲು ಹೋಗುತ್ತಿದ್ದಾಗ ಹಯಾಬೂಸ ಬೈಕ್‌ನಲ್ಲಿ ಯಮಸ್ವರೂಪಿಯಂತ ಬಂದ ಸೈಯ್ಯದ್ ಶರೆನ್ ಅಮಾಯಕನನ್ನು ಬಲಿ ಪಡೆದಿದ್ದಾನೆ.

ಶುಭ ಕಾರ್ಯದ ಮನೆಯಲ್ಲಿ ಶೋಕ: ಚಾಮರಾಜನಗರದ ನಿವಾಸಿ ಸೈಯ್ಯದ್ ಶರೆನ್ ಮನೆಯಲ್ಲಿ ಇಂದು ಶುಭ ಸಮಾರಂಭವಿತ್ತು. ಆ ಕಾರ್ಯದಲ್ಲಿ ಪಾಲ್ಗೊಳ್ಳಲೆಂದು ಸ್ನೇಹಿತರೊಬ್ಬರಿಗೆ ಸೇರಿದ ಹಯಾಬೂಸ ಬೈಕ್‌ನಲ್ಲಿ ಹೋಗುವಾಗ ನಿಯಂತ್ರಣ ತಪ್ಪಿ ಮುಂದೆ ಹೋಗುತ್ತಿದ್ದ ಫುಡ್ ಡೆಲಿವರಿ ವ್ಯಕ್ತಿಯ ಸ್ಕೂಟರ್‌ಗೆ ಡಿಕ್ಕಿ ಹೊಡೆದು ಮೃತಪಟ್ಟಿದ್ದಾನೆ.


ಮರಣೋತ್ತರ ಪರೀಕ್ಷೆ: ಇಬ್ಬರೂ ಬೈಕ್ ಸವಾರರ ಮರಣೋತ್ತರ ಪರೀಕ್ಷೆ ಬಳಿಕ ದೇಹಗಳನ್ನು ವಾರಸುದಾರರಿಗೆ ಒಪ್ಪಿಸಲಾಯಿತು. ಕಾರ್ತಿಕ್ ಮೃತದೇಹವನ್ನು ಯೋಗವಿಧಾನಂದ ಅವರು ಕಾರ್ತಿಕ್ ಅವರ ಚಿಕ್ಕಪ್ಪ, ಚಿಕ್ಕಮ್ಮ, ಸ್ನೇಹಿತರು ಹಾಗೂ ಪರಿಚಿತರೊಂದಿಗೆ ವಿದ್ಯಾರಣ್ಯಪುರಂನಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಿದರು. ಸೈಯ್ಯದ್ ಶರೆನ್ ಮೃತದೇಹವನ್ನು ಪೋಷಕರು ಚಾಮರಾಜನಗರಕ್ಕೆ ಕೊಂಡೊಯ್ದು ಅಂತ್ಯಕ್ರಿಯೆ ನಡೆಸಿದರು.

ಸಿಸಿ ಕ್ಯಾಮರಾ ಪರಿಶೀಲನೆ: ಮುಂಜಾನೆ 2 ಗಂಟೆಯಲ್ಲಿ ಸಂಭವಿಸಿದ ಅಪಘಾತದಿಂದಾಗಿ ಸಾಕಷ್ಟು ಊಹಾಪೋಹಗಳು ಕೇಳಿ ಬಂದಿತ್ತು. ಹೈವೆ ವೃತ್ತದಿಂದ ಎಲ್‌ಐಸಿ ವೃತ್ತದವರೆಗೆ ರೀಲ್ಸ್ ಬೈಕ್ ರೇಸ್ ನಡೆಸಿರಬಹುದು ಎಂಬ ಆರೋಪ ಕೇಳಿ ಬಂದಿತ್ತು. ಈ ಹಿನ್ನೆಲೆಯಲ್ಲಿ ಪೊಲೀಸರು ಹೈವೆ ವೃತ್ತದಿಂದ ಎಲ್‌ಐಸಿ ವೃತ್ತದವರೆಗೆ ಇರುವ ಸಿಸಿ ಕ್ಯಾಮರಾ ದೃಶ್ಯಾವಳಿ ಪರಿಶೀಲಿಸಲು ಮುಂದಾಗಿದ್ದಾರೆ. ಈ ಸಂಬಂಧ ಎನ್.ಆರ್. ಸಂಚಾರ ಠಾಣೆಯ ಇನ್ಸ್‌ಪೆಕ್ಟರ್ ರೇಖಾಬಾಯಿ ಭೇಟಿ ನೀಡಿ ಪರಿಶೀಲಿಸಿದರಲ್ಲದೆ, ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಸಾರ್ವಜನಿಕರು ಮಾಹಿತಿ ನೀಡಬೇಕು

> ಹಯಾಬೂಸ ಬೈಕ್ ಸವಾರನ ವೇಗದ ಚಾಲನೆಯಿಂದಾಗಿ ಅಮಾಯಕ ಫುಡ್ ಡೆಲಿವರಿ ವ್ಯಕ್ತಿ ಸಾವೀಗೀಡಾಗಿದ್ದಾರೆ. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು, ಹೈವೆ ವೃತ್ತದಿಂದ ನೆಲ್ಸನ್ ಮಂಡೇಲ ರಸ್ತೆಯಲ್ಲಿ ಎಲ್‌ಐಸಿ ವೃತ್ತದವರೆಗೆ ಸಿಸಿ ಕ್ಯಾಮರಾ ದೃಶ್ಯ ಪರಿಶೀಲಿಸಲಾಗುತ್ತದೆ. ಬೈಕ್ ಸವಾರರು ವೀಲ್ಹಿಂಗ್ ಹಾಗೂ ರೇಸ್ ಮಾಡುವುದು ಕಂಡು ಬಂದರೆ ಸಾರ್ವಜನಿಕರು ವಿಡಿಯೋ ಅಥವಾ ಫೋಟೊ ತೆಗೆದು ಕಳುಹಿಸಿದರೆ ಕ್ರಮ ಕೈಗೊಳ್ಳುತ್ತೇವೆ. ಮಾಹಿತಿ ನೀಡಿದವರ ಬಗ್ಗೆ ಗೌಪ್ಯತೆ ಕಾಪಾಡಲಾಗುತ್ತದೆ. ಈಗಾಗಲೇ ಕಾರ್ಯಾಚರಣೆ ಮಾಡು ವೀಲ್ಹಿಂಗ್ ಮಾಡುವವರ ವಿರುದ್ಧ ಪ್ರಕರಣ ದಾಖಲಿಸಿ, ಅಗತ್ಯ ಕ್ರಮ ಕೈಗೊಳ್ಳಲಾಗಿದೆ. –ಸುಂದರ್‌ರಾಜ್, ಡಿಸಿಪಿ ಸಂಚಾರ ವಿಭಾಗ

ಶ್ರೀ ಚಾಮುಂಡೇಶ್ವರಿ ಪೂಜೆ



ಮೈಸೂರಿನ ಶ್ರೀ ಚಾಮುಂಡೇಶ್ವರಿ ಸೇವಾ ಬಳಗದ ವತಿಯಿಂದ ಎರಡನೇ ಆಷಾಢ ಶುಕ್ರವಾರದಂದು ಚಾಮುಂಡಿಪುರಂನ ಕೃಷ್ಣ ಉಪಾಹಾರ ಹೋಟೆಲ್ ಬಳಿ ಶ್ರೀ ಚಾಮುಂಡೇಶ್ವರಿ ಪೂಜೆ ನೆರವೇರಿಸಿ, ಪ್ರಸಾದ ವಿನಿಯೋಗ ಮಾಡಲಾಯಿತು.

ಅಂಚೆ ಇಲಾಖೆ ಏಜೆಂಟ್ ನೇಮಕಾತಿಗಾಗಿ ಸಂದರ್ಶನ

ಮೈಸೂರು: ಅಂಚೆ ಜೀವ ವಿಮೆ/ಗ್ರಾಮೀಣ ಅಂಚೆ ಜೀವ ವಿಮೆ ಮಾರಾಟಕ್ಕೆ ತೊಡಗಿಸಿಕೊಳ್ಳುವ ಏಜೆಂಟ್‌ಗಳಿಗಾಗಿ ವಾಕ್–ಇನ್–ಇಂಟರ್‌ವ್ಯೂ O/o SPOs ಕರೆಯಲಾಗಿದ್ದು, ಜು.22ರಂದು ಬೆಳಿಗ್ಗೆ 11 ಗಂಟೆಗೆ ನಂಜನಗೂಡಿನಲ್ಲಿ ನಡೆಯಲಿದೆ ಎಂದು ನಂಜನಗೂಡು ವಿಭಾಗದ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ವಯಂ ಉದ್ಯೋಗ ನಡೆಸುವ ಮಹಿಳೆಯರಿಗೆ ಆತ್ಮಸ್ಥೈರ್ಯ ಹೆಚ್ಚು

ಮಹಿಳಾ ಉದ್ಯಮಿ ರೇವತಿ ಕಾಮತ್ ಅಭಿಮತ



ಮೈಸೂರು ಸಾಹಿತ್ಯ ಸಂಭ್ರಮದಲ್ಲಿ 'ಪುಷ್ಪಗಳಿಂದ ಪ್ರಾರಂಭವಾಗಿ ಪ್ರತಿಷ್ಠಿತ ಉದ್ಯಮದತ್ತ ಮೇಲೇರಿದ ಸ್ಫೂರ್ತಿ ಕಥನ, ಬೆಳೆದು ಬೆಳಸಿ ಬದುಕುವ ಬಗೆ' ವಿಷಯ ಕುರಿತ ಗೋಷ್ಠಿಯಲ್ಲಿ ಮೈಸೂರು ಲಿಟರರಿ ಫೋರಂ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷೆ ಶುಭಾ ಸಂಜಯ್ ಅರಸ್ ನಡೆಸಿಕೊಟ್ಟ ಸಂವಾದದಲ್ಲಿ ಉದ್ಯಮಿ ರೇವತಿ ಕಾಮತ್ ಅವರು ಮಾತನಾಡಿದರು.

ಮೈಸೂರು, ಜು.6(ಜಿಎ)–ಉದ್ಯಮಿ ಆಗುವವರಿಗೆ ಲೆಕ್ಕಾಚಾರ ಬಹಳ ಮುಖ್ಯ ಎಂದು ಮಹಿಳಾ ಉದ್ಯಮಿ ರೇವತಿ ಕಾಮತ್ ಸಲಹೆ ನೀಡಿದರು.

ಮೈಸೂರು ಲಿಟರರಿ ಫೋರಂ ಚಾರಿಟೆಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಆಯೋಜಿಸಲಾಗಿದ್ದ 9ನೇ ಆವೃತ್ತಿಯ ಮೈಸೂರು ಸಾಹಿತ್ಯ ಸಂಭ್ರಮದಲ್ಲಿ 'ಪುಷ್ಪಗಳಿಂದ ಪ್ರಾರಂಭವಾಗಿ ಪ್ರತಿಷ್ಠಿತ ಉದ್ಯಮದತ್ತ ಮೇಲೇರಿದ ಸ್ಫೂರ್ತಿ ಕಥನ, ಬೆಳೆದು ಬೆಳಸಿ ಬದುಕುವ ಬಗೆ' ವಿಷಯ ಕುರಿತು ಗೋಷ್ಠಿಯಲ್ಲಿ ಮೈಸೂರು ಲಿಟರರಿ ಫೋರಂ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷೆ ಶುಭಾ ಸಂಜಯ್ ಅರಸ್ ನಡೆಸಿಕೊಟ್ಟ ಸಂವಾದದಲ್ಲಿ ಅವರು ಮಾತನಾಡಿದರು.

ಉದ್ಯಮಿ ಆಗುವವರು ಸಮಾಜಕ್ಕೆ ಏನಾದರೂ ಕೊಡುಗೆ ನೀಡಬೇಕು. ಈ ನಿಟ್ಟಿನಲ್ಲಿ ನಾನು ಉದ್ಯಮಿ ಆಗಿ ಜೀವನ ವೃತ್ತಿ ಆರಂಭಿಸಿ, ಈಗ ಸಮಾಜ ಸೇವಕಿಯಾಗಿ ಮುಂದುವರೆದಿದ್ದೇನೆ. ಇದಕ್ಕೆ ನನ್ನ ಇಡೀ ಕುಟುಂಬ ಸಾಥ್ ನೀಡಿದೆ. ಅದರಲ್ಲೂ ಪತಿ ಆರಂಭದಿಂದ ಈವರೆಗೂ ಸಹಕಾರಿಯಾಗಿದ್ದಾರೆ ಎಂದರು.

> 38 ವರ್ಷವಿದ್ದಾಗ ಉದ್ಯಮ ಆರಂಭಿಸಿದ್ದು, ಇಂದು ಹೂವಿನ ಉದ್ಯಮದ ಜೊತೆಗೆ ಇತರ ಉದ್ಯಮಗಳನ್ನು ನಿರ್ವಹಿಸುತ್ತಿದ್ದೇನೆ. ಆದರೆ ಎಂದಿಗೂ ಸಣ್ಣ, ದೊಡ್ಡ ಎರಡು ವ್ಯವಹಾರಗಳಿಗೂ ಅದರಿಂದ ಆಗುವ ಸಾಧಕ–ಬಾಧಕಗಳ ಬಗ್ಗೆ ಅವಲೋಕನ ಮಾಡಿ ಲಾಭಾಂಶದ ಬಗ್ಗೆ ಲೆಕ್ಕಾಚಾರ ಮಾಡುವುದನ್ನು ಇಂದಿಗೂ ಮರೆತಿಲ್ಲ. ಪ್ರತಿಯೊಬ್ಬ ಉದ್ಯಮಿ ಲೆಕ್ಕಾಚಾರ ಬಹಳ ಮುಖ್ಯ.
> –ರೇವತಿ ಕಾಮತ್, ಉದ್ಯಮಿ

ನಾವು ಮೂಲತಃ ಮೈಸೂರಿನ ಸಾಂಪ್ರದಾಯಕ ಕುಟುಂಬದಲ್ಲಿ ಹುಟ್ಟಿದವಳು. ಮನೆಯಲ್ಲಿ ಎಲ್ಲರೂ ಹೊರಗಿನ ಪ್ರಪಂಚದ ಪರಿಚಯವೇ ಇಲ್ಲದಂತೆ ಮುದ್ದಾಗಿ ಸಾಕಿದರು. ಜೀವನದಲ್ಲಿ ಏನಾದರೂ ಸಾಧಿಸಬೇಕು ಎಂದಾಗ ಅಲಂಕಾರಿಕ ಹೂವಿನ ಉದ್ಯಮ ಆರಂಭಿಸಿದೆ. ಈ ವೇಳೆ ರೌಡಿಗಳು, ನಕ್ಸಲರು ಸೇರಿದಂತೆ ಎಲ್ಲರನ್ನೂ ನಿರ್ವಹಿಸಿದೆ. ಮಹಿಳೆಯರು ಆದಷ್ಟೂ ಸ್ವಯಂ ಉದ್ಯೋಗ ಆರಂಭಿಸಿದರೆ ಉತ್ತಮ. ಇದರಿಂದ ಆತ್ಮಸ್ಥೈರ್ಯ ಹೆಚ್ಚುತ್ತದೆ. ಹಾಗೇ ಇತರರಿಗೂ ಉದ್ಯೋಗ ನೀಡುವಂತಾಗುತ್ತದೆ ಎಂದು ವಿವರಿಸಿದರು.

ಭಾರತದ ಸಂಸ್ಕೃತಿ, ಸಂಪ್ರದಾಯದಲ್ಲಿ ರಾಜಕಾರಣ ಬೆರೆಯಬಾರದು

ಇತಿಹಾಸ ತಜ್ಞ ಹಿಂಡೋಲ್ ಸೇನ್ ಗುಪ್ತ ಸಲಹೆ

ಮೈಸೂರು, ಜು.6(ಬಿಎಲ್‌ಯು)– ನಮ್ಮ ಸಂಸ್ಕೃತಿ, ಸಂಪ್ರದಾಯ ಹಾಗೂ ಧರ್ಮದಲ್ಲಿ ಒಳ್ಳೆಯ ವಿಚಾರಗಳಿದ್ದು, ಇದರಲ್ಲಿ ರಾಜಕೀಯ ಪ್ರವೇಶಿಸಿದರೆ ಆ ಸಂಸ್ಥೆ ಸ್ಥಾಪನೆಯ ಉದ್ದೇಶದ ಪರಿಶುದ್ಧತೆ ಹಾಳಾಗುತ್ತದೆ ಎಂದು ಇತಿಹಾಸ ತಜ್ಞ ಹಿಂಡೋಲ್ ಸೇನ್ ಗುಪ್ತ ಎಚ್ಚರಿಸಿದರು.

ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಇಂದು ನಡೆದ ಮೈಸೂರು ಸಾಹಿತ್ಯ ಸಂಭ್ರಮದ 9 ನೇ ಆವೃತ್ತಿಯ ಕೊನೆಯ ದಿನದ ಕಾರ್ಯಕ್ರಮದಲ್ಲಿ 'ಭಾರತದಲ್ಲಿ ಉತ್ತಮ ನಾಯಕತ್ವದ ಬುದ್ಧಿವಂತಿಕೆ ಮತ್ತು ಆತ್ಮಸ್ಥೈರ್ಯ' ವಿಚಾರ ಕುರಿತು ದೀಪ್ತಿ ನವರತ್ನ ಅವರ ಪ್ರಶ್ನೆಗಳಿಗೆ ಉತ್ತರಿಸುತ್ತಾ ಮಾತನಾಡಿದ ಅವರು, ನಮ್ಮ ಸಂಸ್ಕೃತಿ, ಸಂಪ್ರದಾಯ ಹಾಗೂ ಧರ್ಮದಲ್ಲಿರುವ ಒಳ್ಳೆಯ ವಿಚಾರಗಳನ್ನು ಅಳವಡಿಸಿಕೊಳ್ಳಲು ಸಾಂಸ್ಥಿಕ ಪ್ರಯತ್ನವಾಗಬೇಕು ಎಂದು ಸಲಹೆ ನೀಡಿದರು.

ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ ಧಾರ್ಮಿಕ ಸಂಸ್ಥೆಗಳು ನಿರ್ಮಾಣವಾಗಬೇಕು. ಈ ಮೂಲಕ ಉತ್ತಮ ಬೆಳವಣಿಗೆಗಳು ರೂಪುಗೊಳ್ಳಲು ಪರಿಣಾಮಕಾರಿ ಪ್ರಯತ್ನಗಳು ನಡೆಯಬೇಕು ಎಂದು ಹಿಂಡೋಲ್ ಸೇನ್ ಗುಪ್ತ ಹೇಳಿದರು.

ಸರ್ಕಾರ ಸೇರಿದಂತೆ ಸರ್ಕಾರೇತರ ಸಂಸ್ಥೆಗಳು ಬಹಳಷ್ಟು ಯೋಜನೆ ರೂಪಿಸುತ್ತಿವೆ. ಈ ಮೂಲಕ ನಮ್ಮ ಆಚಾರ–ವಿಚಾರಗಳು, ಧರ್ಮ–ಪರಂಪರೆ ಉಳಿಸಿಕೊಳ್ಳುವ ಪ್ರಯತ್ನಗಳು ನಡೆಯಬೇಕು. ಈ ಹಿನ್ನೆಲೆ ಆಧ್ಯಾತ್ಮಿಕ ಚಿಂತಕರಾದ ಶ್ರೀಲ ಪ್ರಭುಪಾದರು ಇಸ್ಕಾನ್ ಸಂಸ್ಥೆ ಮೂಲಕ ಅಂತರಾಷ್ಟ್ರೀಯ ಮಟ್ಟದಲ್ಲಿ ಭಾರತದ ಧಾರ್ಮಿಕ ಹಾಗೂ ಆಧ್ಯಾತ್ಮಿಕ ವಿಚಾರಗಳನ್ನು ವಿಶ್ವದ ಹಲವು ರಾಷ್ಟ್ರಗಳಿಗೆ ಪಸರಿಸಿದರು ಎಂದರು.

ಈ ವೇಳೆ ಮಾತನಾಡಿದ ಪ್ರಭು ಚಂಚಲಾಪತಿ ಅವರು, ಒಮ್ಮೆ ನಮ್ಮ ಧಾರ್ಮಿಕ ಮುಖಂಡರೊಬ್ಬರೊಬ್ಬರು ಲಂಡನ್‌ಗೆ ಭೇಟಿ ನೀಡಿದ್ದರು. ನೀವು ಲಂಡನ್‌ಗೆ ಭೇಟಿ ನೀಡಿರುವ ಉದ್ದೇಶ ವೇನು ಎಂದು ಅವರನ್ನು ಅಲ್ಲಿನವರು ಪ್ರಶ್ನಿಸಿದಾಗ, 'ನಮ್ಮ ದೇಶದ ಎಲ್ಲಾ ಸಂಪತನ್ನು ನೀವು ಲೂಟಿ ಮಾಡಿ ಬಂದಿದ್ದೀರಿ. ಆದರೆ ಆಧ್ಯಾತ್ಮಿಕತೆ ಎಂಬ ದೊಡ್ಡ ಸಂಪತ್ತನ್ನು ಮಾತ್ರ ಮರೆತು ಬಂದಿದ್ದೀರಾ. ಅದನ್ನು ನಿಮಗೆ ಕೊಡಲು ಬಂದಿದ್ದೇನೆ, ಎಂದು ಎಂದು ಸಮರ್ಥನೀಯವಾದ ಉತ್ತರ ನೀಡಿದರು ಎಂದರು.

ಬಳಿಕ ಇಸ್ಕಾನ್ ಸಂಸ್ಥಾಪಕ ಪ್ರಭುಪಾದರ ಕುರಿತಂತೆ ಬಹಳಷ್ಟು ವಿಚಾರಗಳಿರುವ 'ಸಿಂಗ್, ಡ್ಯಾನ್ಸ್ ಅಂಡ್ ಲೀಡ್' ಪುಸ್ತಕ ಬಿಡುಗಡೆ ಮಾಡಲಾಯಿತು.



ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಭಾನುವಾರ ನಡೆದ ಮೈಸೂರು ಸಾಹಿತ್ಯ ಸಂಭ್ರಮದ 9ನೇ ಆವೃತ್ತಿಯ ಕಾರ್ಯಕ್ರಮದಲ್ಲಿ ಇತಿಹಾಸ ತಜ್ಞ ಹಿಂಡೋಲ್ ಸೇನ್ ಗುಪ್ತ ಅವರು "ಭಾರತದಲ್ಲಿ ಉತ್ತಮ ನಾಯಕತ್ವದ ಬುದ್ಧಿವಂತಿಕೆ ಮತ್ತು ಆತ್ಮಸ್ಥೈರ್ಯ" ಕುರಿತು ಮಾತನಾಡಿದರು. ಇಸ್ಕಾನ್ ಪ್ರಭು ಚಂಚಲಾಪತಿ ಹಾಗೂ ಲೇಖಕಿ ದೀಪ್ತಿ ನವರತ್ನ ಚಿತ್ರದಲ್ಲಿದ್ದಾರೆ.

> ಭಾರತದ ಇತಿಹಾಸದಲ್ಲಿ ಆಧ್ಯಾತ್ಮಿಕ ಹಾಗೂ ಇಂದಿನ ಮನುಕುಲಕ್ಕೆ ಪೂರಕವಾಗುವ ಬಹಳಷ್ಟು ವಿಚಾರಗಳಿವೆ. ಸಾವಿರಾರು ವರ್ಷದ ಇತಿಹಾಸದಲ್ಲಿ ನಮ್ಮ ಹಿರಿಯರು ನಮಗಾಗಿ ವಿಶಿಷ್ಟವಾದ ಬಹಳಷ್ಟು ವಿಚಾರಗಳನ್ನು ಬಿಟ್ಟು ಹೋಗಿದ್ದಾರೆ. ಈ ವಿಚಾರಗಳನ್ನು ನಾವು ಅನ್ವೇಷಿಸಿ, ವಿಶ್ಲೇಷಿಸಿ ಅಳವಡಿಸಿಕೊಂಡಾಗ ಅರ್ಥಪೂರ್ಣ ಜೀವನ ನಡೆಸಬಹುದು.
> –ಹಿಂಡೋಲ್ ಸೇನ್ ಗುಪ್ತ

ಸಾಹಿತಿ, ವಿಜ್ಞಾನಿ ಇಬ್ಬರಿಗೂ ಪ್ರಕೃತಿ ಭೇದಿಸುವ ಕೆಲಸವಿದೆ

ಕೃಷಿ ವಿಜ್ಞಾನಿ, ಸಾಹಿತಿ ಡಾ.ಕೆ.ಎನ್.ಗಣೇಶಯ್ಯ ಅಭಿಪ್ರಾಯ



ವಿಜ್ಞಾನ ಲೇಖಕ ಕೊಳ್ಳೆಗಾಲ ಶರ್ಮ ನಡೆಸಿಕೊಟ್ಟ ಗೋಷ್ಠಿಯಲ್ಲಿ ಕೃಷಿ ವಿಜ್ಞಾನಿ, ಸಾಹಿತಿ ಡಾ.ಕೆ.ಎನ್.ಗಣೇಶಯ್ಯ ಮಾತನಾಡಿದರು.

ಮೈಸೂರು, ಜು.6(ಜಿಎ)– ಸಾಹಿತಿ, ವಿಜ್ಞಾನಿ ಇಬ್ಬರಿಗೂ ಪ್ರಕೃತಿ ಭೇದಿಸುವ ಕೆಲಸವಿದೆ ಎಂದು ಕೃಷಿ ವಿಜ್ಞಾನಿ, ಸಾಹಿತಿ ಡಾ.ಕೆ.ಎನ್.ಗಣೇಶಯ್ಯ ಅಭಿಪ್ರಾಯಪಟ್ಟರು.

ಮೈಸೂರು ಲಿಟರರಿ ಫೋರಂ ಚಾರಿಟೆಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಆಯೋಜಿಸಲಾಗಿದ್ದ 9ನೇ ಆವೃತ್ತಿಯ ಮೈಸೂರು ಸಾಹಿತ್ಯ ಸಂಭ್ರಮದಲ್ಲಿ 'ಕೃಷಿ ವಿಜ್ಞಾನದಿಂದ ಚಾರಿತ್ರಿಕ ಕಾದಂಬರಿಗಳೆಡೆಗೆ ಪಯಣ ಇತಿಹಾಸದ ಗರ್ಭದಿಂದ ಆರಿಸಿದ ಅಮೂಲ್ಯ ನಿಧಿರತ್ನಗಳು' ವಿಷಯ ಕುರಿತು ವಿಜ್ಞಾನ ಲೇಖಕ ಕೊಳ್ಳೆಗಾಲ ಶರ್ಮ ನಡೆಸಿಕೊಟ್ಟ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ವಿಜ್ಞಾನ ನನಗೆ ಕೆಲಸದ ಜ್ಞಾನ ನೀಡಿದೆ. ಸಾಹಿತ್ಯ ಪ್ರಸಿದ್ಧಿ ನೀಡಿದ್ದು, ವಿಜ್ಞಾನ ಕ್ಷೇತ್ರದಿಂದ ಸಾಹಿತ್ಯ ಲೋಕಕ್ಕೆ ಬಹಳಷ್ಟು ಸಾಹಿತಿಗಳು ಬಂದಿದ್ದಾರೆ. ವಿಜ್ಞಾನಿಗಳು ಕನ್ನಡ ಸಾಹಿತ್ಯ ಕೊಡುಗೆ ನೀಡಿದ್ದಾರೆ ಎಂದರು.

ಸಾಹಿತ್ಯ ಕ್ಷೇತ್ರದಲ್ಲಿ ನಮಗೆ ಅನಿಸಿದ ಎಲ್ಲವನ್ನೂ ಬರೆಯಬಹುದು. ಅದಕ್ಕೆ ಯಾವುದೇ ಚೌಕಟ್ಟು ಇರುವುದಿಲ್ಲ. ಆದರೆ ವಿಜ್ಞಾನದಲ್ಲಿ ಸ್ವಾತಂತ್ರ್ಯವಿರುವುದಿಲ್ಲ. ಎಲ್ಲದಕ್ಕೂ ಅಧ್ಯಯನ ಮಾಡಬೇಕು. ಸಾಕ್ಷಿಗಳನ್ನು ಒದಗಿಸಿ ಜನರನ್ನು ಒಪ್ಪಿಸಬೇಕಿದೆ. ಈ ಹಿನ್ನೆಲೆಯಲ್ಲಿ ಸಾಹಿತಿಗಳು ವಿಜ್ಞಾನಿಗಳಾಗಲು ಸಾಧ್ಯವಾಗಿಲ್ಲ. ಆದರೆ, ಡಾ.ವಿನ್ಸಿ ಮತ್ತು ಪೂರ್ಣಚಂದ್ರ ತೇಜಸ್ವಿ ಅವರು ವೈಜ್ಞಾನಿಕವಾಗಿ ಸಾಕಷ್ಟು ಸಂಶೋಧನೆ ಮಾಡಿದ್ದಾರೆ. ಆದರೆ ಅದನ್ನು ಪ್ರಕಟಣೆ ಮಾಡಲು ಮುಂದಾಗಲಿಲ್ಲ ಎಂದರು.

ನನಗೆ ಕನ್ನಡ, ಇಂಗ್ಲಿಷ್ ಸಾಹಿತಿಗಳು ಪ್ರಭಾವ ಬೀರಲಿಲ್ಲ. ಬದಲಾಗಿ ವಿಜ್ಞಾನ ಜಾಡ್ಯದಿಂದ ಕಾದಂಬರಿಗಳು ವಿಭಿನ್ನವಾಗಿ ಮೂಡಿ ಬಂದಿವೆ. ನನ್ನ ಕಾದಂಬರಿಗಳನ್ನು ಓದಿ ಅಲ್ಲಿ ತಿಳಿಸಿರುವ ಸ್ಥಳಗಳಿಗೆ ಓದುಗರು ಭೇಟಿ ನೀಡುತ್ತಿದ್ದಾರೆ. ಇದು ಸಂತಸದ ವಿಚಾರವಾಗಿದೆ ಎಂದು ವಿವರಿಸಿದರು.

ರಾತ್ರಿ, ಬೆಳಗಾಗುವುದರೊಳಗೆ ಗ್ರಾಮೀಣಾಭಿವೃದ್ಧಿ ಸಾಧ್ಯವಿಲ್ಲ

ಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್



ಮೈಸೂರು ಸಾಹಿತ್ಯ ಸಂಭ್ರಮದಲ್ಲಿ 'ಸಾಹಿತ್ಯ–ಸಿನಿಮಾ–ಹಳ್ಳಿ ಹಂಬಲದ ತೆಕ್ಕೆಯಲ್ಲಿ' ವಿಷಯ ಕುರಿತು ಸಾಹಿತಿ ಸಿ.ನಾಗಣ್ಣ ನಡೆಸಿಕೊಟ್ಟ ಗೋಷ್ಠಿಯಲ್ಲಿ ಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಮಾತನಾಡಿದರು.

ಮೈಸೂರು, ಜು.6(ಜಿಎ)–ಹಳ್ಳಿಗಳೆಂದರೆ ರೆಸಾರ್ಟ್ ಎಂಬ ಭಾವನೆಯಿಂದ ತೆರಳಬಾರದು. ಅದು ಕೆಲವೊಮ್ಮೆ ನಿಶ್ಚಲ, ನಿರ್ಜೀವವೆನಿಸುತ್ತದೆ. ವಾಸ್ತವವನ್ನು ಅರಿತು ಬೆರೆಯಬೇಕು. ಬದಲಾವಣೆಗೆ ಮುಂದಾಗಬೇಕು ಎಂದು ಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ತಿಳಿಸಿದರು.

ಮೈಸೂರು ಲಿಟರರಿ ಫೋರಂ ಚಾರಿಟೆಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಆಯೋಜಿಸಿದ್ದ 9ನೇ ಆವೃತ್ತಿಯ ಮೈಸೂರು ಸಾಹಿತ್ಯ ಸಂಭ್ರಮದಲ್ಲಿ 'ಸಾಹಿತ್ಯ– ಸಿನಿಮಾ–ಹಳ್ಳಿ ಹಂಬಲದ ತೆಕ್ಕೆಯಲ್ಲಿ' ವಿಷಯ ಕುರಿತು ಸಾಹಿತಿ ಸಿ.ನಾಗಣ್ಣ ನಡೆಸಿಕೊಟ್ಟ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ಗ್ರಾಮೀಣ ಅಭಿವೃದ್ಧಿಯು ರಾತ್ರಿ, ಬೆಳಗಾಗುವುದರಲ್ಲಿ ಸಾಧ್ಯವಿಲ್ಲ. ನಾವು ಆರೋಪಗಳನ್ನು ಬದಿಗಿರಿಸಿ, ಕೆಲಸಗಳಿಗೆ ಅಂಟಿಕೊಂಡು ಹಳ್ಳಿಗಳಿಗೆ ತೆರಳಬೇಕು. ನನ್ನ ಹಳ್ಳಿ ಹಂಬಲವು ರೆಕ್ಕೆ, ಬೇರು ಎಂಬ ತತ್ವಕ್ಕೆ ಅಂಟಿಕೊಂಡಿದೆ. ಮನುಷ್ಯ ರೆಕ್ಕೆ ಬಿಚ್ಚಿ ಹಾರಬೇಕು, ಹಾರಿ ಹೀರಿದ್ದನ್ನು ಬೇರಿನ ಮೂಲಕ ಪಸರಿಸಬೇಕು. ಕುವೆಂಪು ಕುಳಿತಲ್ಲಿಯೇ ಜಗತ್ತನ್ನು ಕಂಡರೇ, ರವೀಂದ್ರನಾಥ್ ಟ್ಯಾಗೋರ್ ಜಗತ್ತನ್ನು ಸುತ್ತಿ ದರ್ಶನವನ್ನು ತಿಳಿಸಿದರು. ಈ ಇಬ್ಬರ ವಿಭಿನ್ನ ಸಾಮ್ಯತೆಯು ನನ್ನನು ಪ್ರಭಾವಿಸಿದೆ ಎಂದು ವಿವರಿಸಿದರು.

ಗ್ರಾಮೀಣ ಮಹಿಳೆಯ ಬದುಕಿನ ಅರಿವು ಬನ್ನೇರಿ, ಪುಟ್ಟಕ್ಕ ಮತ್ತು ದೇವೇರಿಯಂಥ ಪಾತ್ರಗಳ ಹುಟ್ಟಿಗೆ ಕಾರಣವಾಗಿದೆ. ಸಾಹಿತ್ಯ ಓದು ಸಿನಿಮಾಗೆ ಪ್ರೇರಣೆ ನೀಡುತ್ತದೆ. ಕನ್ನಡ ಭಾಷೆಯಿಲ್ಲದೆ ಕನ್ನಡ ಸಿನಿಮಾ ಉಳಿಯುವುದಿಲ್ಲ. ನಾನು ಸಿನಿಮಾ ಕ್ಷೇತ್ರದಲ್ಲೂ ಇದ್ದ ಕಾರಣ ನನ್ನ ಕೃತಿಗಳನ್ನು ವಿಮರ್ಶಕರು ಕಡೆಗಣಿಸಿರಬಹುದು. ಈಗ ಪ್ರಶಸ್ತಿಯನ್ನು ಮೀರಿ ಬದುಕುತ್ತಿದ್ದೇನೆ ಎಂದರು.

1985ರಲ್ಲಿ ಮಾನಸಗಂಗೋತ್ರಿಯಲ್ಲಿ ದೊರೆತ ಶಿಕ್ಷಕ ವೃಂದ, ಕೆಲ ಚಳವಳಿಗಳಲ್ಲಿ ಹಾದುಹೋಗಿದ್ದು ನನ್ನಲ್ಲಿ ಹೊಸತನ ನೀಡಿದೆ. ಕಥೆ ಮೂಲಕ ಹಲವು ಓದುಗರನ್ನು ತಲುಪಿ, 40 ವರ್ಷದ ಸಾಹಿತ್ಯ ಸೇವೆಗೆ ಸಾರ್ಥಕ ಭಾವನೆಯನ್ನು ಒದಗಿಸಿತು ಎಂದು ಮೆಲುಕು ಹಾಕಿದರು.

ಸಿನಿಮಾದ ಗ್ಲಾಮರ್ ಅನಾವರಣಗೊಳಿಸಿದ ಚಲನಚಿತ್ರ ಪತ್ರಕರ್ತೆ ಭಾವನಾ ಸೋಮಯ್ಯ



ಮೈಸೂರು ಸಾಹಿತ್ಯ ಸಂಭ್ರಮದ ಗೋಷ್ಠಿವೊಂದರಲ್ಲಿ ಖ್ಯಾತ ಚಲನಚಿತ್ರ ಪತ್ರಕರ್ತೆ ಭಾವನಾ ಸೋಮಯ್ಯ (ಎಡದಿಂದ ಮೊದಲನೆಯವರು) ಮಾತನಾಡಿದರು. ಸಿನಿಮಾ ವಿಮರ್ಶಕಿ ಮೈಥಿಲಿ ರಾವ್ ಚಿತ್ರದಲ್ಲಿದ್ದಾರೆ.

ಮೈಸೂರು,ಜು.6(ಪಿಎಂ)– ಮೈಸೂರು ಸಾಹಿತ್ಯ ಸಂಭ್ರಮದ 9ನೇ ಆವೃತ್ತಿಯ ಆಂಗ್ಲ (ಇಂಗ್ಲೀಷ್) ಗೋಷ್ಠಿಯಲ್ಲಿ 'ಸ್ಟಾರ್ ಬಯಾಗ್ರಫಿಸ್ ಟು ಎ ಪಾರ್ಟಿಷನ್ ಮೆಮೋಯಿರ್' ಕುರಿತು ಖ್ಯಾತ ಚಲನಚಿತ್ರ ಪತ್ರಕರ್ತೆ ಭಾವನಾ ಸೋಮಯ್ಯ ಮಾತನಾಡಿದರು. ಇವರೊಂದಿಗೆ ಸಿನಿಮಾ ವಿಮರ್ಶಕಿ ಮೈಥಿಲಿ ರಾವ್ ಸಂವಾದ ನಡೆಸಿದರು.

ಹೇಮಾ ಮಾಲಿನಿ ಹಾಗೂ ಅಮಿತಾಬ್ ಬಚ್ಚನ್ ಜೀವನ ಚರಿತ್ರೆ ಸೇರಿದಂತೆ ಸಿನಿಮಾ ಕುರಿತು ಅಗಾಧ ಸಾಹಿತ್ಯ ಕೃಷಿ ಮಾಡಿರುವ ಭಾವನಾ ಅವರ, ಸಾಹಿತ್ಯ ಪ್ರತಿಭೆಯು ಬಾಲಿವುಡ್ ಆಚೆಗೂ ವಿಸ್ತರಿಸಿರುವುದು ಗಮನಾರ್ಹ. ಇವರು ಪ್ರಧಾನಿ ನರೇಂದ್ರ ಮೋದಿಯವರ ಗುಜರಾತಿ ಪುಸ್ತಕಗಳನ್ನು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ. 50 ವರ್ಷಗಳಿಗೂ ಹೆಚ್ಚು ಕಾಲ ಸಿನಿಮಾದ ಬಗ್ಗೆ ಬರೆದಿರುವ ಭಾವನಾ ಅವರು ಗೋಷ್ಠಿಯಲ್ಲಿ ತಮ್ಮ ಕಾಲೇಜು ದಿನಗಳಿಂದ ಪ್ರಾರಂಭಿಸಿ, ತಮ್ಮ ದೀರ್ಘಕಾಲದ ವೃತ್ತಿಜೀವನದ ಬಗ್ಗೆ ತಮ್ಮ ಅನುಭವ ಹಂಚಿಕೊಂಡರು. ಸಿನಿಮಾದ ಗ್ಲಾಮರ್ ಮಾತ್ರವಲ್ಲದೆ, ತಮ್ಮ ವೈಯಕ್ತಿಕ ಹಿನ್ನೆಲೆ ಬಗ್ಗೆಯೂ ಮಾತನಾಡಿದರು.

ಇದೇ ವೇಳೆ ತಮ್ಮದೇ ಪುಸ್ತಕ 'ಫೇರ್‌ವೆಲ್ ಕರಾಚಿ'ಯ ಕೆಲ ಪುಟಗಳನ್ನು ಓದಿದರು. ಅವರ ತಂದೆಯವರು ಹೇಳುತ್ತಿದ್ದ ಕರಾಚಿಯ ಕಥೆಗಳನ್ನು ನೆನಪಿಸಿಕೊಂಡರು. ತಮ್ಮ ಇತ್ತೀಚಿನ ಆತ್ಮಚರಿತ್ರೆಯ ಪುಸ್ತಕದ ಬಗ್ಗೆಯೂ ಹೇಳಿದರು. ದೇಶ ವಿಭಜನೆಯ ಸಮಯದಲ್ಲಿ ಅವರು ಕುಟುಂಬ ಕರಾಚಿಯಿಂದ ಮುಂಬೈಗೆ ವಲಸೆ ಬಂದಿದ್ದನ್ನು ಈ ಆತ್ಮಚರಿತ್ರೆಯಲ್ಲಿ ಉಲ್ಲೇಖಿಸಲಾಗಿದೆ.

ನಿರ್ಭೀತಿಯಿಂದ ಸತ್ಯಾಂಶವನ್ನು ಸಮಾಜದ ಮುಂದಿಡಲು ಪತ್ರಕರ್ತರು ಜಾಗೃತರಾಗಿರಲಿ

ಹಿರಿಯ ಪತ್ರಕರ್ತೆ ಚಿತ್ರಾ ಸುಬ್ರಮಣ್ಯಂ



ಚಿತ್ರಾ ಸುಬ್ರಮಣ್ಯಂ

ಮೈಸೂರು, ಜು.6(ಎಂಕೆ)– ನಿರ್ಭೀತಿಯಿಂದ ಸತ್ಯಾಂಶವನ್ನು ಸಮಾಜದ ಮುಂದಿಡುವ ನಿಟ್ಟಿನಲ್ಲಿ ಪತ್ರಕರ್ತರು ಸದಾ ಜಾಗೃತರಾಗಿರಬೇಕು ಎಂದು ಹಿರಿಯ ಪತ್ರಕರ್ತೆ ಚಿತ್ರಾ ಸುಬ್ರಮಣ್ಯಂ ಹೇಳಿದರು.

ಮೈಸೂರು ಸಾಹಿತ್ಯ ಸಂಭ್ರಮದ 9ನೇ ಆವೃತ್ತಿಯಲ್ಲಿ 'ಬೋಫೋರ್ಸ್, ಬಚ್ಚನ್ ಮತ್ತು ಬೀಟ್ಸ್–ಸರ್ಕಾರ ಉರುಳಿಸಿದ ಒಬ್ಬೊಂಟಿ ಪತ್ರಕರ್ತೆ' ಕುರಿತ ಸಂವಾದದಲ್ಲಿ ಮಾತನಾಡಿದ ಅವರು, ಭಾರತೀಯ ರಾಜಕೀಯ ಇತಿಹಾಸ'ದ'ಲ್ಲಿ ಬೋಫೋರ್ಸ್ ಹಗರಣ ಬಯಲು ಮಾಡಿದ್ದು ಮಹತ್ವದ್ದಾಗಿದೆ. ಉನ್ನತ ಮಟ್ಟದಲ್ಲಿ ಭ್ರಷ್ಟಾಚಾರವನ್ನು ಬಹಿರಂಗಪಡಿಸಿದ ಶ್ರಮದಾಯಕ ತನಿಖೆ ಮತ್ತು ವರದಿಗಾರಿಕೆಯು ಭಾರತೀಯ ರಾಜಕೀಯ ಇತಿಹಾಸದಲ್ಲಿ ತಿರುವು ನೀಡಿತು. ಅಪಾರ ಒತ್ತಡದ ನಡುವೆಯೂ ಪ್ರಾಮಾಣಿಕತೆ ಮತ್ತು ದೃಢಸಂಕಲ್ಪ ಇದ್ದರೆ ಅಸಾಧ್ಯವೂ ಸಾಧ್ಯ ಎಂಬುದನ್ನು ಸಾಬೀತು ಮಾಡಲಾಯಿತು ಎಂದು ಸ್ಮರಿಸಿದರು. ಆಧುನಿಕ ಸವಾಲುಗಳ ನಡುವೆಯೂ ಸತ್ಯವನ್ನು ಹೇಳುವ ಧೈರ್ಯ ಮತ್ತು ನಿರ್ಭೀತಿಯ ಪತ್ರಿಕೋದ್ಯಮವು ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಭಾರತೀಯ ಪತ್ರಿಕೋದ್ಯಮ ವಿಕಾಸವಾಗಬೇಕಿದೆ ಎನ್ನುತ್ತಲೇ ತಮ್ಮ ವೃತ್ತಿ ಜೀವನದಲ್ಲಾದ ಅನುಭವಗಳನ್ನು ಹಂಚಿಕೊಂಡರು. ಪತ್ರಕರ್ತೆ ವಸಂತಿ ಹರಿಪ್ರಕಾಶ್ ನಿರೂಪಿಸಿದರು.

'ಚಂದಿರನಿಲ್ಲದ ಇರುಳುಗಳು' ಕೃತಿ ಬಿಡುಗಡೆ...



ಮೈಸೂರು ಲಿಟರರಿ ಫೋರಂ ಚಾರಿಟೆಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್ ಚಾರಿಟೆಬಲ್ ಟ್ರಸ್ಟ್ ಆಯೋಜಿಸಿದ್ದ 9ನೇ ಆವೃತ್ತಿಯ ಮೈಸೂರು ಸಾಹಿತ್ಯ ಸಂಭ್ರಮದಲ್ಲಿ ಲೇಖಕ ಎನ್.ಎಸ್.ವಿಶ್ವನಾಥ್ ಅವರ ಕೃತಿಯನ್ನು ಕನ್ನಡಕ್ಕೆ ರವಿ ಬಳೆ ಅನುವಾದ ಮಾಡಿರುವ 'ಚಂದಿರನಿಲ್ಲದ ಇರುಳುಗಳು' ಕೃತಿಯನ್ನು ಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಬಿಡುಗಡೆಗೊಳಿಸಿದರು. ಮೊದಲ ಪ್ರತಿಯನ್ನು ಉದ್ಯಮಿ ರೇವತಿ ಕಾಮತ್ ಖರೀದಿಸಿದರು. ಈ ವೇಳೆ ಟ್ರಸ್ಟ್ ಅಧ್ಯಕ್ಷೆ ಶುಭಾ ಸಂಜಯ್ ಅರಸ್ ಉಪಸ್ಥಿತರಿದ್ದರು.

ಬೆಳ್ಳಿತೆರೆಯಲ್ಲಿ ಮಿಂಚುವ ಕಲಾವಿದರು ದೈಹಿಕ, ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವುದು ಅತೀ ಮುಖ್ಯ



ನಟರಾದ ಬಲರಾಜ್ವಾಡಿ, ಸುಧಾ ಬೆಳವಾಡಿ ಹಾಗೂ ಶಂಕರ್ ಅಶ್ವಥ್ 'ಸಿನಿಮಾರಂಗದ ಕಷ್ಟ–ನಷ್ಟಗಳ ಕಾರ್ಮೋಡಗಳ ನಡುವೆ ಬೆಳ್ಳಿ ತೆರೆಯಲ್ಲಿ ಮಿಂಚುವ ಸವಾಲುಗಳು' ಕುರಿತು ಸಂವಾದ ನಡೆಸಿದರು. ಕಥೆಗಾರ ಧರ್ಮೇಂದ್ರ ಪ್ರಸಾದ್ ಉಪಸ್ಥಿತರಿದ್ದರು.

ಮೈಸೂರು, ಜು.6(ಎಂಕೆ)– ಅಭಿನಯದ ಸೂಕ್ಷ್ಮತೆಯನ್ನು ಅರಿತು ಬೆಳ್ಳಿತೆರೆಯಲ್ಲಿ ಮಿಂಚುವ ಕಲಾವಿದರು ದೈಹಿಕ ಮತ್ತು ಮಾನಸಿಕವಾಗಿ ಆರೋಗ್ಯ ಕಾಪಾಡಿಕೊಳ್ಳುವುದೇ ಅತೀ ಮುಖ್ಯ ಸವಾಲಾಗಿರುತ್ತದೆ ಎಂಬ ಅಭಿಪ್ರಾಯ ವ್ಯಕ್ತವಾಯಿತು.

ಮೈಸೂರು ಸಾಹಿತ್ಯ ಸಂಭ್ರಮದ 9ನೇ ಆವೃತ್ತಿಯ 2ನೇ ದಿನ 'ಸಿನಿಮಾರಂಗದ ಕಷ್ಟ–ನಷ್ಟಗಳ ಕಾರ್ಮೋಡಗಳ ನಡುವೆ ಬೆಳ್ಳಿ ತೆರೆಯಲ್ಲಿ ಮಿಂಚುವ ಸವಾಲುಗಳು' ಕುರಿತು ಚರ್ಚಿಸಿದ ನಟರಾದ ಬಲರಾಜ್ವಾಡಿ, ಸುಧಾ ಬೆಳವಾಡಿ ಹಾಗೂ ಶಂಕರ್ ಅಶ್ವಥ್, ಅಭಿನಯ ಕಲಿಕೆಯ ಜೊತೆಗೆ ಅವಮಾನಗಳು ಎದುರಾದರೂ ಸಮಾನಚಿತ್ತದಿಂದ ಸ್ವೀಕರಿಸುವ ತಾಳ್ಮೆ ಕಲಾವಿದರಿಗೆ ಅತ್ಯಗತ್ಯವಾಗಿದೆ ಎಂದು ತಿಳಿಸಿದರು.

ನಟಿ ಸುಧಾ ಬೆಳವಾಡಿ ಮಾತನಾಡಿ, ಸಿನಿಮಾಗಿಂತ ರಂಗಭೂಮಿ ಎಂದರೆ ನನಗೆ ಹೆಚ್ಚು ಪ್ರೀತಿ. ಸಿನಿಮಾಗಳಲ್ಲಿ ಅಭಿನಯ ಹೊಸ ಕಲಿಕೆಯ ಅನುಭವ ನೀಡಿದರೂ ಇತ್ತೀಚಿನ ಸಿನಿಮಾಗಳಲ್ಲಿ ಅಪರಾಧಗಳನ್ನೇ ಹೆಚ್ಚಾಗಿ ತೋರಿಸುವ ಸಂಸ್ಕೃತಿ ಬೆಳೆದಿದೆ. ಕೆಲವೊಂದು ಸೂಕ್ಷ್ಮತೆಗಳನ್ನು ಗಮನಿಸಬೇಕಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಹಿರಿಯ ನಟ ಶಂಕರ್ ಅಶ್ವಥ್ ಮಾತನಾಡಿ, ಸುಳ್ಳನ್ನು ನಿಜ, ನಿಜವನ್ನು ಸುಳ್ಳು ಮಾಡಿ ತೆರೆಯ ಮೇಲೆ ತೋರಿಸಲಾಗುತ್ತದೆ. ಆದರೆ ಕಲಾವಿದರ ಬದುಕು ಸಿನಿಮಾದಲ್ಲಿ ಹೇಗಿರುತ್ತೋ ಅದೇ ರೀತಿ ಇರಲು ಸಾಧ್ಯವಿಲ್ಲ. ಕಲಾವಿದರಿಗೆ ತಮ್ಮನ್ನು ತಾವು ಸಮಾಜದಲ್ಲಿ ತೋರಿಸಿಕೊಳ್ಳುವ ರೀತಿಯೇ ಸವಾಲಾಗಿರುತ್ತದೆ. ಕಲಾವಿದರ ಮಕ್ಕಳು ಕಲಾವಿದರೇ ಆಗಬೇಕು ಎಂಬುದಿಲ್ಲ. ಪ್ರತಿಭೆ ಇದ್ದರೆ, ಕಲಾವಿದರಾಗಬಹುದು. ಮುಖ್ಯವಾಗಿ ಅವಮಾನಗಳನ್ನು ಸಹಿಸಿಕೊಂಡು ಕಲಿಯುವ ಮನಸ್ಥಿತಿ ಸದಾ ಇರಬೇಕು ಎಂದು ತಿಳಿಸಿದರು.

ನಟ ಬಲರಾಜ್ವಾಡಿ ಮಾತನಾಡಿ, ಪಾತ್ರದೊಳಗೆ ಪ್ರವೇಶ ಮಾಡುವುದೇ ಒಂದು ಪಯಣವಾಗಿರುತ್ತದೆ. ಒಮ್ಮೊಮ್ಮೆ ಅತೀಯಾದ ಉದ್ವೇಗದಿಂದ ಪ್ರಜ್ಞೆ ಕಳೆದುಕೊಳ್ಳುವ ಸಂದರ್ಭಗಳು ಬರುತ್ತವೆ. ಆದ್ದರಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ಪಾತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿ, ಉತ್ತಮ ಅಭಿನಯ ಪ್ರಸ್ತುತಪಡಿಸಿದರೆ ಆಯ್ಕೆಗಳು ಹೆಚ್ಚಾಗಲಿವೆ. ಕಲಾವಿದನ ಬದುಕು ಕತ್ತಿಯ ಮೇಲಿನ ನಡಿಗೆಯಾಗಿತ್ತದೆ ಎಂದರು. ಕಥೆಗಾರ ಧರ್ಮೇಂದ್ರ ಪ್ರಸಾದ್ ಕಾರ್ಯಕ್ರಮ ನಿರೂಪಿಸಿದರು.

'ಮನದ ಭಾವಗಳಿಗೆ ಪದಗಳಿಂದ ರಂಗು ತುಂಬಿ ಚೆಲ್ಲುವ ಕವಿತೆಗಳು' ವಿಚಾರಗೋಷ್ಠಿ



ಮೈಸೂರು ಸಾಹಿತ್ಯ ಸಂಭ್ರಮದಲ್ಲಿ 'ಮನದ ಭಾವಗಳಿಗೆ ಪದಗಳಿಂದ ರಂಗು ತುಂಬಿ ಚೆಲ್ಲುವ ಕವಿತೆಗಳು' ವಿಷಯದ ಕುರಿತು ನಡೆದ ಗೋಷ್ಠಿಯಲ್ಲಿ ವಿದ್ಯಾರಶ್ಮಿ ಪೆಲ್ಲತ್ತಡ್ಕ, ಮಹಂತೇಶ ಪಾಟೀಲ, ಎಂ.ಜವರಾಜ್, ಭರತ್ ದಿವಾಕರ್, ಡಾ.ಮಧು ಬಿರಾದರ ಅವರು ಪಾಲ್ಗೊಂಡಿದ್ದರು. ಚೈತ್ರ ಶಿವಯೋಗಿ ಮಠ ನಡೆಸಿಕೊಟ್ಟರು.

ಮೈಸೂರು, ಜು.6(ಜಿಎ)–ಮೈಸೂರು ಲಿಟರರಿ ಫೋರಂ ಚಾರಿಟೆಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಆಯೋಜಿಸಲಾಗಿದ್ದ 9ನೇ ಆವೃತ್ತಿಯ ಮೈಸೂರು ಸಾಹಿತ್ಯ ಸಂಭ್ರಮದಲ್ಲಿ 'ಮನದ ಭಾವಗಳಿಗೆ ಪದಗಳಿಂದ ರಂಗು ತುಂಬಿ ಚೆಲ್ಲುವ ಕವಿತೆಗಳು' ವಿಷಯದ ಕುರಿತು ನಡೆದ ಗೋಷ್ಠಿಯಲ್ಲಿ ವಿದ್ಯಾರಶ್ಮಿ ಪೆಲ್ಲತ್ತಡ್ಕ, ಮಹಂತೇಶ ಪಾಟೀಲ, ಎಂ.ಜವರಾಜ್, ಭರತ್ ದಿವಾಕರ್, ಡಾ.ಮಧು ಬಿರಾದರ ಅವರು ಪಾಲ್ಗೊಂಡಿದರು. ಚೈತ್ರ ಶಿವಯೋಗಿ ಮಠ ನಡೆಸಿಕೊಟ್ಟರು.

ಮಧು ಬೀರಾದರ ಮಾತನಾಡಿ, ಕರ್ನಾಟಕದ ಮಹಾರಾಷ್ಟ್ರ ಗಡಿ ಭಾಗದಲ್ಲಿ ಜನಿಸಿದ ನನಗೆ ಭಾರತ ಮತ್ತು ಪಾಕಿಸ್ತಾನ ವಿಭಜನೆಯಾದಾಗ ಅಲ್ಲಿ ಕೆಲವರು ಅನುಭವಿಸಿದ ರೀತಿ ಗಡಿ ಭಾಗದವರು ಅನುಭವಿಸುತ್ತಿದ್ದಾರೆ. ಇಲ್ಲಿನ ಸಮಸ್ಯೆಗಳಿಂದ ಸಾಕಷ್ಟು ಪ್ರೇರಣೆ ದೊರೆತಿದ್ದು, ಅಲ್ಲಿ ನಡೆಯುತ್ತಿದ್ದ ಸಾಮಾಜಿಕ ನಾಟಕಗಳು ಪ್ರೇರಣೆ ನೀಡಿವೆ. ಹಾಗೇ ಎಂಎ ಮಾಡಲು ಧಾರವಾಡಕ್ಕೆ ಬಂದಾಗ ನೀನಾಸಂನಲ್ಲಿ ಕೆಲವು ನಾಟಕಗಳು ಸಾಕಷ್ಟು ಪ್ರಭಾವ ಬೀರಿವೆ. ನಂತರ ಕುವೆಂಪು, ಬೇಂದ್ರೆ, ಅನಂತಮೂರ್ತಿ ಅವರ ಕಾವ್ಯದ ಶಕ್ತಿ ಸಾಕಷ್ಟು ಪ್ರಭಾವ ಬೀರಿದೆ ಎಂದು ತಿಳಿಸಿದರು.

ಮಹತೇಶ್ ಪಾಟೀಲ್ ಮಾತನಾಡಿ, ಕಾಡು ಮತ್ತು ಕಾವ್ಯಕ್ಕೆ ಸೂಕ್ಷ್ಮ ಮನಸ್ಥಿತಿ ಮುಖ್ಯ. ಇಂದು ಸೂಕ್ಷ್ಮತೆ ಇಲ್ಲದಿರುವುದರಿಂದ ಕಾಡು, ಕಾವ್ಯ ಎಂಬುದು ನಶಿಸುತ್ತಿದೆ. ಕಾವ್ಯ ಯಾವ ಭಾಗದಲ್ಲಿ ವೈಭವದಿದಿಂದ ಕೂಡಿರುತ್ತದೆಂಯೋ ಅಲ್ಲಿ ಸಂವೃದ್ಧಿ ಇರುತ್ತದೆ. ಮತ್ತೊಂದೆಡೆ ಪ್ರೀತಿ ಮತ್ತು ನಿಸರ್ಗ ಎರಡು ಕಳೆದುಕೊಂಡು ಹೋಗುವುದು ಕಷ್ಟಕರ. ಕಾಡು, ಪ್ರೀತಿ ಇಲ್ಲದ ಜಗತ್ತು ಇಲ್ಲ ಎಂದರು.

ವಿದ್ಯಾರಶ್ಮಿ ಪೆಲ್ಲತ್ತಡ್ಕ ಮಾತನಾಡಿ, ಕವನ ಬರೆಯಬೇಕು ಎಂದಾಗ ಅದು ಬರೆಯಲು ಸಾಧ್ಯವಿಲ್ಲ. ಅದು ಒಂದು ಮ್ಯಾಜಿಕಲ್ ಮೂಮೆಂಟ್. ನಾನು ಕವಿ ಎಂಬ ಭಾವವನ್ನು ಪಕ್ಕಕ್ಕೆ ಇಡಬೇಕು. ಆಗ ಮಾತ್ರ ಹೊಸ ಕವನಗಳು ಮೂಡುತ್ತವೆ ಎಂದು ಹೇಳಿದರು.

ಎಂ.ಜವರಾಜ್ ಮಾತನಾಡಿ, ಕಾಲೇಜಿನ ದಿನಗಳಲ್ಲಿ ಹುಡುಗಿರನ್ನು ಮೆಚ್ಚಿಸಲು ಮೊದಲು ಬರೆಯಲು ಆರಂಭಿಸಿದೆ. ಪ್ರಾಧ್ಯಾಪಕರು ನೀಡಿದ ಸಲಹೆಯಿಂದ ನಂತರ ಗಂಭೀರವಾಗಿ ಬರೆಯಲು ಆರಂಭಿಸಿದೆ. ನಾನು ಬರೆದ ಕವಿತೆಗಳನ್ನು ಓದಿದ ಪ್ರತಿಯೊಬ್ಬರೂ ನಿಮ್ಮ ಕವಿತೆ ದೇವನೂರ ಮಹದೇವ ಅವರ ಕವಿತೆಯಂತೆ ಇದೆ ಎಂದು ತಿಳಿಸಿದರು.

ಕವಿತೆ ಬರೆದು ಅದನ್ನು ದೇವನೂರ ಕವಿತೆಗೆ ಹೋಲಿಸಿದ ನಂತರ ನಾನು ಅವರ ಕುಸುಮಬಾಲೆ ಕೃತಿಯನ್ನು ಓದಲು ಆರಂಭಿಸಿದೆ. ಆದರೆ ಅದು ಐದು ಬಾರಿ ಓದಿದ ನಂತರವೇ ಅರ್ಥವಾಗಿದ್ದು, ಆಗ ನನಗೆ ಅನಿಸಿದ್ದು, ಜನರು ನನ್ನ ಕವಿತೆಗಳನ್ನು ದೇವನೂರ ಕವಿತೆಗಳಿಗೆ ಹೋಲಿಕೆ ಮಾಡುತ್ತಿದ್ದಾರೆ ಎಂದರೆ, ಅಲ್ಲಿ ಏನಿದೆ ಎಂದು ಹುಡುಕಲು ಆರಂಭಿಸಿದಾಗ ಇಬ್ಬರ ಬರವಣಿಗೆಯ ಶಬ್ದಗಳು ನಂಜನಗೂಡು, ನರಸೀಪುರದ ಭಾಷೆಗಳಿದ್ದರಿಂದ ಹಾಗೇ ಹೇಳಿದ್ದಾರೆ ಎಂದು ಅರ್ಥೈಸಿಕೊಂಡೆ ಎಂದು ಅವರು ವಿವರಿಸಿದರು.

ಸರ್ಕಾರದ ಸಾಧನೆ ವಸ್ತುಪ್ರದರ್ಶನಕ್ಕೆ ಚಾಲನೆ



ಪಂಚ ಗ್ಯಾರಂಟಿ ಯೋಜನೆ ಬಿಂಬಿಸುವ ವಸ್ತುಪ್ರದರ್ಶನಕ್ಕೆ ಚಾಲನೆ ನೀಡಲಾಯಿತು.

ಮಡಿಕೇರಿ,ಜು.6–ರಾಜ್ಯ ಸರ್ಕಾರದ 2 ವರ್ಷಗಳ ಅಭಿವೃದ್ಧಿ ಸಾಧನೆ ಹಾಗೂ ಪಂಚ ಗ್ಯಾರಂಟಿ ಯೋಜನೆ ಬಿಂಬಿಸುವ ಮಾಹಿತಿ ಒಳಗೊಂಡ ವಸ್ತು ಪ್ರದರ್ಶನಕ್ಕೆ ಗ್ಯಾರಂಟಿ ಯೋಜನೆ ಜಿಲ್ಲಾ ಅನುಷ್ಠಾನ ಸಮಿತಿ ಅಧ್ಯಕ್ಷ ತೀತೀರ ಧರ್ಮಜ ಉತ್ತಪ್ಪ ಮತ್ತು ಜಿಲ್ಲಾಧಿಕಾರಿ ವೆಂಕಟ್ ರಾಜಾ ಚಾಲನೆ ನೀಡಿದರು.

ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಕರ್ನಾಟಕ ರಾಜ್ಯ ಸರ್ಕಾರದ 2 ವರ್ಷಗಳ ಸಾಧನೆ ಹಾಗೂ ಸರ್ಕಾರದ ವಿವಿಧ ಯೋಜನೆಗಳ ಕುರಿತ ಮಾಹಿತಿಯುಳ್ಳ ವಸ್ತುಪ್ರದರ್ಶನಕ್ಕೆ ಚಾಲನೆ ನೀಡಿದರು. ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಜಾರಿಗೊಂಡು, ಜನಸಾಮಾನ್ಯರ ಬದುಕಿಗೆ ಆಸರೆಯಾಗಿರುವ ಪಂಚ ಗ್ಯಾರಂಟಿ ಯೋಜನೆಗಳು ಸೇರಿದಂತೆ ಸರ್ಕಾರದ ವಿವಿಧ ಕಾರ್ಯಕ್ರಮ ಒಳಗೊಂಡ ಸಮಗ್ರ ಮಾಹಿತಿಯುಳ್ಳ ಫಲಕ ಗಳನ್ನು ಗಣ್ಯರು ವೀಕ್ಷಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಭಾವಚಿತ್ರಗಳನ್ನು ಒಳಗೊಂಡ ಸೆಲ್ಫಿ ಪಾಯಿಂಟ್‌ಗಳನ್ನು ವೀಕ್ಷಿಸಿ ಪ್ರಶಂಶಿಸಿದ ಗ್ಯಾರಂಟಿ ಯೋಜನೆ ಅನುಷ್ಠಾನ ಜಿಲ್ಲಾ ಸಮಿತಿ ಅಧ್ಯಕ್ಷ ಧರ್ಮಜ ಉತ್ತಪ್ಪ, ಜಿಲ್ಲಾಧಿಕಾರಿ ವೆಂಕಟ್‌ರಾಜಾ ಹಾಗೂ ಗ್ಯಾರಂಟಿ ಯೋಜನೆ ತಾಲೂಕು ಅನುಷ್ಠಾನ ಸಮಿತಿ ಅಧ್ಯಕ್ಷ ಮಂದ್ರಿರ ಮೋಹನ್ ದಾಸ್ ಅಮು ಸೆಲ್ಫಿ ಪಾಯಿಂಟ್‌ಗಳಲ್ಲಿ ಫೋಟೋ ಕ್ಲಿಕ್ಕಿಸಿಕೊಂಡರು. ತೀತೀರ ಧರ್ಮಜ ಉತ್ತಪ್ಪ, ಸಿದ್ದರಾಮಯ್ಯ ಸರ್ಕಾರ ಗ್ಯಾರಂಟಿ ಯೋಜನೆ ಸೇರಿದಂತೆ ಹಲವು ಜನಪರ ಕಾರ್ಯಕ್ರಮ ಜಾರಿಗೊಳಿಸಿದೆ. ಆ ನಿಟ್ಟಿನಲ್ಲಿ ಗ್ರಾಮೀಣ ಮಟ್ಟಕ್ಕೂ ಈ ಯೋಜನೆಯ ಮಾಹಿತಿ ದೊರೆಯುವಂತಾಗಬೇಕು

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಸರ್ಕಾರದ ಸಾಧನೆ ಹಾಗೂ ಯೋಜನೆಗಳನ್ನು ಬಿಂಬಿಸುವ ಮಾಹಿತಿ ಒಳಗೊಂಡ ವಸ್ತು ಪ್ರದರ್ಶನವನ್ನು ಜು.8 ರವರೆಗೆ ಸಾರ್ವಜನಿಕರ ವೀಕ್ಷಣೆಗೆ ಲಭ್ಯವಿದೆ ಎಂದು ವಾರ್ತಾ ಇಲಾಖೆಯ ಸಹಾಯಕ ನಿರ್ದೇಶಕ ಚಿನ್ನಸ್ವಾಮಿ ಮಾಹಿತಿ ನೀಡಿದರು. ಕೆಎಸ್‌ಆರ್‌ಟಿಸಿ ಸಹಾಯಕ ಸಂಚಾರ ಅಧೀಕ್ಷಕ ಎ.ಈರಸಪ್ಪ, ಸಂಚಾರ ನಿಯಂತ್ರಕ ಮಲ್ಲಿಕಾರ್ಜುನ, ನಾಯಕ್ ಮತ್ತಿತರರು ಹಾಜರಿದ್ದರು.

ಕಾರ್ಗಿಲ್ ವಿಜಯ ದಿವಸ ಆಚರಣೆಯಲ್ಲಿ

ಹುತಾತ್ಮ ಯೋಧರ ಸೇವೆ ಸ್ಮರಣೆ

ಸಿದ್ದಾಪುರಜು.6– ಕಾರ್ಗಿಲ್ ವಿಜಯ ದಿವಸದ ಅಂಗವಾಗಿ ವೀರ ಯೋಧರ ಅತ್ಯುನ್ನತ ತ್ಯಾಗಗಳನ್ನು ಗೌರವಿಸಲು ಭಾರತೀಯ ಸೇನೆಯು 'ಘರ್ ಘರ್ ಶೌರ್ಯ ಸನ್ಮಾನ್' ವಿಶೇಷ ಸಂಪರ್ಕ ಕಾರ್ಯಕ್ರಮದಲ್ಲಿ ಸ್ಮರಣಿಕೆ ಮತ್ತು ಕೃತಜ್ಞತಾ ಪತ್ರ ಪ್ರದಾನ ಸಮಾರಂಭ ವಿರಾಜಪೇಟೆ ತಾಲೂಕಿನ ಮೈತಾಡಿ ಗ್ರಾಮದಲ್ಲಿ ನಡೆಯಿತು.


ಕೊಡಗಿನ ಹುತಾತ್ಮ ಯೋಧ ಕಾವೇರಪ್ಪ ಅವರ ಪತ್ನಿ ಶೋಭಾರನ್ನು ಭಾರತೀಯ ಸೇನೆಯು ಗೌರವಿಸಿತು.

ಜೂನಿಯರ್ ಕಮಿಷ್ಡ್ ಆಫೀಸರ್ ಮತ್ತು ಮೂವರು ಇತರ ಶ್ರೇಣಿಗಳನ್ನು ಒಳಗೊಂಡ ಸೇನಾ ನಿಯೋಗದ 6 ಮಂದಿ ತಂಡ ಕಾರ್ಗಿಲ್ ಯುದ್ಧದಲ್ಲಿ ವೀರ ಮರಣ ಹೊಂದಿದ ಕಾವೇರಪ್ಪರ ಸಮಾಧಿಗೆ ತೆರಳಿ ಗೌರವ ಪೂರಕವಾಗಿ ಪುಷ್ಪ ನಮನ ಸಲ್ಲಿಸಿ ಸೇನಾ ಗೌರವ ಸೂಚಿಸಿದರು.

ಜೂನಿಯರ್ ಕಮಿಷನ್ಡ್ ಆಫೀಸರ್ ನಾಯಬ್ ಸುಬೇದಾರ್–ಕಿಂಗಸ್ಲೀನ್ ಮಾತನಾಡಿ, ಈ ಪ್ರಯತ್ನವು ಕೇವಲ ಗೌರವವಲ್ಲ, ಬದಲಾಗಿ ಭಾರತೀಯ ಸೇನೆ ಮತ್ತು ವೀರ ಸೈನಿಕರ ನಡುವಿನ ಅವಿನಾಭಾವ ಬಾಂಧವ್ಯದ ಪುನರುಚ್ಚಾರಣೆಯಾಗಿದೆ. ಇದು ಹುತಾತ್ಮರನ್ನು ಗೌರವಿಸುವ ಮತ್ತು ಅವರ ಕುಟುಂಬಗಳೊಂದಿಗೆ ನಿಲ್ಲುವ ನಮ್ಮ ಆಳವಾದ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದರು.

ಸೇನಾ ತಂಡದೊಂದಿಗೆ ಆಗಮಿಸಿದ್ದ ನಂಜರಾಯಪಟ್ಟಣದ ನಾಯಬ್ ಸುಬೇದಾರ– ಸಿ.ಎಲ್ ತಿಲಕ್ ಮಾತನಾಡಿ, ಕೊಡಗಿನ ವೀರ ಪುತ್ರ ಕಾವೇರಪ್ಪ ಹುತಾತ್ಮರಾಗಿ 26 ವರ್ಷ ಕಳೆದಿದೆ. ದೇಶಕ್ಕಾಗಿ ತ್ಯಾಗ ಮಾಡಿ ಹುತಾತ್ಮ ಯೋಧರನ್ನು ಗೌರವಿಸುವ ಹಾಗೂ ಕುಟುಂಬಕ್ಕೆ ಧೈರ್ಯ ತುಂಬುವ ಕೆಲಸ ಭಾರತೀಯ ಸೇನೆ ಮಾಡುತ್ತಿರುವುದು ಹೆಮ್ಮೆಯ ವಿಷಯ. ಯುವ ಸಮೂಹ ಹೆಚ್ಚಿನ ಸಂಖ್ಯೆಯಲ್ಲಿ ಸೇನೆಗೆ ಸೇರುವ ಮೂಲಕ ದೇಶ ಸೇವೆ ಮಾಡಬೇಕೆಂದು ಹೇಳಿದರು.

ಹುತಾತ್ಮ ಯೋಧ ಕಾವೇರಪ್ಪ ಅವರ ಪತ್ನಿ ಶೋಭಾ ಮಾತನಾಡಿ, ಕಾರ್ಗಿಲ್ ಯುದ್ಧದಲ್ಲಿ ವೀರ ಮರಣ ಹೊಂದಿ ಹುತಾತ್ಮರಾಗಿ 26 ವರ್ಷ ಕಳೆದಿದೆ. ಭಾರತೀಯ ಸೇನೆ ಹುತಾತ್ಮರನ್ನು ಗೌರವಿ ಸುವ ಮೂಲಕ ಕುಟುಂಬಕ್ಕೆ ಧೈರ್ಯ ತುಂಬುವ ಕೆಲಸ ಮಾಡುತ್ತಿದೆ ಎಂದು ಸೇನೆಯ ಕಾಳಜಿ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿದರು.

ಸೇನಾ ತಂಡದವರಿಗೆ ಹೂಗುಚ್ಛ ನೀಡುವ ಮೂಲಕ ಆತ್ಮೀಯವಾಗಿ ಬರ ಮಾಡಿಕೊಂಡು ವಿಶೇಷವಾಗಿ ಸನ್ಮಾನಿಸಿ ಗೌರವಿಸಿ ಬೀಳ್ಕೊಡಲಾಯಿತು. ಗ್ರಾಮದ ಪ್ರಮುಖರಾದ ಅರುಣ್, ಅಪ್ಪಯ್ಯ, ಸಿಂಧು, ಪೊನ್ನಪ್ಪ, ನಾಣಯ್ಯ, ಲೋಕೇಶ್, ಸುರೇಶ್, ಜೋಯಪ್ಪ, ಈರಪ್ಪ, ಸುಬ್ಬಯ್ಯ, ಸಿಬ್ಬಂದಿಗಳಾದ ಹವಾಲ್ದಾರ್ ರೀಜಿಶ, ಲಕ್ಷ್ಮಣ, ರಮೇಶ್ ರೆಡ್ಡಿ, ಸೈಯೂಜ್ ಸೇರಿದಂತೆ ಮತ್ತಿತರರು ಹಾಜರಿದ್ದರು.

ಬಾಬು ಜಗಜೀವನ್‌ರಾಂ ಪುಣ್ಯಸ್ಮರಣೆ


ತಾಲೂಕು ಆಡಳಿತ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯದಲ್ಲಿ ಜಗಜೀವನ್ ರಾಂ ಪುಣ್ಯಸ್ಮರಣೆ ಆಚರಿಸಲಾಯಿತು.

ಕುಶಾಲನಗರ,ಜು.6–ಹಸಿರು ಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನ್ ರಾಂ ರವರ ಪುಣ್ಯಸ್ಮರಣೆ ದಿವಸವನ್ನು ಭಾನುವಾರ ಆಚರಣೆ ಮಾಡಲಾಯಿತು.

ತಾಲೂಕು ಆಡಳಿತದ ವತಿಯಿಂದ ಸಮಾಜ ಕಲ್ಯಾಣ ಇಲಾಖೆಯ ಡಾ.ಬಿ ಆರ್.ಅಂಬೇಡ್ಕರ್ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅತಿಥಿಗಳು ಜಗಜೀವನ್ ರಾಂ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಗೌರವ ಸೂಚಿಸಿದರು.

ತಾಪಂ ಸಹಾಯಕ ನಿರ್ದೇಶಕ ಶ್ರೀನಿವಾಸ್, ಪುರಸಭೆ ಆರೋಗ್ಯ ನಿರೀಕ್ಷ ಉದಯ ಕುಮಾರ್, ಆರೋಗ್ಯ ಇಲಾಖೆಯ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ವಿಶ್ವಜ್ಞಾನಿ ಅಂಬೇಡ್ಕರ್ ಸಂಘದ ಎಚ್.ಜೆ. ಲೋಕೇಶ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಸಿದ್ದೇಗೌಡ, ಸಮಾಜ ಕಲ್ಯಾಣ ಇಲಾಖೆ ಮೇಲ್ವಿಚಾರಕ ಎಚ್.ಎಸ್. ಮಧು, ಎಚ್.ಎಲ್.ರವಿ, ಬಿ.ಸಿ.ಪ್ರಕಾಶ್, ಕೆ.ಕೆ. ಸೌಮ್ಯ, ಮಹಾನಂದ, ಮುಖಂಡ ಚಿರಂಜೀವಿ, ಆಶಾ ಕಾರ್ಯಕರ್ತೆ ಮೀನಾಕ್ಷಿ ಪಾಲ್ಗೊಂಡಿದ್ದರು.

ವ್ಯಾಪಾರಿಗಳ ಸೋಗಿನಲ್ಲಿ ಅಸ್ಸಾಂ ಅಪರಿಚಿತರು:ಆತಂಕ

ಮಡಿಕೇರಿ: ಅಸ್ಸಾಂ ಜನರೆಂದು ಹೇಳಿಕೊಂಡು ಅಪರಿಚಿತರು ಸಂತೆಗಳಲ್ಲಿ ವ್ಯಾಪಾರ ಮಾಡುತ್ತಿದ್ದು, ಈ ಬಗ್ಗೆ ಗ್ರಾಪಂ ಹಾಗೂ ಪೊಲೀಸ್ ಇಲಾಖೆ ಎಚ್ಚೆತ್ತುಕೊಳ್ಳಬೇಕು ಎಂದು ವಿರಾಜಪೇಟೆ ಬಿಜೆಪಿ ಮಂಡಲದ ವಕ್ತಾರ ಚೆಪ್ಪುಡಿರ ರಾಕೇಶ್ ದೇವಯ್ಯ ಒತ್ತಾಯಿಸಿದ್ದಾರೆ.

ಆರಂಭದಲ್ಲಿ ಕಾರ್ಮಿಕರ ಹೆಸರಿನಲ್ಲಿ ಜಿಲ್ಲೆಯನ್ನು ಪ್ರವೇಶಿಸಿದ ಇವರು ಇಂದು ವ್ಯಾಪಾರಿಗಳಾಗಿ ಪರಿವರ್ತನೆಯಾಗುತ್ತಿದ್ದಾರೆ. ಮನೆಗೆ ಅಗತ್ಯವಿರುವ ಸಾಮಾಗ್ರಿಗಳನ್ನು ಸಂತೆಗಳಲ್ಲಿ ಮಾರಾಟ ಮಾಡುತ್ತಿರುವ ಅಪರಿಚಿತರ ಸಂಖ್ಯೆ ಹೆಚ್ಚುತ್ತಲೇ ಇದೆ. ಇದು ಕೊಡಗಿನ ವ್ಯಾಪಾರ ಕ್ಷೇತ್ರದಲ್ಲಿ ಆತಂಕವನ್ನು ಮೂಡಿಸಿದ್ದು, ಗ್ರಾಹಕರು ಕೂಡ ಎಚ್ಚೆತ್ತುಕೊಳ್ಳಬೇಕಾಗಿದೆ ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕಾರ್ಮಿಕರಾಗಿ ಬಂದವರು ವ್ಯಾಪಾರಿಗಳಾಗಿ ಪರಿವರ್ತನೆಯಾದ ಹಿಂದಿನ ಮರ್ಮವೇನು ಮತ್ತು ಇವರಿಗೆ ಹಣ ಹಾಗೂ ಸಾಮಾಗ್ರಿಗಳನ್ನು ನೀಡುತ್ತಿರುವವರು ಯಾರು ಎನ್ನುವ ವಿಚಾರ ಬಹಿರಂಗಗೊಳ್ಳಬೇಕಾಗಿದೆ. ಗ್ರಾಪಂ, ಪೊಲೀಸ್ ಹಾಗೂ ಆಹಾರ ಇಲಾಖೆ ಈ ಬಗ್ಗೆ ಹೆಚ್ಚು ನಿಗಾ ವಹಿಸುವ ಅಗತ್ಯವಿದೆ. ಸ್ಥಳೀಯರೇ ಬಂಡವಾಳ ಹಾಕಿ ಅಸ್ಸಾಂ ಅಪರಿಚಿತರನ್ನು ಮಾರಾಟಗಾರರನ್ನಾಗಿ ನಿಯೋಜಿಸಿಕೊಂಡಿದ್ದರೆ ತಮ್ಮ ನಿರ್ಧಾರವನ್ನು ಬದಲಾಯಿಸಿ ಕೊಳ್ಳುವುದು ಸೂಕ್ತ. ತಪ್ಪಿದಲ್ಲಿ ಮುಂದಿನ ದಿನಗಳಲ್ಲಿ ವ್ಯಾಪಾರಿಗಳ ಸೋಗಿನ ಅಪರಿಚಿತರಿಂದ ಅಪಾಯ ಎದುರಾಗಬಹುದು ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ಪರವಾನಗಿ ನೀಡುವ ಸಂದರ್ಭ ವ್ಯಾಪಾರ ಮಾಡುವವರ ಆಧಾರ್ ಕಾರ್ಡ್, ವಾಸ ದೃಢೀಕರಣ ಪತ್ರ, ಸ್ವಂತ ಊರಿನ ಮೂಲದ ಕುರಿತು ದಾಖಲೆ ಸೇರಿದಂತೆ ಸಂಪೂರ್ಣ ಮಾಹಿತಿಯನ್ನೊಳ ಗೊಂಡ ದಾಖಲೆಗಳ ಪ್ರತಿಯನ್ನು ಗ್ರಾಪಂಗಳು ಪಡೆದುಕೊಳ್ಳಬೇಕಾಗುತ್ತದೆ. ಯಾವುದೇ ದಾಖಲೆಗಳ ಆಧಾರವಿಲ್ಲದೆ ಗ್ರಾಮಗಳಿಗೆ ಬಂದ ಅಪರಿಚಿತರಿಗೆಲ್ಲ ಸಂತೆಯಲ್ಲಿ ವ್ಯಾಪಾರ ಮಾಡಲು ಅವಕಾಶ ನೀಡಿದರೆ ಮುಂದೊಂದು ದಿನ ಜಿಲ್ಲೆಗೆ ತಿರುಗುಬಾಣವಾಗುವ ಸಾಧ್ಯತೆಗಳಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಜು.19, ಹಿರಿಯ ನಾಗರಿಕರ ವೇದಿಕೆ ವಾರ್ಷಿಕ ಮಹಾಸಭೆ

ವಿರಾಜಪೇಟೆ: ತಾಲೂಕು ಹಿರಿಯ ನಾಗರಿಕರ ವೇದಿಕೆ ಮಹಾಸಭೆಯು ಜು.19ರಂದು ಪಟ್ಟಣದಲ್ಲಿರುವ ಮಹಿಳಾ ಸಮಾಜದ ಸಭಾಂಗಣದಲ್ಲಿ ಬೆಳಿಗ್ಗೆ 10.30ಕ್ಕೆ ನಡೆಯಲಿದೆ.

ಹಿರಿಯ ನಾಗರಿಕರ ವೇದಿಕೆಯ ಅಧ್ಯಕ್ಷ ಮುಲ್ಲೇಂಗಡ ಶಂಕರಿ ಪೊನ್ನಪ್ಪ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾ ಅಂಗವಿಕಲ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಅಧಿಕಾರಿ ವಿಮಲಮ್ಮ, ಅಧಿಕಾರಿಗಳು ಭಾಗವಹಿಸಲಿದ್ದಾರೆ. ದ್ವಿತೀಯ ಪಿ.ಯು.ಸಿ ವಿಜ್ಞಾನ ವಿಭಾಗದಲ್ಲಿ ಶೇ.97.16 ಅಂಕಪಡೆದ ಮುಲ್ಲೇಂಗಡ ಮಮ್ತಾ ದೇಚಮ್ಮ ಹಾಗೂ ಪೊನ್ನಂಪೇಟೆ ತಹಶೀಲ್ದಾರ್ ಮೋಹನ್ ಕುಮಾರ್, ವಿರಾಜಪೇಟೆ ತಾಲೂಕು ಭೂ ದಾಖಲೆಗಳ ಎಡಿ ಬಾನಂಗಡ ಅರುಣ್‌ರನ್ನು ಸನ್ಮಾನಿಸಲಾಗುವುದು ಎಂದು ಕಾರ್ಯದರ್ಶಿ ಪಾರುವಂಗಡ ಸಿ.ಪೊಣ್ಣಪ್ಪ(ಸನ್ನಿ) ತಿಳಿಸಿದ್ದಾರೆ.

ಪಾನಮತ್ತನಾಗಿ ಶಾಲಾ ಬಸ್‌ಗೆ ಡಿಕ್ಕಿ ಹೊಡೆದಿದ್ದ ಜೀಪ್ ಚಾಲಕನ ಬಂಧನ


ಮಡಿಕೇರಿ: ಪಾನಮತ್ತನಾಗಿ ಪಿಕ್ ಅಪ್ ಜೀಪು ಚಲಾಯಿಸಿ ಶಾಲಾ ಬಸ್‌ನ ಹಿಂಬದಿಗೆ ಡಿಕ್ಕಿ ಹೊಡೆದಿದ್ದ ಚಾಲಕನನ್ನು ಕುಶಾಲನಗರ ಗ್ರಾಮಾಂತರ ಠಾಣಾ ಪೊಲೀಸರು ಬಂಧಿಸಿದ್ದಾರೆ.



ಕುಶಾಲನಗರದ ಗೊಂದಿಬಸವನಹಳ್ಳಿ ನಿವಾಸಿ ತೀರ್ಥ ಪ್ರಸಾದ್(51) ಎಂಬಾತನೇ ಬಂಧಿತ ಆರೋಪಿಯಾಗಿದ್ದಾನೆ. ಗುಡ್ಡೆಹೊಸೂರು–ಸಿದ್ದಾಪುರ ರಸ್ತೆಯ ತೆಪ್ಪದ ಕಂಡಿ ಸೇತುವೆ ಬಳಿ ತೀರ್ಥ ಪ್ರಸಾದ್ ಚಲಾಯಿಸುತ್ತಿದ್ದ ಪಿಕ್ ಅಪ್ ಜೀಪು ಖಾಸಗಿ ಶಾಲಾ ಬಸ್‌ನ ಹಿಂಬದಿಗೆ ಡಿಕ್ಕಿ ಹೊಡೆದಿದ್ದು, ಬಸ್ ಹಾಗೂ ಜೀಪು ಜಖಂಗೊಂಡಿತ್ತು.

ಕುಶಾಲನಗರ ಗ್ರಾಮಾಂತರ ಠಾಣಾ ಪೊಲೀಸರು ದೂರು ದಾಖಲಿಸಿಕೊಂಡು ವಿಚಾರಣೆ ನಡೆಸಿ ಮದ್ಯ ಸೇವಿಸಿ ಅತಿ ವೇಗ ಮತ್ತು ಅಜಾಗರೂಕತೆ ಚಾಲನೆ ಮಾಡಿದ ಆರೋಪದಲ್ಲಿ ಜೀಪು ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ.

ಪ್ರೌಢಶಾಲೆಯಲ್ಲಿ ಲ್ಯಾಪ್‌ಟಾಪ್, ಇನ್ವೆರ್ಟರ್ ಕಳವು


ಪ್ರೌಢಶಾಲೆಯಲ್ಲಿ ನಡೆದಿರುವ ಕಳ್ಳತನ ಸಂಬಂಧ ಪೊಲೀಸರು ಪರಿಶೀಲನೆ ನಡೆಸಿದರು

ಮಡಿಕೇರಿ: ಪ್ರೌಢಶಾಲೆಗೆ ಕನ್ನ ಹಾಕಿ ಲ್ಯಾಪ್‌ಟಾಪ್, ಯುಪಿಎಸ್ ಇನ್ವೆರ್ಟರ್ ಹಾಗೂ ಗಂಟೆ ಕದ್ದೊಯ್ದಿರುವ ಘಟನೆ ನಡೆದಿದೆ. ಪ್ರೌಢಶಾಲೆಯ ಮೂರು ಕೊಠಡಿಯ ಬೀಗ ಒಡೆದು ಒಳ ನುಗ್ಗಿರುವ ಕಳವು ಮಾಡಿದ್ದಾರೆ. ಕಳೆದ ಕೆಲವು ದಿನಗಳ ಹಿಂದೆ ವಿದ್ಯಾರ್ಥಿಗಳ ಕೊರತೆಯಿಂದ ಸರ್ಕಾರದ ಆದೇಶದ ಪ್ರಕಾರ ಮುಚ್ಚಲ್ಪಟ್ಟಿದ್ದ ಚೆಯ್ಯಂಡಾಣೆಯ ನರಿಯಂದಡ ಕೇಂದ್ರ ಪ್ರೌಢಶಾಲೆಯಲ್ಲಿ ಈ ಕಳ್ಳತನ ನಡೆದಿದೆ.

ನಾಪೋಕ್ಲು ಠಾಣಾಧಿಕಾರಿ ರಾಘವೇಂದ್ರ, ಬೆರಳಚ್ಚು ತಜ್ಞ ರಾಮಕೃಷ್ಣ, ಅಪರಾಧ ಸ್ಥಳ ಪರಿಶೀಲನಾಧಿಕಾರಿ ರಾಜು, ಎಎಸ್ಐ ಫ್ರಾನ್ಸಿಸ್, ಪೊಲೀಸ್ ಸಿಬ್ಬಂದಿಗಳಾದ ಪ್ರಕಾಶ್ ಹಾಗೂ ವಿಜಯ್ ಕುಮಾರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ನಾಪೋಕ್ಲು ಠಾಣೆ ಪೊಲೀಸರು ಮೊಕದ್ದಮೆ ಪ್ರಕರಣ ದಾಖಲು ಮಾಡಿಕೊಂಡು ಕ್ರಮ ಕೈಗೊಂಡಿದ್ದಾರೆ.

ಜು.9 ರಂದು ಉದ್ಯೋಗ ಮೇಳ

ಮಡಿಕೇರಿ: ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಜು.9ರ ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಮಿನಿ 'ಉದ್ಯೋಗಮೇಳ' ನಡೆಯಲಿದೆ. ಸ್ವ–ವಿವರಗಳ ಪ್ರತಿಗಳೊಂದಿಗೆ ಉದ್ಯೋಗ ಮೇಳಕ್ಕೆ ಹಾಜರಾಗುವಂತೆ ಜಿಲ್ಲಾ ಉದ್ಯೋಗಾಧಿಕಾರಿ ಸಿ.ಬಿ.ಮಂಜುನಾಥ ತಿಳಿಸಿದ್ದಾರೆ.

ಹೃದಯಾಘಾತದಿಂದ ಉಪನ್ಯಾಸಕ ಸಾವು

ಚಾಮರಾಜನಗರ, ಜು.6– ತಾಲೂಕಿನ ತಾಳವಾಡಿಯ ಐಟಿಐ ಕಾಲೇಜಿನ ಉಪನ್ಯಾಸಕ ಶಿವಕುಮಾರ್ (52) ಹೃದಯಾಘಾತದಿಂದ ಇಂದು ಸಾವನ್ನಪ್ಪಿದ್ದಾರೆ.



ನಗರದ ರಾಮಸಮುದ್ರ ಹೌಸಿಂಗ್ ಬೋರ್ಡ್‌ನಲ್ಲಿ ವಾಸವಾಗಿದ್ದ ಶಿವಕುಮಾರ್ ಬೆಳಗ್ಗೆ ಎದೆನೋವು ಎಂದು ಮನೆಯವರಿಗೆ ತಿಳಿಸಿದ್ದಾರೆ. ಕೂಡಲೇ ಅವರನ್ನು ನಗರದ ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋದರಾದರೂ ಮಾರ್ಗ ಮಧ್ಯದಲ್ಲಿಯೇ ಮೃತಪಟ್ಟಿದ್ದರು.

ಮೂಲತಃ ತಾಳವಾಡಿಯ ಗುಮ್ಮಟಪುರ ಗ್ರಾಮದ ಭಜನೆ ಹಾರ್ಮೋನಿಯಂ ಮಾಸ್ಟರ್ ದಿವಂಗತ ಶಿವಮಲ್ಲಪ್ಪ ಪುತ್ರರಾದ ಶಿವಕುಮಾರ್ ತಾಳವಾಡಿಯ ಐಟಿಐ ಕಾಲೇಜಿನಲ್ಲಿ ಉಪ ನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಮೃತರಿಗೆ ಪತ್ನಿ, ಓರ್ವ ಪುತ್ರ, ಪುತ್ರಿ ಇದ್ದಾರೆ. ಸ್ವಗ್ರಾಮ ಗುಮ್ಮಟಪುರದಲ್ಲಿ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬಸ್ಥರು ತಿಳಿಸಿದರು.

ಆಹಾರಕ್ಷೇತ್ರ ಸ್ವಾವಲಂಬನೆಗೆ ಬಾಬೂಜೀ ಕೊಡುಗೆ ಅಪಾರ : ಎಚ್.ವಿ.ಚಂದ್ರು

ಚಾಮರಾಜನಗರ, ಜು.6 – ಕೃಷಿಯಲ್ಲಿ ಹೊಸ ಹೊಸ ತಳಿಗಳನ್ನು ಸಂಶೋಧಿಸಿ ಆಹಾರ ಕ್ಷೇತ್ರದಲ್ಲಿ ಭಾರತ ಸ್ವಾವಲಂಬನೆ ಸಾಧಿಸಲು ಜಗಜೀವನ್‌ರಾಂ ಕೊಡುಗೆ ಅಪಾರ ಎಂದು ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಎಚ್.ವಿ. ಚಂದ್ರು ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಲಾಗಿದ್ದ ಜಗಜೀವನ್ ರಾಂ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಶೋಷಿತ ಸಮುದಾಯದಲ್ಲಿ ಜನಿಸಿ ಸಾಕಷ್ಟು ನೋವು, ಅಪಮಾನಗಳನ್ನು ಎದುರಿಸಿ ಶಿಕ್ಷಣವೇ ಶಕ್ತಿ ಎಂದು ನಂಬಿದ್ದ ಡಾ. ಬಾಬು ಜಗಜೀವನ್ ರಾಂ ಅವರು ತಳ ಸಮುದಾಯದವರು ಸಹ ಉಪಪ್ರಧಾನಿಯಂತಹ ದೇಶದ ಅತ್ಯುನ್ನತ ಹುದ್ದೆಗೇರಬಹುದು ಎಂಬುದನ್ನು ಸಾಧಿಸಿ ತೋರಿಸಿಕೊಟ್ಟರು ಎಂದರು.


ಬಾಬು ಜಗಜೀವನ್ ರಾಂ ಭಾವಚಿತ್ರಕ್ಕೆ ಗಣ್ಯರಿಂದ ಪುಷ್ಪಾರ್ಚನೆ.

ಭಾರತದಲ್ಲಿ ಆಹಾರಕ್ಕೆ ಹಾಹಾಕಾರ ಉಂಟಾಗಿದ್ದ ಸಂದರ್ಭದಲ್ಲಿ ಆಹಾರ ಖಾತೆಯನ್ನು ವಹಿಸಿಕೊಂಡ ಬಾಬೂಜೀಯವರು ವೈಜ್ಞಾನಿಕ ಕೃಷಿಗೆ ಒತ್ತು ನೀಡುವ ಮೂಲಕ ಹೊಸಹೊಸ ತಳಿಗಳ ಅವಿಷ್ಕಾರಕ್ಕೆ ನಾಂದಿ ಹಾಡಿದರು. ರಕ್ಷಣಾ ಮಂತ್ರಿಯಾಗಿದ್ದ ಸಮಯದಲ್ಲಿ ಪಾಕಿಸ್ತಾನ ವಿರುದ್ಧದ ಯುದ್ಧದಲ್ಲಿ ಭಾರತ ಸೈನ್ಯವನ್ನು ಯಶಸ್ವಿಯಾಗಿ ಮುನ್ನೆಡೆಸಿದ ಕೀರ್ತಿ ಬಾಬೂಜಿಯವರಿಗೆ ಸಲ್ಲುತ್ತದೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತ ದೇಶ ಕಂಡ ಧೀಮಂತ ನಾಯಕ ಬಾಬು ಜಗಜೀವನ್ ರಾಂ ಅವರಾಗಿದ್ದಾರೆ. ದೇಶದ ಅಭಿವೃದ್ಧಿಗೆ ಬಾಬೂಜೀಯವರ ಕೊಡುಗೆ ಅಪಾರವಾಗಿದೆ. ಜನಸಾಮಾನ್ಯರಿಗೆ ಸ್ವಾಭಿಮಾನದ ಅಸ್ಮಿತೆಯನ್ನು ಗುರುತಿಸಿಕೊಳ್ಳಲು ವೇದಿಕೆ ಒದಗಿಸಿಕೊಟ್ಟ ಬಾಬೂಜೀಯವರ ಪುಣ್ಯಸ್ಮರಣೆಯನ್ನು ಇಂದು ದೇಶಾದ್ಯಂತ ಆಚರಿಸಲಾಗುತ್ತಿದೆ ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಟಿ.ಜವರೇಗೌಡ ಮಾತನಾಡಿ, ಹಸಿರು ಕ್ರಾಂತಿ ಹುಟ್ಟುಹಾಕಿ ದೇಶದ ಆಹಾರ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಕೊಡುಗೆ ನೀಡಿದರು.

ಅಂಬೇಡ್ಕರ್, ಜಗಜೀವನ್ ರಾಂ ಈ ನಾಡು ಕಂಡ ಮಹಾನ್ ನಾಯಕರು. ಅವರ ವಿಚಾರಧಾರೆಗಳು ಆದರ್ಶ ಮೌಲ್ಯಯುತ ಗುಣಗಳನ್ನು ನಾವೆಲ್ಲರೂ ಅನುಸರಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟರು. ಇದೇ ವೇಳೆ ಗಾಯಕ ಸಿ.ಎಂ.ನರಸಿಂಹಮೂರ್ತಿ 'ಮುಟ್ಟಿಸಿ ಕೊಳ್ಳದ ತಂದೆ ನೀನು ಜಂಗಮ, ಜಗದ ಜಂಗಮ' ಗೀತೆ ಹಾಡಿ ಕಾರ್ಯಕ್ರಮದಲ್ಲಿ ಗಮನ ಸೆಳೆದರು. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್.ಶಶಿಧರ್, ಸಮಾಜ ಕಲ್ಯಾಣ ಉಪನಿರ್ದೇಶಕಿ ಬಿಂದ್ಯಾ, ಜಿಲ್ಲಾ ಪಂಚಾಯತ್ ಸಹಾಯಕ ಕಾರ್ಯದರ್ಶಿ ಶ್ರೀಕಂಠರಾಜೇ ಅರಸ್, ತಾಲೂಕು ಸಮಾಜ ಕಲ್ಯಾಣಾಧಿಕಾರಿ ನಂಜುಂಡೇಗೌಡ, ಮುಖಂಡರಾದ ಬಸವನಪುರ ರಾಜಶೇಖರ್, ಚಾ.ಗು. ನಾಗರಾಜು, ಎಂ.ಶಿವಕುಮಾರ್, ಡ್ಯಾನ್ಸ್ ಬಸವರಾಜು, ಸೆಂಟ್ರಿಂಗ್ ಸಿದ್ದಪ್ಪ, ಸೋಮೇಶ್, ಮನು, ರಾಚಪ್ಪ, ಮಹೇಶ್, ಆಲೂರು ನಾಗೇಂದ್ರ, ಅಧಿಕಾರಿಗಳು, ಉಪಸ್ಥಿತರಿದ್ದರು.

ದಸರೆ ಆನೆಗಳಿಗೆ ವಿಶೇಷ ತರಬೇತಿ


ತಾಲೂಕಿನ ಬಂಡೀಪುರಕ್ಕೆ ಆಗಮಿಸಿದ್ದ ದಸರಾ ಆನೆಗಳ ಆಯ್ಕೆ ಸಮಿತಿಯು ಸಾಕಾನೆಗಳ ಸಾಮರ್ಥ್ಯ ಪರೀಕ್ಷಿಸಿದರು.

ಗುಂಡ್ಲುಪೇಟೆ: ಈ ಬಾರಿಯ ದಸರೆಗೆ ಆನೆಗಳನ್ನು ಆಯ್ಕೆ ಮಾಡುವ ತಂಡ ಇಂದು ಬಂಡೀಪುರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿತು. ಇದರ ಪ್ರಯುಕ್ತ ಇಲ್ಲಿರುವ ಸಾಕಾನೆಗಳಿಗೆ ವಿಶೇಷ ತರಬೇತಿ ನೀಡಲಾಗುತ್ತಿದೆ.

ಶಿಬಿರದಲ್ಲಿರುವ ಆನೆಗಳು ದಸರೆಗೆ ಹೋದಾಗ ವಾಹನಗಳ ಶಬ್ದ ಹಾಗೂ ಕುಶಾಲತೋಪು ಸಿಡಿಸಿದ ಸಂದರ್ಭದಲ್ಲಿ ಗೊಂದಲಕ್ಕೆ ಒಳಗಾಗದಂತೆ ಮಾಡುವ ಸಲುವಾಗಿ ವಿಶೇಷ ತರಬೇತಿ ನೀಡಲಾಗುತ್ತಿದೆ. ಅಲ್ಲದೆ ಹುಲಿ ಚಿರತೆ ಸೆರೆ ಕಾರ್ಯಾಚರಣೆ ಹಾಗೂ ಅರಣ್ಯದೊಳಗೆ ಮರಗಳನ್ನು ಸ್ಥಳಾಂತರಿಸುವ ವಿಶೇಷ ತರಬೇತಿ ನೀಡಲಾಗಿತ್ತು. ಜತೆಗೆ ಕ್ಯಾಂಪಿನಲ್ಲಿ ನೀಡುತ್ತಿದ್ದ ಫುಟ್‌ಬಾಲ್, ಒಂಟಿ ಕಾಲಿನ ಮೇಲೆ ನಿಲ್ಲುವಂತೆ ಮಾಡುವ ತಾಲೀಮು ನಡೆಸಲಾಗುತ್ತಿದೆ.

ಅರಣ್ಯ ಇಲಾಖೆಯ ಡಿಸಿಎಫ್ ಪ್ರಭುಗೌಡ ಬೀರಾದಾರ್ ನೇತೃತ್ವದ ದಸರಾ ಆನೆ ಆಯ್ಕೆ ಸಮಿತಿಯ ಅಧಿಕಾರಿಗಳು ಮತ್ತು ವೈದ್ಯರ ತಂಡ ಕಳೆದ ಬಾರಿ ದಸರೆಯಲ್ಲಿ ಪಾಲ್ಗೊಂಡಿದ್ದ ರೋಹಿತ್, ಪಾರ್ಥಸಾರಥಿ, ಹಿರಣ್ಯ ಹಾಗೂ ಲಕ್ಷ್ಮಿ ಸಾಕಾನೆಗಳ ಆರೋಗ್ಯ, ಅವುಗಳ ದೈಹಿಕ ಸಾಮರ್ಥ್ಯ ಮತ್ತು ಸ್ವಭಾವವನ್ನು ಪರೀಕ್ಷಿಸಿ ಅವು ಮಾವುತರು ನೀಡುವ ಸೂಚನೆಗಳನ್ನು ಪಾಲಿಸುವ ಬಗ್ಗೆ ಪರಿಶೀಲಿಸಿದರು.

ಎರಡು ಹಂತದಲ್ಲಿ ಪರಿಶೀಲಿಸಿ ಪಟ್ಟಿಯನ್ನು ಸರ್ಕಾರಕ್ಕೆ ಕಳಿಸಲಾಗುವುದು. ಈಗಾಗಲೇ ಮತ್ತಿಗೋಡು, ದುಬಾರೆ, ಭೀಮನಕಟ್ಟೆ, ಹಾರಂಗಿ ಮೈಸೂರು, ಕೊಡಗು ಹಾಗೂ ಚಾ.ನಗರ ಜಿಲ್ಲೆಯ ನಾನಾ ಆನೆ ಶಿಬಿರಗಳಿಗೆ ತೆರಳಿ ಆನೆಗಳ ಆರೋಗ್ಯ, ಸಾಮರ್ಥ್ಯ ಮತ್ತು ಸ್ವಭಾವವನ್ನು ಪರೀಕ್ಷಿಸಿ 30 ಆನೆಗಳ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಹೆಣ್ಣಾನೆಗಳ ಗರ್ಭಧಾರಣೆ ಪರೀಕ್ಷೆಗಾಗಿ ಸ್ಯಾಂಪಲ್‌ಗಳನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಪರೀಕ್ಷಾ ವರದಿ ಬಂದ ಬಳಿಕ ಅನೆಗಳ ಅಂತಿಮ ಪಟ್ಟಿ ಸಿದ್ದಗೊಳ್ಳಲಿದೆ. ಆಯ್ಕೆಯಾದ ಆನೆಗಳನ್ನು ಗಜ ಪಯಣದೂಲಕ ಕರೆದೊಯ್ಯಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎನ್‌ಎಸ್‌ಎಸ್ ಘಟಕದಿಂದ ಪರಿಸರ ಜಾಗೃತಿ

ಚಾಮರಾಜನಗರ: ವಿಶ್ವವಿದ್ಯಾನಿಲಯ ಸುವರ್ಣ ಗಂಗೋತ್ರಿಯ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ವತಿಯಿಂದ ತಾಲೂಕಿನ ಹೊಂಡರಬಾಳು ಗ್ರಾಮದಲ್ಲಿ ಏಳು ದಿನಗಳ ಕಾಲ ಎನ್‌ಎಸ್‌ಎಸ್ ಶಿಬಿರ ಹಮ್ಮಿಕೊಂಡಿದ್ದು, ಮೂರ್‍ನಾಲ್ಕು ದಿನಗಳಿಂದ ಎನ್.ಎಸ್.ಎಸ್ ಶಿಬಿರಾರ್ಥಿಗಳಿಂದ ಗ್ರಾಮಸ್ಥರಿಗೆ ಶಿಕ್ಷಣ, ಸ್ವಚ್ಛತೆ, ಶ್ರಮದಾನ ಹಾಗೂ ಪರಿಸರ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ.

ಹೊಂಡರಬಾಳು ಸರ್ಕಾರಿ ಶಾಲೆಯಲ್ಲಿ ಪ್ರತಿದಿನ ಬೆಳಿಗ್ಗೆ 7 ಗಂಟೆಗೆ ರಾಷ್ಟ್ರೀಯ ಸೇವಾ ಯೋಜನೆಯ ಧ್ವಜಾ ರೋಹಣ ನೆರವೇರಿಸಿ, ಬಳಿಕ ಗ್ರಾಮದ ಬೀದಿಗಳಲ್ಲಿ ಶಿಬಿರಾರ್ಥಿಗಳಿಂದ ಜಾಗೃತಿ ಜಾಥಾ ಘೋಷಣೆಗಳನ್ನು ಮೊಳಗಿಸಿ ಸಾರ್ವಜನಿಕ ಸ್ಥಳಗಳು ಸ್ವಚ್ಛತೆಯಿಂದ ಕೂಡಿರಬೇಕು. ಬಯಲು ಮಲ ವಿಸರ್ಜನೆ ತ್ಯಜಿಸಬೇಕು. ಪ್ರತಿಯೊಬ್ಬರು ಶೌಚಾಲಯ ಬಳಸಿ ಹಲವಾರು ರೋಗರುಜಿನಗಳಿಂದ ಮುಕ್ತರಾಗಬೇಕು. ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು.

ಪ್ರೊ.ನಂಜುಂಡಸ್ವಾಮಿ ಸ್ಮಾರಕ ಇರುವ ಅಮೃತ ಭೂಮಿ, ಸರ್ಕಾರಿ ಶಾಲಾ ಆವರಣ, ಗ್ರಾಮದ ಪ್ರಮುಖ ಬೀದಿಗಳು, ಸರ್ಕಾರಿ ನವೋದಯ ಶಾಲಾ ಆವರಣದ ಸುತ್ತಮುತ್ತಲಿನ ಪ್ರದೇಶ ಸೇರಿದಂತೆ ಸಾರ್ವಜನಿಕ ಸ್ಥಳಗಳನ್ನು ಎನ್‌ಎಸ್‌ಎಸ್ ಶಿಬಿರಾರ್ಥಿಗಳಿಂದ ಸ್ವಚ್ಛಗೊಳಿಸಲಾಗಿದೆ. ಸಮಾಜದ ಉತ್ತಮ ಪ್ರಜೆಯಾಗಿ ಕೊಡುಗೆ ನೀಡುವ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ ಎಂದು ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿ ಡಾ. ಆರ್.ಮಹೇಶ್ ತಿಳಿಸಿದ್ದಾರೆ.


ಹೊಂಡರಬಾಳು ಗ್ರಾಮದಲ್ಲಿ ಎನ್‌ಎಸ್‌ಎಸ್ ಶಿಬಿರಾರ್ಥಿಗಳಿಂದ ಗ್ರಾಮಸ್ಥರಿಗೆ ಪರಿಸರ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸಿದರು.

ವಿದ್ಯಾರ್ಥಿಗಳಿಗೆ ಬ್ಯಾಗ್, ನೋಟ್‌ಬುಕ್ ವಿತರಣೆ



ಚಾಮರಾಜನಗರ: ನಗರದ ಯೂತ್ ಫಾರ್ ಸೇವಾ ಮತ್ತು ಬೆಂಗಳೂರಿನ ಟೆಕ್ಸಸ್ ಇನ್ಸ್‌ಟ್ರುಮೆಂಟ್‌ನಿಂದ ಜಿಲ್ಲೆಯ 10 ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಬ್ಯಾಗ್, ನೋಟ್‌ಬುಕ್ ಮತ್ತು ಶಿಕ್ಷಕರಿಗೆ ನೀರಿನ ಬಾಟಲ್ ವಿತರಿಸಲಾಯಿತು.

ಸಂಸ್ಥೆಗಳು ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಶ್ರಮಿಸುತ್ತಿದ್ದು, ಸಂಸ್ಥೆಗಳ ಸದಸ್ಯರು ಪಣ್ಯದಹುಂಡಿ, ಶಿವಪುರ, ಉತ್ತುವಳ್ಳಿ, ಉಡಿಗಾಲ, ಕೊತ್ತಲವಾಡಿ, ದೊಡ್ಡರಾಯಪೇಟೆ, ನಾಗವಳ್ಳಿ, ಹರದನಹಳ್ಳಿ ಹಾಗೂ ಬಂಡಿಗೆರೆ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಸವಲತ್ತು ವಿತರಿಸಿದರು.

ಯೂತ್ ಫಾರ್ ಸೇವಾ ಸಂಸ್ಥೆ ಜಿಲ್ಲಾ ಸಂಯೋಜಕ ತೇಜನಾಯಕ್, ಸಮಿತಿ ಸದಸ್ಯರಾದ ಸಂತೋಷ್, ಮನೋಜ್, ವಿಜಯ್ ಕುಮಾರ್, ಚಂದ್ರಿಕಾ, ತೇಜಸ್, ಚಿದಾನಂದ್, ಅಭಿಷೇಕ್, ಮುತ್ತುರಾಜ್, ರಕ್ಷಿತ್, ವರ್ಷ, ವಿಶ್ವಾಸ್, ಭೂಮಿಕಾ, ಕೃತಿಕಾ ಸೇರಿದಂತೆ ಇತರರು ಇದ್ದರು.

ಇಂದು ಶ್ಯಾಮ್ ಪ್ರಸಾದ್ ಮುಖರ್ಜಿ ಜನ್ಮ ದಿನ

ಚಾಮರಾಜನಗರ: ನಗರದ ಮೇರಾ ಯುವ ಭಾರತ್ ಮತ್ತು ಜೈ ಭುವನೇಶ್ವರಿ ಕನ್ನಡ ಯುವ ವೇದಿಕೆ ಸಂಯುಕ್ತಾಶ್ರಯದಲ್ಲಿ ಶ್ಯಾಮ್ ಪ್ರಸಾದ್ ಮುಖರ್ಜಿ ಅವರ 124ನೇ ಜನ್ಮ ದಿನಾಚರಣೆಯನ್ನು ಜು.7ರ ಬೆಳಿಗ್ಗೆ 10.30ಕ್ಕೆ ನಗರದ ಚನ್ನೀಪುರದ ಮೋಳೆಯ ಸೇವಾ ಭಾರತಿ ಸಂಯುಕ್ತ ಪಿಯು ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದೆ.

ಎಸ್‌ಡಿವಿಎಸ್ ಶಾಲೆಯಲ್ಲಿ ಸಂಸತ್ ಚುನಾವಣೆ



ಯಳಂದೂರು: ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣಗಳನ್ನು ಬೆಳೆಸುವುದರೊಂದಿಗೆ ಪ್ರಜಾಪ್ರಭುತ್ವದ ಮೌಲ್ಯವನ್ನು ಪರಿಚಯಿಸುವ ನಿಟ್ಟಿನಲ್ಲಿ ಎಸ್‌ಡಿವಿಎಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಶಾಲಾ ಸಂಸತ್ ಚುನಾವಣೆಯನ್ನು ಹಮ್ಮಿಕೊಳ್ಳಲಾಗಿತ್ತು

ಸಂಸತ್ ಚುನಾವಣೆಯ ಅಂಗವಾಗಿ ವಿದ್ಯಾರ್ಥಿಗಳು ಆಧಾರ್ ಕಾರ್ಡ್ ಹಾಗೂ ಶಾಲಾ ಗುರುತಿನ ಚೀಟಿಯನ್ನು ಹಿಡಿದುಕೊಂಡು ಸರತಿ ಸಾಲಿನಲ್ಲಿ ನಿಂತು ವಿದ್ಯಾರ್ಥಿ ನಾಯಕನನ್ನು ಆಯ್ಕೆ ಮಾಡುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡರು. ಚುನಾವಣೆಯು ಕೇಂದ್ರ ಹಾಗೂ ರಾಜ್ಯಗಳಿಗೆ ನಡೆಯುವ ಚುನಾವಣೆ ಮಾದರಿಯಲ್ಲೇ ಎಲೆಕ್ಟ್ರಾನಿಕ್ ಮತಯಂತ್ರದ ಮೂಲಕ ಗೌಪ್ಯ ಮತದಾನ ಚಲಾವಣೆ ಮಾಡಿದರು. ಮುಖ್ಯ ಶಿಕ್ಷಕ ವೀರಭದ್ರ ಸ್ವಾಮಿ, ರಘು, ಶಿಕ್ಷಕರಾದ ಗುಂಬಳ್ಳಿ ಬಸವರಾಜು, ಚುನಾವಣಾ ಅಧಿಕಾರಿಗಳಾಗಿ ಶಿವಮೂರ್ತಿ, ಮಂಜುನಾಥ್, ರೂಪ , ರಾಜಶೇಖರ್, ಮಣಿ, ಕವಿತಾ, ಅಮೃತ, ನೀಲಂಬರಿ ಕಾರ್ಯನಿರ್ವಹಿಸಿದರು.

ಸಾಕಮ್ಮ ನಿಧನ

ಚಾಮರಾಜನಗರ, ಜು.6–ತಾಲೂಕಿನ ಕಿಲಗೆರೆ ಗ್ರಾಮದ ಮರಿಶೆಟ್ಟಿ ಅವರ ಪತ್ನಿ ಸಾಕಮ್ಮ(78) ಶನಿವಾರ ನಿಧನರಾದರು. ಮೃತರಿಗೆ ಪತಿ, ಪುತ್ರಿ, ಇಬ್ಬರು ಪುತ್ರರು ಇದ್ದಾರೆ.



ಇವರ ಅಂತ್ಯಕ್ರಿಯೆಯು ಕಿಲಗೆರೆ ಗ್ರಾಮದಲ್ಲಿ ಭಾನುವಾರ ನೆರವೇರಿತು.

ಮೈಸೂರು ಮಿತ್ರ

ಸೋಮವಾರ 7 ಜುಲೈ 2025

2ನೇ ಟೆಸ್ಟ್: ಆಂಗ್ಲರ ವಿರುದ್ಧ ಭಾರತಕ್ಕೆ ಭರ್ಜರಿ ಜಯ

ಬರ್ಮಿಂಗ್‌ಹ್ಯಾಮ್, ಜು.6– ಆಕಾಶ್ ದೀಪ್ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಭಾರತ ದ್ವಿತೀಯ ಟೆಸ್ಟ್ ಪಂದ್ಯದಲ್ಲಿ ಅತಿಥೇಯ ಇಂಗ್ಲೆಂಡ್ ವಿರುದ್ಧ 336 ರನ್‌ಗಳ ಬೃಹತ್ ಜಯ ದಾಖಲಿಸಿದೆ.

ಇದರೊಂದಿಗೆ ವಿದೇಶಿ ನೆಲದಲ್ಲಿ ಅತಿದೊಡ್ಡ ಜಯ ದಾಖಲಿಸಿದ ಭಾರತ, ಎಜ್‌ಬಾಸ್ಟನ್‌ನಲ್ಲಿ 58 ವರ್ಷಗಳ ತರುವಾಯ ಮೊದಲ ಐತಿಹಾಸಿಕ ಜಯ ಗಳಿಸಿ ವಿಜಯೋತ್ಸವ ಆಚರಿಸಿತು. ಜೊತೆಗೆ ಐದು ಪಂದ್ಯಗಳ ಸರಣಿಯನ್ನು ಸದ್ಯ 1 – 1 ರಲ್ಲಿ ಸಮಬಲಗೊಳಿಸಿತು.

ಎಜ್‌ಬಾಸ್ಟನ್‌ನಲ್ಲಿ ನಡೆದ ಪಂದ್ಯದ ಐದನೇ ಹಾಗೂ ಅಂತಿಮ ದಿನವಾದ ಭಾನುವಾರ 3 ವಿಕೆಟ್‌ಗೆ 72 ರನ್‌ಗಳಿಂದ ದಿನದಾಟ ಆರಂಭಿಸಿದ ಇಂಗ್ಲೆಂಡ್, ಮಳೆಯ ಅಡಚಣೆಯ ನಡುವೆಯೂ 68.1 ಓವರ್‌ಗಳಲ್ಲಿ 271 ರನ್‌ಗಳಿಗೆ ಗಂಟುಮೂಟೆ ಕಟ್ಟಿತು.



ಪಂದ್ಯದ ನಾಲ್ಕನೇ ದಿನ ಭಾರತ ಒಡ್ಡಿದ 608 ರನ್‌ಗಳ ಅಸಾಧಾರಣ ಗುರಿ ಬೆನ್ನಟ್ಟಿದ ಆತಿಥೇಯ ತಂಡ, ಬಾಜ್‌ಬಾಲ್ ಶೈಲಿಯ ಆಕ್ರಮಣಕಾರಿ ಆಟಕ್ಕೆ ಮುಂದಾಗಿ ಆಕಾಶ್ ದೀಪ್ ದಾಳಿಗೆ ತತ್ತರಿಸಿ, ಆರಂಭಿಕ ಆಘಾತ ಕಂಡಿತು. ಹೀಗಾಗಿ ಪಂದ್ಯದ ಕೊನೆಯ ದಿನ ಪಂದ್ಯವನ್ನು ಡ್ರಾ ಮಾಡಿಕೊಳ್ಳಲು ಇನ್ನಿಲ್ಲದ ಪ್ರಯತ್ನ ನಡೆಸಿತು. ಇದರ ನಡುವೆಯೂ ಶಿಸ್ತಿನ ಬೌಲಿಂಗ್ ಪ್ರದರ್ಶಿಸಿದ ಆಕಾಶ್ ದೀಪ್(99ಕ್ಕೆ 6) ಪ್ರವಾಸಿ ತಂಡದ ಗೆಲುವಿನ ರೂವಾರಿಗಳಲ್ಲಿ ಒಬ್ಬರಾಗಿ ಹೊರ ಹೊಮ್ಮಿದರು. ತಲಾ ಒಂದು ವಿಕೆಟ್ ಉರುಳಿಸಿದ ಸಿರಾಜ್, ವಾಷಿಂಗ್ಟನ್, ಪ್ರಸಿದ್ಧ್ ಮತ್ತು ಜಡೇಜಾ ಗೆಲುವಿಗೆ ತಮ್ಮ ಕೊಡುಗೆ ನೀಡಿದರು. ಇಂಗ್ಲೆಂಡ್ ಪರ ಓಲಿ ಪೋಪ್ 24, ಬೆನ್ ಡಕೆಟ್ 25, ಜೇಮಿ ಸ್ಮಿತ್ 88, ಹ್ಯಾರಿ ಬ್ರೂಕ್ 23, ಬೆನ್ ಸ್ಟೋಕ್ಸ್ 33, ಬ್ರೈಡನ್ ಕಾರ್ಸ್ 38 ರನ್ ಗಳಿಸಿದರು. ನಾಯಕ ಶುಭ್‌ಮನ್ ಗಿಲ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಸಂಕ್ಷಿಪ್ತ ಸ್ಕೋರ್

ಭಾರತ: 587 ರನ್ ಮತ್ತು 2ನೇ ಇನ್ನಿಂಗ್ಸ್ 427 ಕ್ಕೆ 6 ಡಿಕ್ಲೇರ್ಡ್.
ಇಂಗ್ಲೆಂಡ್: 407 ರನ್ ಮತ್ತು 2 ನೇ ಇನ್ನಿಂಗ್ಸ್ 153 ರನ್

58 ವರ್ಷಗಳ ನಂತರ ಎಜ್‌ಬಾಸ್ಟನ್‌ನಲ್ಲಿ ಜಯ: ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಅಮೋಘ ಪ್ರದರ್ಶನ ನೀಡಿದ ಭಾರತ, ಎಜ್‌ಬಾಸ್ಟನ್‌ನಲ್ಲಿ ಇಂಗ್ಲೆಂಡ್ ವಿರುದ್ಧ ನಡೆದ 2ನೇ ಟೆಸ್ಟ್‌ನಲ್ಲಿ 336 ರನ್‌ಗಳ ಬೃಹತ್ ಜಯ ದಾಖಲಿಸಿತು. ಇದರೊಂದಿಗೆ 58 ವರ್ಷಗಳ ನಂತರ ಬರ್ಮಿಂಗ್‌ಹ್ಯಾಮ್‌ನ ಎಜ್‌ಬಾಸ್ಟನ್‌ನಲ್ಲಿ ಮೊದಲ ಜಯ ಸಾಧಿಸಿದ ದಾಖಲೆ ಬರೆಯಿತು. ಈ ಪಂದ್ಯಕ್ಕೂ ಮುನ್ನ 1967ರಿಂದ ಆಡಿದ್ದ 8 ಪಂದ್ಯಗಳಲ್ಲಿ 7ರಲ್ಲಿ ಸೋತಿದ್ದ ಭಾರತ ತಂಡ 1 ರಲ್ಲಿ ಡ್ರಾ ಮಾಡಿಕೊಂಡಿತ್ತು.

ಸುನಿಲ್ ಗವಾಸ್ಕರ್ ದಾಖಲೆ ಅಳಿಸಿದ ಗಿಲ್: ಮೊದಲ ಇನಿಂಗ್ಸ್‌ನಲ್ಲಿ269 ರನ್ ಗಳಿಸಿದ್ದ ನಾಯಕ ಶುಭ್ಮನ್ ಗಿಲ್, ದ್ವಿತೀಯ ಇನಿಂಗ್ಸ್‌ನಲ್ಲಿ 161 ರನ್ ಗಳಿಸುವ ಮೂಲಕ ಒಂದೇ ಟೆಸ್ಟ್‌ನಲ್ಲಿ 430 ರನ್ ಗಳಿಸಿದರು. ಈ ಮೂಲಕ ಒಂದೇ ಟೆಸ್ಟ್‌ನಲ್ಲಿ 344 ರನ್ ಗಳಿಸಿದ್ದ ಸುನೀಲ್ ಗವಾಸ್ಕರ್ ದಾಖಲೆಯನ್ನು ಅಳಿಸಿ ಹಾಕಿದ್ದರು.

ರೈಲ್ವೇ ನಿಲ್ದಾಣದ ಪ್ಲಾಟ್‌ಫಾರ್ಮ್‌ನಲ್ಲೇ ಮಹಿಳೆಗೆ ಹೆರಿಗೆ ಮಾಡಿಸಿದ ಭಾರತೀಯ ಸೇನೆಯ ವೈದ್ಯ

ಝಾನ್ಸಿ: ರೈಲ್ವೇ ನಿಲ್ದಾಣದಲ್ಲಿ ಹೆರಿಗೆ ನೋವಿನಿಂದ ಸಾವು–ನೋವಿನ ನಡುವೆ ಬಳಲುತ್ತಿದ್ದ ಮಹಿಳೆಯೊಬ್ಬರಿಗೆ ಭಾರತೀಯ ಸೇನೆಯ ವೈದ್ಯರೊಬ್ಬರು ರೈಲ್ವೆ ಪ್ಲಾಟ್‌ಫಾರ್ಮ್‌ನಲ್ಲಿಯೇ ಸುರಕ್ಷಿತವಾಗಿ ಹೆರಿಗೆ ಮಾಡಿಸಿದ್ದಾರೆ.

ಉತ್ತರ ಪ್ರದೇಶದ ಝಾನ್ಸಿ ರೈಲು ನಿಲ್ದಾಣದಲ್ಲಿ ಈ ಘಟನೆ ನಡೆದಿದ್ದು, ಭಾರತೀಯ ಸೇನೆಯ ವೈದ್ಯ ಮೇಜರ್ ಡಾ.ರೋಹಿತ್ ಬಚ್‌ವಾಲಾ (31) ಅವರು ಮಹಿಳೆಗೆ ಹೆರಿಗೆ ಮಾಡಿಸಿ ಆಕೆಯ ಮತ್ತು ಆಕೆಯ ಮಗುವಿನ ಜೀವ ಉಳಿಸಿದ್ದಾರೆ. ಮೂಲಗಳ ಪ್ರಕಾರ ಪನವೇಲ್–ಗೋರಖಪುರ ಎಕ್ಸ್‌ಪ್ರೆಸ್ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಗರ್ಭಿಣಿಯೊಬ್ಬರಿಗೆ ಶನಿವಾರ ಮಧ್ಯಾಹ್ನ ಹೆರಿಗೆ ನೋವು ಕಾಣಿಸಿಕೊಂಡಿತ್ತು.

ಹೀಗಾಗಿ ಅವರು ಝಾನ್ಸಿ ರೈಲು ನಿಲ್ದಾಣದಲ್ಲಿ ಇಳಿದಿದ್ದರು. ಮಹಿಳೆ ನೋವಿನಿಂದ ಕಿರುಚಾಡುವುದನ್ನು ಕಂಡ ಟಿಕೆಟ್ ಚೆಕ್ಕಿಂಗ್ ಸಿಬ್ಬಂದಿ ಮತ್ತು ಸೇನಾ ವೈದ್ಯಾಧಿಕಾರಿ ಕೂಡಲೇ ಕಾರ್ಯ ಪ್ರವೃತ್ತರಾಗಿ ಮಹಿಳೆಗೆ ರೈಲು ನಿಲ್ದಾಣದ ಪ್ಲಾಟ್ ಫಾರ್ಮ್‌ನಲ್ಲಿಯೇ ಸುರಕ್ಷಿತವಾಗಿ ಹೆರಿಗೆ ಮಾಡಿಸಿದ್ದಾರೆ.



ಪಾಕೆಟ್ ಚಾಕು, ಹೇರ್ ಕ್ಲಿಪ್ ಬಳಕೆ: ಮೇಜರ್ ಡಾ.ರೋಹಿತ್ ಬಚ್‌ವಾಲಾ (31) ಅವರು ರೈಲಿಗಾಗಿ ಕಾಯುತ್ತಿದ್ದರು. ತುಂಬು ಗರ್ಭಿಣಿಯನ್ನು ಕಂಡು ಸಹಾಯ ಮಾಡಲು ಮುಂದಾದ ಅವರು ರೈಲ್ವೆ ಸಿಬ್ಬಂದಿಯ ನೆರವಿನೊಂದಿಗೆ ಹೇರ್ ಕ್ಲಿಪ್, ಪಾಕೆಟ್ ಚಾಕು ಬಳಸಿ ಹೆರಿಗೆ ಮಾಡಿಸಿದರು ಎಂದು ಸಾರ್ವಜನಿಕ ಸಂಪರ್ಕಾಧಿಕಾರಿ ಮನೋಜ್ ಕುಮಾರ್ ಸಿಂಗ್ ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಹೊಟ್ಟೆ ನೋವಿನಿಂದ ಬಳಲಿದ್ದ ಮಹಿಳೆಯನ್ನು ಕಂಡ ಕೂಡಲೇ ಸಮಯ ವ್ಯರ್ಥ ಮಾಡದೇ ಪ್ಲಾಟ್ ಫಾರ್ಮ್‌ನಲ್ಲಿಯೇ ಹೆರಿಗೆ ಮಾಡಿಸಲು ಸಿದ್ಧನಾದೆ. ವೈದ್ಯರು ತುರ್ತು ಸಂದರ್ಭಕ್ಕೆ ಸದಾ ಸಿದ್ಧರಾಗಿರಬೇಕು. ದೇವರ ದಯೆಯಿಂದ ನಾನು ಎರಡು ಜೀವಗಳನ್ನು ಉಳಿಸಿದೆ ಎಂದು ಡಾ.ರೋಹಿತ್ ತಿಳಿಸಿದರು. ಹೆರಿಗೆ ಬಳಿಕ ಮಗು ಮತ್ತು ಬಾಣಂತಿಯನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಯಿತು. ಇಬ್ಬರೂ ಆರೋಗ್ಯವಾಗಿದ್ದಾರೆ ಎಂದು ವೈದ್ಯರು ಖಚಿತಪಡಿಸಿದ್ದಾರೆ.

ವಿವೇಕಾನಂದರ ಆದರ್ಶ ಪಾಲಿಸಿದರೆ ಜೀವನದಲ್ಲಿ ಮಹತ್ತರ ಗುರಿ ಸಾಧಿಸಲು ಸಾಧ್ಯ

ವಿಧಾನಪರಿಷತ್ ಸದಸ್ಯ ಡಾ. ಡಿ.ತಿಮ್ಮಯ್ಯ ಅಭಿಮತ



ಸ್ವಾಮಿ ವಿವೇಕಾನಂದರ ಮಹಾ ನಿರ್ವಾಣ ಕಾರ್ಯಕ್ರಮ ನಡೆಯಿತು.

ಮೈಸೂರು, ಜು.6(ಎಸ್‌ಪಿಎನ್)– ಜೀವನದಲ್ಲಿ ವಿವೇಕಾನಂದರ ಆದರ್ಶಗಳನ್ನು ಪಾಲಿಸಿದರ ಫಲವಾಗಿ ಜೀವನದಲ್ಲಿ ಅನೇಕ ಮಹತ್ತರ ಗುರಿಗಳನ್ನು ಸಾಧಿಸಲು ಕಾರಣವಾಯಿತು ಎಂದು ವಿಧಾನಪರಿಷತ್ ಸದಸ್ಯ ಡಾ. ಡಿ.ತಿಮ್ಮಯ್ಯ ಹೇಳಿದರು.

ಅವರು ಜಯನಗರದ ವಿವೇಕಾನಂದ ಕೇಂದ್ರದಲ್ಲಿ ಉತ್ತಿಷ್ಠ ಭಾರತ ಪ್ರತಿಷ್ಠಾನ ಆಯೋಜಿಸಿದ್ದ ವಿವೇಕಾನಂದರ 122ನೇ ಮಹಾ ನಿರ್ವಾಣ ದಿನವನ್ನು ಉದ್ಘಾಟಿಸಿ ಮಾತನಾಡಿದರು. ವಿವೇಕಾನಂದರು ಭಾರತದ ಸಂಜಾತನಾಗಿ ಹುಟ್ಟಿದ್ದೇ ನಮ್ಮೆಲ್ಲರ ಸೌಭಾಗ್ಯ, ಅವರ ಸಂದೇಶಗಳನ್ನು ಪ್ರತಿಯೊಬ್ಬರೂ ಪರಿಪಾಲಿಸುವುದರಿಂದ ಭಾರತದ ಆಧ್ಯಾತ್ಮಿಕ ಪ್ರಗತಿ ಸಾಧ್ಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕೆ. ರಘುರಾವು ವಾಜಪೇಯಿ ಮಾತನಾಡಿ, ವಿವೇಕಾನಂದರು ಅಮೆರಿಕಾಗೆ ವಿಶ್ವಧರ್ಮ ಸಮ್ಮೇಳನಕ್ಕೆ ತೆರಳಲು ಮೈಸೂರು ಒಡೆಯರು ನೀಡಿದ ಸಹಾಯವನ್ನು ಸ್ಮರಿಸಿದರಲ್ಲದೆ, ಅವರು ತಂಗಿದ್ದ ಸ್ಥಳದಲ್ಲಿ ವಿವೇಕ ಸ್ಮಾರಕ ನಿರ್ಮಾಣಗೊಳ್ಳುತ್ತಿರುವುದು ಯುವ ಜನತೆಗೆ ಸ್ಫೂರ್ತಿಯ ಕೇಂದ್ರವಾಗಲಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಖ್ಯಾತ ಸಂಸ್ಕೃತ ವಿದುಷಿ ಡಾಕ್ಟರ್ ಕೆ ಲೀಲಾ ಪ್ರಕಾಶ್, ಸುಯೋಗ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ವಿವೇಕಾನಂದ ಕೇಂದ್ರದ ಸಂಘಟಕ ಅರವಿಂದ್, ಉತ್ತಿಷ್ಠ ಭಾರತ ಪ್ರತಿಷ್ಠಾನದ ಸಂಚಾಲಕ ಎಂ.ವಿ. ನಾಗೇಂದ್ರ ಬಾಬು, ಹರ್ಷವರ್ಧನ, ಯೋಗ ಶಿಕ್ಷಕರಾದ ಎನ್ ಪಶುಪತಿ ಹಾಗೂ ನಾಗಮಲ್ಲು ಉಪಸ್ಥಿತರಿದ್ದರು.

ಕಾರ್ಯಕ್ರಮದ ನಂತರ ಸುಯೋಗ ಆಸ್ಪತ್ರೆಯಿಂದ ಉಚಿತ ಆರೋಗ್ಯ ತಪಾಸಣೆಯನ್ನು ಏರ್ಪಡಿಸಲಾಗಿತ್ತು. ಸುಮಾರು ನೂರಕ್ಕೂ ಹೆಚ್ಚು ಮಂದಿ ಶಿಬಿರದ ಪ್ರಯೋಜನ ಪಡೆದುಕೊಂಡರು.

ನಿಶ್ಚಿತಾರ್ಥವೂ ಅಪರಾಧ: ಬಾಲ್ಯ ವಿವಾಹ ನಿಷೇಧ ಕಾಯ್ದೆಗೆ ಇನ್ನಷ್ಟು ಕಾನೂನು ಬಲ

ಬೆಂಗಳೂರು, ಜು.6– ಬಾಲ್ಯ ವಿವಾಹಗಳನ್ನು ಮಾಡಲು ಯತ್ನಿಸುವ, ಸಿದ್ಧತೆ ನಡೆಸುವ ಅಥವಾ ಚಿಕ್ಕ ವಯಸ್ಸಿನ ಬಾಲಕ– ಬಾಲಕಿ ನಡುವೆ ಮದುವೆ ಉದ್ದೇಶದಿಂದ ನಿಶ್ಚಿತಾರ್ಥ ಮಾಡುವವರ ವಿರುದ್ಧವೂ ಕ್ರಮ ತೆಗೆದುಕೊಳ್ಳುವ ಉದ್ದೇಶದಿಂದ 'ಬಾಲ್ಯ ವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಮಸೂದೆ–2025' ಅನ್ನು ಮುಂಬರುವ ವಿಧಾನ ಮಂಡಲ ಅಧಿವೇಶನದಲ್ಲಿ ಮಂಡಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಬಾಲ್ಯ ವಿವಾಹಗಳನ್ನು ಮಾಡಲು ಯತ್ನಿಸಿದರೆ, ಸಿದ್ಧತೆ ನಡೆಸಿದರೆ ಅಥವಾ ಚಿಕ್ಕ ವಯಸ್ಸಿನ ಹುಡುಗ– ಹುಡುಗಿಯರಿಗೆ ನಿಶ್ಚಿತಾರ್ಥ ಮಾಡಿದರೆ 2 ವರ್ಷಗಳವರೆಗೆ ವಿಸ್ತರಿಸಬಹುದಾದ ಕಠಿಣ ಜೈಲು ಶಿಕ್ಷೆ ಅಥವಾ 1 ಲಕ್ಷದವರೆಗೆ ವಿಸ್ತರಿಸಬಹುದಾದ ದಂಡ ಅಥವಾ ಎರಡನ್ನೂ ವಿಧಿಸುವ ಪ್ರಸ್ತಾವ ತಿದ್ದುಪಡಿ ಮಸೂದೆಯಲ್ಲಿದೆ.

ಬಾಲ್ಯ ವಿವಾಹ ಶಿಕ್ಷಾರ್ಹ ಅಪರಾಧ. ಇದಕ್ಕೆ ಕಾರಣರಾಗುವ ಪೋಷಕರು ಮತ್ತು ಸಂಸ್ಥೆಯವರಿಗೆ 2 ವರ್ಷ ಸೆರೆಮನೆ ಮತ್ತು 1 ಲಕ್ಷ ದಂಡ ವಿಧಿಸುವ ಅವಕಾಶ ಈಗಾಗಲೇ ಜಾರಿಯಲ್ಲಿರುವ 'ಬಾಲ್ಯ ವಿವಾಹ ನಿಷೇಧ ಕಾಯ್ದೆ 2006' ರಲ್ಲಿದೆ. ಈ ಕಾಯ್ದೆಯ ಪ್ರಕಾರ, ವಿವಾಹವಾಗಲು ಹುಡುಗನಿಗೆ ಕನಿಷ್ಠ 21, ಹುಡುಗಿಗೆ ಕನಿಷ್ಠ 18 ವರ್ಷ ವಯಸ್ಸಾಗಿರಬೇಕು. ಬಾಲ್ಯ ವಿವಾಹ ಪ್ರಕರಣ ವರದಿಯಾದ ಬಳಿಕ ಈ ಕಾಯ್ದೆಯಡಿ ಕ್ರಮ ತೆಗೆದುಕೊಳ್ಳಲು ಅವಕಾಶವಿದೆ.

ಆದರೆ, ಕೆಲವು ಸಮುದಾಯಗಳಲ್ಲಿ ಚಿಕ್ಕ ವಯಸ್ಸಿನ ಬಾಲಕ ಮತ್ತು ಬಾಲಕಿಯ ನಡುವೆ ವಿವಾಹ ಮಾಡುವ ಉದ್ದೇಶದಿಂದ ಒಪ್ಪಂದ ಮಾಡಿಕೊಳ್ಳುವ ಪದ್ಧತಿ ಜಾರಿಯಲ್ಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಜೊತೆ ಇತ್ತೀಚೆಗೆ ನಡೆಸಿದ ಸಭೆಯಲ್ಲಿ ಬಾಲ್ಯ ವಿವಾಹಗಳನ್ನು ತಡೆಗಟ್ಟುವ ಕುರಿತು ಚರ್ಚೆ ನಡೆಸಿದ್ದರು.

ಬಾಲ್ಯ ವಿವಾಹ ನಡೆಯುವ ಹಂತವಷ್ಟೇ ಅಲ್ಲದೆ ಅದರ ಸಿದ್ಧತೆಯ ಹಂತಗಳನ್ನೂ ತಡೆಯುವ ಗುರಿಯನ್ನು ಈ ಮಸೂದೆ ಹೊಂದಿದೆ. ಅಲ್ಲದೆ, ಚಿಕ್ಕ ಮಕ್ಕಳ ವಿವಾಹ ಸಿದ್ಧತೆ ಅಥವಾ ನಿಶ್ಚಿತಾರ್ಥದಲ್ಲಿ ತೊಡಗಿರುವವರನ್ನೂ ಶಿಕ್ಷೆಗೆ ಒಳಪಡಿಸುವ ಜೊತೆಗೆ, ಅಂತಹ ನಿಶ್ಚಿತಾರ್ಥಗಳನ್ನು ಅನೂರ್ಜಿತವೆಂದು ಘೋಷಿಸಲು ಮತ್ತು ಅಂತಹ ನಿಶ್ಚಿತಾರ್ಥಗಳಿಗೆ ನ್ಯಾಯಾಲಯಗಳು ತಡೆಯಾಜ್ಞೆ ಹೊರಡಿಸುವ ಆದೇಶ ನೀಡುವ ಅಧಿಕಾರವನ್ನು ಈ ಮಸೂದೆ ಕಲ್ಪಿಸಲಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯ ಮೂಲಗಳು ತಿಳಿಸಿವೆ.

ಕರ್ನಾಟಕದಲ್ಲಿ ನಡೆಯುತ್ತಿರುವ ಒಳಮೀಸಲಾತಿ ಸಮೀಕ್ಷೆ ಬೋಗಸ್: ಅಂಬೇಡ್ಕರ್ ಮೊಮ್ಮಗ

ಮುಂಬೈ: ಕರ್ನಾಟಕದಾದ್ಯಂತ ಒಳಮೀಸಲಾತಿಗೆ ಸಂಬಂಧಿಸಿ ನಡೆಯುತ್ತಿರುವ ಪರಿಶಿಷ್ಟ ಜಾತಿಯ ಮನೆ–ಮನೆ ಸಮೀಕ್ಷೆಯನ್ನು ಬೋಗಸ್ ಮತ್ತು ನಕಲಿ ಎಂದು ವಂಚಿತ್ ಬಹುಜನ ಅಘಾಡಿ ಸಂಸ್ಥಾಪಕ ಪ್ರಕಾಶ್ ಅಂಬೇಡ್ಕರ್ ಬಣ್ಣಿಸಿದ್ದಾರೆ.



ಪರಿಶಿಷ್ಟ ಜಾತಿಯ ಬೋಗಸ್ ಸರ್ವೆಯನ್ನು ಕರ್ನಾಟಕದಲ್ಲಿ ಕಾಂಗ್ರೆಸ್ ನಡೆಸುತ್ತಿದೆ. ನಿವಾಸಿಗಳೊಂದಿಗೆ ಮಾತನಾಡದೆ ಅಥವಾ ಯಾವುದೇ ನೈಜ ಮಾಹಿತಿಯನ್ನು ಸಂಗ್ರಹಿಸದೆ ಮನೆಗಳಿಗೆ ರಹಸ್ಯವಾಗಿ ನೋಟಿಸ್‌ಗಳನ್ನು ಅಂಟಿಸುವುದು ಯಾವ ರೀತಿಯ ಕಾನೂನುಬದ್ಧ ಸಮೀಕ್ಷೆ ಮತ್ತು ಅಂತಹ ನಕಲಿ ಸಮೀಕ್ಷೆಗಳನ್ನು ನಡೆಸುವುದರಿಂದ ಏನು ಪ್ರಯೋಜನ ಎಂದು ಅವರು ಕೇಳಿದ್ದಾರೆ.

ಪರಿಶಿಷ್ಟ ಜಾತಿಗಳ ಅನುಚಿತ ಮತ್ತು ಸುಳ್ಳು ಅಂಕಿ–ಅಂಶಗಳನ್ನು ದಾಖಲಿಸಲು ಕಾಂಗ್ರೆಸ್ ಸಂಚು ರೂಪಿಸುತ್ತಿದೆಯೇ? ಈ ಮೂಲಕ ಸರ್ಕಾರಿ ವಲಯ ಮತ್ತು ಕಲ್ಯಾಣ ಬಜೆಟ್‌ನಲ್ಲಿ ಅವರ ಪ್ರಾತಿನಿಧ್ಯವನ್ನು ಕಡಿಮೆ ಮಾಡಲು ಉದ್ದೇಶಿಸಿದೆಯೇ? ಪರಿಶಿಷ್ಟ ಜಾತಿಗಳನ್ನು ವಂಚಿಸುವ ಉದ್ದೇಶದಿಂದ ಇದನ್ನು ನಡೆಸಲಾಗುತ್ತಿದೆಯೆ ಎಂದು ಅವರು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದ್ದಾರೆ.

ಬಾಬೂಜಿ ಆದರ್ಶದೊಂದಿಗೆ ಹಿಂದುಳಿದವರಿಗಾಗಿ ಶ್ರಮಿಸಿ

ತಾಲೂಕು ಡಾ.ಬಾಬು ಜಗಜೀವನರಾಂ ಸಂಘದ ಅಧ್ಯಕ್ಷ ಅರ್ಜುನ್ ರಮೇಶ್

ತಿ.ನರಸೀಪುರ, ಜು.6– ದಲಿತರ ಅಭಿವೃದ್ಧಿಗೆ ಶ್ರಮಿಸಿದ ಡಾ.ಬಾಬು ಜಗಜೀವನರಾಂ ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳುವ ಮೂಲಕ ಸಮಾಜದಲ್ಲಿ ಹಿಂದುಳಿದವರ ಏಳಿಗೆಗೆ ಶ್ರಮಿಸಬೇಕಾದ ಅಗತ್ಯವಿದೆ ಎಂದು ಪುರಸಭೆ ಸದಸ್ಯ ಹಾಗೂ ತಾಲೂಕು ಡಾ.ಬಾಬು ಜಗಜೀವನರಾಂ ಸಂಘದ ಅಧ್ಯಕ್ಷ ಅರ್ಜುನ್ ರಮೇಶ್ ಅಭಿಪ್ರಾಯಪಟ್ಟರು.



ಬಾಬೂಜಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಮುಖಂಡರು ಗೌರವ ಸಲ್ಲಿಸಿದರು.

ಪಟ್ಟಣದ ಮಿನಿ ವಿಧಾನಸೌಧದಲ್ಲಿ ತಾಲೂಕು ಆಡಳಿತದಿಂದ ಆಯೋಜಿಸಿದ್ದ ಮಾಜಿ ಉಪಪ್ರಧಾನಿ ಡಾ.ಬಾಬು ಜಗಜೀವನರಾಂ ಅವರ 39ನೇ ಪುಣ್ಯಸ್ಮರಣೆಯಲ್ಲಿ ಮಾತನಾಡಿದ ಅವರು, ಸಮಾಜದಲ್ಲಿರುವ ಎಲ್ಲಾ ಬಡವರ ಉದ್ಧಾರವಾಗುವವರೆಗೆ ದೇಶದ ಅಭಿವೃದ್ಧಿ ಸಾಧ್ಯವಿಲ್ಲ. ದೇಶದ ರೈತರು ಆಧುನಿಕ ಬೇಸಾಯ ಪದ್ಧತಿ ಅಳವಡಿಸಿಕೊಳ್ಳುವವರೆಗೆ ದೇಶದಲ್ಲಿ ರೈತರ ಅಭಿವೃದ್ಧಿಯಾಗಲ್ಲ ಎಂದು ಹೇಳುತ್ತಿದ್ದ ಜಗಜೀವನರಾಂ ಅವರು ದೇಶದ ಕೃಷಿ ಸಚಿವರಾಗಿ ಕ್ರಾಂತಿಯನ್ನೇ ಸೃಷ್ಟಿಸಿದರು. ಇವರ ಅವಧಿಯಲ್ಲಿ ರಾಸಾಯನಿಕ ಗೊಬ್ಬರ ಪದ್ಧತಿ ಪರಿಚಯಿಸಿ, ಆಧುನಿಕ ಬೇಸಾಯ ಪದ್ಧತಿ ಅಳವಡಿಸಲಾಯಿತು. ದೇಶದಲ್ಲಿ ಆಹಾರದ ಉತ್ಪಾದನೆ ಅಧಿಕಗೊಂಡು ಕೃಷಿ ಉತ್ಪನ್ನಗಳನ್ನು ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸಿ, ವಿದೇಶಗಳಿಗೆ ರಫ್ತು ಮಾಡುವಷ್ಟು ಅಭಿವೃದ್ಧಿ ಕಂಡಿತು ಎಂದರು.

ನಾವು ಯಾವುದೇ ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಮಹಾನ್ ಪುರುಷರ ಗುಣಗಾನ ಮಾಡುತ್ತೇವೆಯೇ ಹೊರತು ಅವರು ದೇಶಕ್ಕಾಗಿ ಮಾಡಿದ ತ್ಯಾಗ, ನಮಗಾಗಿ ನಿರ್ಮಾಣ ಮಾಡಿಕೊಟ್ಟಿರುವ ಬದುಕು, ಆ ಬದುಕನ್ನು ಎಷ್ಟು ಅಚ್ಚುಕಟ್ಟಾಗಿ ನಿಭಾಯಿಸುತ್ತಿದ್ದೇವೆ ಎಂಬುದನ್ನು ಮರೆಯುತ್ತೇವೆ. ಪುಣ್ಯಸ್ಮರಣೆ ದಿನ ಅವರ ಬದುಕಿನ ಬಗ್ಗೆ ಸ್ಮರಣೆ ಮಾಡುವುದು ಮುಖ್ಯವಲ್ಲ. ಅವರ ಆದರ್ಶ ತತ್ವಗಳ ಬಗ್ಗೆ ಮುಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಬಹುಮುಖ್ಯ ಎಂದರು.

ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಮಾತನಾಡಿ, ರಾಜ್ಯ ಸರ್ಕಾರ ಡಾ.ಬಿ.ಆರ್. ಅಂಬೇಡ್ಕರ್ ಪುಣ್ಯಸ್ಮರಣೆಗೆ ಸರ್ಕಾರಿ ರಜೆ ಘೋಷಿಸಿರುವಂತೆ ಬಾಬೂಜಿ ಪುಣ್ಯಸ್ಮರಣೆಗೂ ರಜಾ ಘೋಷಣೆ ಮಾಡಬೇಕು. ಬಾಬೂಜಿ ಸ್ಮರಣೆ ಕಾರ್ಯಕ್ರಮ ಕೇವಲ ತಾಲೂಕು ಆಡಳಿತಕ್ಕೆ ಸೀಮಿತವಾಗದೇ ಪ್ರತಿ ತಾಪಂ, ಗ್ರಾಪಂ ಹಾಗೂ ಪುರಸಭೆಗಳಲ್ಲೂ ಆಚರಣೆ ಮಾಡಲು ತಹಸೀಲ್ದಾರ್ ಆದೇಶಿಸುವಂತೆ ಒತ್ತಾಯಿಸಿದ ಅವರು ತಾಲೂಕು ಕಚೇರಿಯಲ್ಲಿ ನಡೆಯುತ್ತಿರುವ ಜಯಂತಿ ಹಾಗೂ ಸ್ಮರಣೆ ಕಾರ್ಯಕ್ರಮಗಳನ್ನು ನೂತನ ಅಧ್ಯಕ್ಷರು ಮುಂದಿನ ವರ್ಷದಿಂದ ಬಾಬೂಜಿ ಭವನದಲ್ಲಿ ಮಾಡಲು ಮುಂದಾಗಬೇಕೆಂದು ಸಲಹೆ ನೀಡಿದರು.

ತಹಸೀಲ್ದಾರ್ ಟಿ.ಜೆ.ಸುರೇಶಾಚಾರ್, ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ, ಜಿಪಂ ಮಾಜಿ ಸದಸ್ಯ ಹೊನ್ನನಾಯಕ, ಬಾಬೂಜಿ ಸಂಘದ ನಿಕಟಪೂರ್ವ ಅಧ್ಯಕ್ಷ ಪುಟ್ಟಯ್ಯ, ಸಿದ್ದರಾಜು ಮಾತನಾಡಿದರು. ಬಾಬು ಜಗಜೀವನರಾಂ ಜನಕಲ್ಯಾಣ ಟ್ರಸ್ಟ್ ಅಧ್ಯಕ್ಷ ಮಲಿಯೂರು ಶಂಕರ್, ತಾಪಂ ಮಾಜಿ ಸದಸ್ಯರಾದ ರಾಮಲಿಂಗಯ್ಯ ಪ್ರಸನ್ನ, ಗ್ರಾಪಂ ಸದಸ್ಯ ವಿಜಾಪುರ ಶಿವಶಂಕರ್, ಕಿರಗಸೂರು ಗ್ರಾಪಂ ಮಾಜಿ ಅಧ್ಯಕ್ಷ ನಿಂಗರಾಜು, ಮುಖಂಡರಾದ ಗೋವಿಂದರಾಜು, ಮಾದೇಶ್, ಸಂದೀಪ್, ಸಿ.ಡಿ.ವೆಂಕಟೇಶ್, ಕೃಷ್ಣಮೂರ್ತಿ, ಪುಟ್ಟಸ್ವಾಮಿ, ಸುನೀಲ್, ಲಿಂಗರಾಜು, ಸುಂದರ್, ರಜನಿರಾಜ್, ರಾಚಯ್ಯ, ಶಿವಪ್ರಸಾದ್, ರಾಚಪ್ಪ, ಸಮಾಜ ಕಲ್ಯಾಣ ಅಧಿಕಾರಿ ವಿನೂತನ್, ಬಿಇಓ ಶಿವಸ್ವಾಮಿ, ಪುರಸಭಾ ಮುಖ್ಯಾಧಿಕಾರಿ ಬಿ.ಕೆ.ವಸಂತ ಕುಮಾರಿ, ಹಿಂದುಳಿದ ವರ್ಗಗಳ ಅಧಿಕಾರಿ ರಾಜಣ್ಣ ಸೇರಿದಂತೆ ಮತ್ತಿತರರಿದ್ದರು.

> ಬಾಬು ಜಗಜೀವನರಾಂ ಸ್ವಾತಂತ್ರ್ಯ ಹೋರಾಟಗಾರರಷ್ಟೇ ಅಲ್ಲದೇ, ಸಮಾಜ ಸೇವಕರಾಗಿದ್ದರು. ಸಚಿವರಾಗಿದ್ದರು. ಉಪ ಪ್ರಧಾನಿಯಾಗಿದ್ದರು. ಮಹಾನ್ ದಲಿತ ನಾಯಕರಾಗಿದ್ದರು. ಅಸ್ಪೃಶ್ಯತೆ, ಜಾತಿ ನಿರ್ಮೂಲನಾ ವ್ಯವಸ್ಥೆ ವಿರುದ್ಧ ಹೋರಾಡಿ, ಸಮತಾ ಭಾವನೆ ನೆಲೆಯೂರಲು ಅವಿರತ ಶ್ರಮಿಸಿದ ರಾಜಕೀಯ ಮುತ್ಸದ್ದಿಯಾಗಿದ್ದರು. ಸ್ವಾತಂತ್ರ್ಯ ಬಂದಾಗ ದೇಶದಲ್ಲಿ ಆಹಾರದ ಕೊರತೆ ಇತ್ತು. ವಿದೇಶದಿಂದ ಎರವಲು ಪಡೆಯುವ ಸ್ಥಿತಿ ಇತ್ತು. ಆಗ ಕೃಷಿ ಕ್ಷೇತ್ರದಲ್ಲಿ ಬಾಬು ಜಗಜೀವನರಾಂ ತಂದ ಕ್ರಾಂತಿಕಾರಕ ಬದಲಾವಣೆಗಳು ಆಹಾರ ಸ್ವಾವಲಂಬನೆ ಸಾಧಿಸಲು ಸಹಾಯವಾಯಿತು. – ಹುಣಸೂರು ಬಸವಣ್ಣ, ಮೈಸೂರು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ.

ಚಿರತೆ ದಾಳಿ: ಹಸುಗೆ ಗಾಯ



ಹುಣಸೂರು, ಜು.6– ಹಾಡಹಗಲೇ ಚಿರತೆ ದಾಳಿಗೆ ಹಸು ಗಾಯಗೊಂಡಿರುವ ಘಟನೆ ತಾಲೂಕಿನ ಕೂಡ್ಲೂರು ಗೇಟ್ ಬಳಿ ನಡೆದಿದೆ.

ಹೊಸಕೋಟೆ ಗ್ರಾಮದ ತಿಮ್ಮೇಗೌಡರಿಗೆ ಸೇರಿದ ಹಸು ಇದಾಗಿದ್ದು, ಜಮೀನಿನಲ್ಲಿ ಮೇಯಲು ಬಿಟ್ಟಿದ್ದ ವೇಳೆ ಚಿರತೆ ದಾಳಿ ನಡೆಸಿದೆ. ಹಸುವಿನ ಕಿರುಚಾಟಕ್ಕೆ ಸುತ್ತಮುತ್ತ ಕೃಷಿ ಚಟುವಟಿಕೆಯಲ್ಲಿ ನಿರತರಾಗಿದ್ದ ರೈತರು ಕೂಗುತ್ತಾ ಹಸುವಿನತ್ತ ಧಾವಿಸುತ್ತಿದ್ದಂತೆ ಚಿರತೆ ಪರಾರಿಯಾಗಿದೆ. ಸಂಜೆ ವೇಳೆಗೆ ಅರಣ್ಯ ಸಿಬ್ಬಂದಿ ಬಂದು ಪರಿಶೀಲಿಸಿದ್ದಾರೆ.

ಅರಣ್ಯ ಇಲಾಖೆ ನಿರ್ಲಕ್ಷ್ಯ: ಈ ಭಾಗದ ಸುತ್ತಮುತ್ತಲ ಗ್ರಾಮಗಳಲ್ಲಿ ಆಗಾಗ್ಗೆ ಚಿರತೆ ಉಪಟಳದಿಂದ ರೈತರು ಭಯ ಭೀತರಾಗಿದ್ದರೂ ಅರಣ್ಯ ಇಲಾಖೆ ಚಿರತೆ ನಿಯಂತ್ರಿಸಲು ವಿಫಲರಾಗಿದ್ದು, ಇನ್ನಾದರೂ ಬೋನಿಟ್ಟು ಚಿರತೆ ಸೆರೆ ಹಿಡಿಯುವಂತೆ ಹೊಸಕೋಟೆ ರೈತ ಸುರೇಶ್ ಹಾಗೂ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಅಂಬೇಡ್ಕರ್ ಭವನಗಳನ್ನು ಗ್ರಂಥಾಲಯಗಳನ್ನಾಗಿ ರೂಪಿಸಿ

ಶಾಸಕ ದರ್ಶನ್

ನಂಜನಗೂಡು, ಜು.6– ಡಾ.ಬಿ.ಆರ್. ಅಂಬೇಡ್ಕರ್ ಭವನಗಳನ್ನು ಗ್ರಂಥಾಲಯಗಳನ್ನಾಗಿ ರೂಪಿಸುವ ಮೂಲಕ ಶಿಕ್ಷಣ ಹಾಗೂ ಜ್ಞಾನದ ಕೇಂದ್ರಗಳನ್ನಾಗಿ ಮಾಡುವುದೇ ನಾವು ಅಂಬೇಡ್ಕರ್ ಅವರಿಗೆ ಸಲ್ಲಿಸುವ ನಿಜವಾದ ಗೌರವ ಎಂದು ಶಾಸಕ ದರ್ಶನ್ ಹೇಳಿದರು.



ಕಾರ್ಯಕ್ರಮವನ್ನು ಶಾಸಕ ದರ್ಶನ್ ಉದ್ಘಾಟಿಸಿದರು.

ತಾಲೂಕಿನ ಹುಲ್ಲಹಳ್ಳಿ ಗ್ರಾಮದಲ್ಲಿ ಭೀಮ ಬಳಗದಿಂದ ಆಯೋಜಿಸಿದ್ದ ಡಾ.ಬಿ.ಆರ್. ಅಂಬೇಡ್ಕರ್ ಅವರ 134ನೇ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಶೋಷಿತ ಸಮಾಜಗಳ ವಿಮೋಚನೆಗೆ ಶಿಕ್ಷಣ ಒಂದೇ ಪ್ರಮುಖ ಅಸ್ತ್ರ. ಆದ್ದರಿಂದಲೇ ಬಾಬಾ ಸಾಹೇಬರು ಹಾಕಿಕೊಟ್ಟ ಶಿಕ್ಷಣದ ಮಾರ್ಗದಲ್ಲಿ ನಾವೆಲ್ಲಾ ಸಾಗಬೇಕಾಗಿದೆ. ಆ ನಿಟ್ಟಿನಲ್ಲಿ ಸಮುದಾಯದ ಬಂಧುಗಳು ಕಡ್ಡಾಯವಾಗಿ ನಿಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ, ಜೊತೆಗೆ ತಾಲೂಕಿನಲ್ಲಿ ನಿರ್ಮಾಣವಾಗಿರುವ ಎಲ್ಲಾ ಅಂಬೇಡ್ಕರ್ ಭವನಗಳಲ್ಲಿ ಗ್ರಂಥಾಲಯಗಳನ್ನು ತೆರೆದು ಶಿಕ್ಷಣಕ್ಕೆ ನೆರವಾಗುವಂತೆ ಜ್ಞಾನದ ಕೇಂದ್ರಗಳನ್ನಾಗಿ ರೂಪಿಸುವುದು ಬಾಬಾ ಸಾಹೇಬರಿಗೆ ನಾವೆಲ್ಲರೂ ಸಲ್ಲಿಸುವ ನಿಜವಾದ ಗೌರವ ಎಂದರು.

ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಮಾತನಾಡಿ, ಸಂವಿಧಾನ ಒಪ್ಪಿಕೊಳ್ಳದ ಆರ್‌ಎಸ್‌ಎಸ್ ಸಂವಿಧಾನ ಪೀಠಿಕೆಯಲ್ಲಿರುವ ಜಾತ್ಯಾತೀತ ಮತ್ತು ಸಮಾಜವಾದಿ ಪದಗಳು ನಮ್ಮ ದೇಶದ ಸಂಸ್ಕೃತಿಯಲ್ಲ ಎಂದು ಪ್ರತಿಪಾದಿಸಿ ಆ ಪದಗಳನ್ನು ಸಂವಿಧಾನ ಪೀಠಿಕೆಯಿಂದ ತೆಗೆಯುವ ಮೂಲಕ ಸಂವಿಧಾನ ದುರ್ಬಲಗೊಳಿಸುವ ಹುನ್ನಾರ ನಡೆಸುತ್ತಿದೆ. ಅಲ್ಲದೇ ದಲಿತ ಮಹಿಳೆ ಅಡುಗೆ ಮಾಡುತ್ತಾರೆ ಎಂಬ ಕಾರಣಕ್ಕೆ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸದಂತಹ ವಿಕೃತ ಆಚರಣೆ ಇಂದಿಗೂ ಜೀವಂತವಾಗಿರುವ ಕಾರಣ ನಮ್ಮ ಸಂವಿಧಾನದ ರಕ್ಷಣೆ ಮತ್ತು ಬಾಬಾ ಸಾಹೇಬರ ತತ್ವ ಸಿದ್ಧಾಂತಗಳನ್ನು ಜನರಿಗೆ ತಿಳಿಸಿ ಜಾಗೃತಿ ಮೂಡಿಸುವ ಸಲುವಾಗಿ ಇಂತಹ ಜಯಂತಿಗಳು ಹೆಚ್ಚು ನಡೆಯಬೇಕಿದೆ ಎಂದರು.

ಮೈಸೂರು ನಗರಪಾಲಿಕೆ ಮಾಜಿ ಮಹಾಪೌರ ಪುರುಷೋತ್ತಮ್ ಮಾತನಾಡಿದರು. ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ನಗರಸಭಾಧ್ಯಕ್ಷ ಶ್ರೀಕಂಠಸ್ವಾಮಿ, ವಕೀಲರಾದ ಉಮೇಶ್, ಮುಖಂಡರಾದ ವಿ.ರಾಮಸ್ವಾಮಿ, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠಸ್ವಾಮಿ, ಮುಖಂಡರಾದ ರಾಜು, ಅಶೋಕ್, ನಾಗರಾಜಯ್ಯ, ಶಿವನಂಜನಾಯಕ, ಮಹೇಶ್, ಮಲ್ಲಿಕಾರ್ಜುನ್, ಅಕ್ರಮ ಸಕ್ರಮ ಸಮಿತಿ ಸದಸ್ಯ ಜಯರಾಮು, ಯೂತ್ ಕಾಂಗ್ರೆಸ್ ತಾಲೂಕು ಅಧ್ಯಕ್ಷ ವಿಜಯಕುಮಾರ್, ದಸಂಸ ಸಂಚಾಲಕ ಮಂಜು, ಗ್ರಾಪಂ ಅಧ್ಯಕ್ಷೆ ದೇವಮ್ಮ, ಉಪಾಧ್ಯಕ್ಷ ಲೋಕೇಶ್, ಲೋಕೋಪಯೋಗಿ ಇಲಾಖೆ ಎಇಇ ಬಸವರಾಜು, ಭೀಮ ಬಳಗದ ಅಧ್ಯಕ್ಷ ಚಂದ್ರು, ಉಪಾಧ್ಯಕ್ಷ ಪ್ರಸಾದ್, ಕುಮಾರ್, ಚೌಡಯ್ಯ, ಮಧುಕರ ಸೇರಿದಂತೆ ಹಲವರಿದ್ದರು.

> ನನ್ನ ತಂದೆ 10 ವರ್ಷ ಈ ಭಾಗದ ಸಂಸದರಾಗಿ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದ್ದಲ್ಲದೆ ಏಕಲವ್ಯ ಶಾಲೆ, ಕಿತ್ತೂರು ರಾಣಿ ಚೆನ್ನಮ್ಮ ಶಾಲೆ, ಮೊರಾರ್ಜಿ ದೇಸಾಯಿ, ಆದರ್ಶ ಶಾಲೆಗಳನ್ನು ತೆರೆದಿದ್ದಾರೆ. ಜೊತೆಗೆ ಚಾಮರಾಜನಗರದಲ್ಲಿ ಕಾನೂನು, ಕೃಷಿ ಮತ್ತು ವೈದ್ಯಕೀಯ ಕಾಲೇಜು ಸ್ಥಾಪಿಸಿದ್ದಾರೆ. ನಾನು ಕ್ಷೇತ್ರದ ಶಾಸಕನಾಗಿ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದ್ದೇನೆ. ಪಿಯುಸಿ ವಿದ್ಯಾರ್ಥಿನಿಯರಿಗೆ ನೆರವಾಗುವಂತೆ ಆರ್.ಧ್ರುವನಾರಾಯಣ್ ಟ್ರಸ್ಟ್ ವತಿಯಿಂದ ಸಿಇಟಿ ಮತ್ತು ಎನ್‌ಇಇಟಿ ಪರೀಕ್ಷೆಗಳಿಗೆ ಉಚಿತವಾಗಿ ತರಬೇತಿ ನೀಡಲಾಗುತ್ತಿದೆ. – ದರ್ಶನ್, ಶಾಸಕ.

ನಕಲಿ ಉಂಗುರ ಅಡವಿಟ್ಟು 5 ಲಕ್ಷ ಪಂಗನಾಮ

ಓರ್ವನ ಬಂಧನ: ಇಬ್ಬರು ಪರಾರಿ

ಹುಣಸೂರು, ಜು.6– ಗಿರವಿ ಅಂಗಡಿಯಲ್ಲಿ ಸ್ನೇಹಿತರ ಹೆಸರುಗಳಲ್ಲಿ ನಕಲಿ ಚಿನ್ನದ ಉಂಗುರಗಳನ್ನು ಅಡವಿಟ್ಟು ಪಂಗನಾಮ ಹಾಕಿ ಲಕ್ಷಾಂತರ ರೂ. ಮೋಸ ಮಾಡಿದ್ದ ಆರೋಪಿಯನ್ನು ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿ, ನ್ಯಾಯಾಂಗ ಬಂಧನಕ್ಕೊಪ್ಪಿಸಿದ್ದಾರೆ.



ಆರೋಪಿಯೊಂದಿಗೆ ಪೊಲೀಸರು.

ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲೂಕಿನ ಚಿಕ್ಕನಾಯಕನಹಳ್ಳಿಯ ಮಂಜುನಾಥ ಅಲಿಯಾಸ್ ಮಹೇಶ್ ಬಂಧಿತ ಆರೋಪಿ. ಮತ್ತಿಬ್ಬರು ಕಾರಿನೊಂದಿಗೆ ಪರಾರಿಯಾಗಿದ್ದಾರೆ.

ಈತ ತಾಲೂಕಿನ ಗಾವಡಗೆರೆ ಗ್ರಾಮದ ಕಾವೇರಿ ಜ್ಯುವೆಲ್ಲರ್ಸ್ ಚಿನ್ನ, ಬೆಳ್ಳಿ ಗಿರವಿ ಅಂಗಡಿಯಲ್ಲಿ 2023ರ ನವೆಂಬರ್ 24ರಿಂದ 2025 ಜು.5ರವರೆಗೆ ಕೆಡಿಎಂ 916 ಮಾರ್ಕ್ ಇರುವ 11 ನಕಲಿ ಉಂಗುರಗಳನ್ನು ಗಿರವಿ ಇಟ್ಟು ಸುಮಾರು 5 ಲಕ್ಷ ರೂ. ಸಾಲ ಪಡೆದಿದ್ದ.

ವಿವರ: ಮಂಜುನಾಥ ಪದೇ ಪದೇ ಸ್ನೇಹಿತರೊಂದಿಗೆ ಬಂದು ಬೇರೆ ಬೇರೆ ಹೆಸರುಗಳಲ್ಲಿ ಉಂಗುರಗಳನ್ನು ಗಿರವಿ ಇಡುತ್ತಿರುವುದರಿಂದ ಅನುಮಾನಗೊಂಡ ಅಂಗಡಿ ಮಾಲೀಕ ಜೆಸಿಂಗ್ ಉಂಗುರಗಳನ್ನು ಪರೀಕ್ಷಿಸಿದ ವೇಳೆ ನಕಲಿ ಚಿನ್ನವೆಂಬುದು ತಿಳಿದು ಹುಣಸೂರು ಗ್ರಾಮಾಂತರ ಠಾಣೆ ಪೊಲೀಸರಿಗೆ ದೂರು ನೀಡಿದ್ದರು. ಶನಿವಾರ ಆರೋಪಿ ಮಂಜುನಾಥ್ ಕಾರಿನಲ್ಲಿ ತನ್ನಿಬ್ಬರು ಸ್ನೇಹಿತರೊಂದಿಗೆ ಬಂದು ಉಂಗುರ ಗಿರವಿ ಇಡಲು ಮುಂದಾಗಿದ್ದ ವೇಳೆ ಗಿರವಿ ಅಂಗಡಿ ಮಾಲಿಕ ಜೆಸಿಂಗ್ ಅಕ್ಕಪಕ್ಕದವರಿಗೆ ಮಾಹಿತಿ ನೀಡಿ ಪೊಲೀಸರಿಗೆ ತಿಳಿಸಿದ್ದಾರೆ. ಈ ವೇಳೆ ಮಂಜುನಾಥ್ ಸಿಕ್ಕಿ ಬಿದ್ದಿದ್ದು, ಕಾರಿನಲ್ಲಿದ್ದ ಇಬ್ಬರು ಪರಾರಿಯಾಗಿದ್ದಾರೆ.

ಎಸ್‌ಪಿ ವಿಷ್ಣುವರ್ಧನ್, ಡಿವೈಎಸ್‌ಪಿ ಗೋಪಾಕೃಷ್ಣ ಅವರ ಮಾರ್ಗದರ್ಶನದಲ್ಲಿ ಇನ್ಸ್‌ಪೆಕ್ಟರ್ ಎನ್.ಮುನಿಯಪ್ಪ, ಉಪನಿರೀಕ್ಷಕರಾದ ರಾಮು, ಶ್ರೀನಿವಾಸಲು, ಎಎಸ್‌ಐ ಅಂತೋಣಿ ಕ್ರೂಸ್, ಸಿಬ್ಬಂದಿಗಳಾದ ವಿಜಯ ರಾಘು, ಇಮ್ರಾನ್ ಶರೀಫ್, ಮಹದೇವ, ರಮೇಶ, ಮಂಜುನಾಥ, ಚಾಲಕ ಸುಂದರ್‌ರಾಜು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಹೋಬಳಿಯಲ್ಲಿ ಕಂದಾಯ ಅದಾಲತ್‌ಗೆ ಮನವಿ

ತಿ.ನರಸೀಪುರ, ಜು.6– ಹೋಬಳಿ ಮಟ್ಟದಲ್ಲಿ ಕಂದಾಯ ಅದಾಲತ್ ಮಾಡುವಂತೆ ಹಾಗೂ ತಾಲೂಕಿನಲ್ಲಿ ಒತ್ತುವರಿಯಾಗಿರುವ ಸರ್ಕಾರಿ ಓಣಿ, ರಸ್ತೆ ಹಾಗೂ ಗೋಕಟ್ಟೆಗಳನ್ನು ತೆರವುಗೊಳಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಮುಖ್ಯಸ್ಥರು ತಹಸೀಲ್ದಾರ್ ಟಿ.ಜೆ.ಸುರೇಶಾಚಾರ್‌ಗೆ ಮನವಿ ಸಲ್ಲಿಸಿದರು.



ತಹಸೀಲ್ದಾರ್‌ಗೆ ಮನವಿ ಸಲ್ಲಿಸಲಾಯಿತು.

ಸಂಘದ ಜಿಲ್ಲಾ ಸಂಚಾಲಕ ಕಳ್ಳೀಪುರ ಮಹದೇವಸ್ವಾಮಿ ನೇತೃತ್ವದಲ್ಲಿ ತಾಲೂಕು ಕಚೇರಿಗೆ ಆಗಮಿಸಿದ ರೈತ ಮುಖಂಡರು ತಹಸೀಲ್ದಾರ್ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿ, ಕಂದಾಯ ಅದಾಲತ್ ಅನ್ನು ಹೋಬಳಿ ಮಟ್ಟದಲ್ಲಿ ಮಾಡುವ ಮೂಲಕ ಗ್ರಾಮಸ್ಥರು ಹಾಗೂ ಬಡವರಿಗೆ ಅನುಕೂಲ ಕಲ್ಪಿಸಬೇಕು. ತಾಲೂಕಿನಲ್ಲಿ ಸರ್ಕಾರಿ ರಸ್ತೆ ಮತ್ತು ಗೋಕಟ್ಟೆಗಳನ್ನು ತೆರವುಗೊಳಿಸುವ ಮೂಲಕ ಕೃಷಿ ಚಟುವಟಿಕೆ ಮಾಡಲು ಅವಕಾಶ ಕಲ್ಪಿಸುವಂತೆ ಮನವಿ ಮಾಡಿದರು.

ಚಾಮನಹಳ್ಳಿ ಸಿಡಿಎಸ್ ನಾಲೆಯಿಂದ ಮಲಿಯೂರು ವಡ್ಡರಕೊಪ್ಪಲು ಬನ್ನೂರಿನಿಂದ ಕೆರೆ ಏರಿ ಮೇಲೆ ಹೋಗಲಿರುವ ರಸ್ತೆಗೆ ಸ್ಕೆಚ್ ಆಗಿಲ್ಲ ಎಂದು ಸರ್ವೆ ಇಲಾಖೆಯವರು ಹೇಳುತ್ತಿದ್ದಾರೆ. ಆದರೆ ಅಲ್ಲಿ ಸಾರ್ವಜನಿಕರು ಓಡಾಡುತ್ತಿದ್ದು, ಆ ಜಾಗವನ್ನು ರಸ್ತೆ ಎಂದು ನಮೂದಿಸಿ ಕೊಡಿ ಎಂದು ಮನವಿ ಮಾಡಿದರು.

ಇದು ನೀರಾವರಿ ಇಲಾಖೆ ವ್ಯಾಪ್ತಿಗೆ ಬರಲಿದ್ದು, ನಕಾಶೆಗೆ ಸೇರಿಸಿ ಇಂಡೀಕರಣ ಮಾಡಿಕೊಡುವಂತೆ ಮನವಿ ನೀಡಿದರೆ, ಪ್ರಸ್ತಾವನೆ ಸಲ್ಲಿಸುತ್ತೇವೆ. ಆದರೆ ಈ ಕೆಲಸ ಸುಲಭವಾಗಿಲ್ಲ. ಇದು ಬೆಂಗಳೂರು ಭೂದಾಖಲೆ ತನಕ ಹೋಗಿ ಸ್ಯಾಟಲೈಟ್ ಮ್ಯಾಪ್ ತೆಗೆದು ಕಳುಹಿಸ ಬೇಕು. ಅದಕ್ಕೆ ಸಮಯ ಹಿಡಿಯಲಿದೆ ಎಂದು ತಹಸೀಲ್ದಾರ್ ಸುರೇಶಾಚಾರ್ ಸ್ಪಷ್ಟಪಡಿಸಿದರು.

ರೈತರ ಮನವಿ ಸ್ವೀಕರಿಸಿ ಮಾತನಾಡಿದ ತಹಸೀಲ್ದಾರ್ ಸುರೇಶಾಚಾರ್, ತಾಲೂ ಕಿನಲ್ಲಿ ಸರ್ಕಾರಿ ರಸ್ತೆ, ಗೋಕಟ್ಟೆ ಸೇರಿದಂತೆ ಸರ್ಕಾರಿ ಜಾಗ ಒತ್ತುವರಿಯಾಗಿದ್ದಲ್ಲಿ ಅವುಗಳನ್ನು ಗುರುತಿಸಿ ಪಟ್ಟಿ ಮಾಡಿದರೆ ಅದನ್ನು ಪರಿಶೀಲಿಸಿ ಒತ್ತುವರಿ ತೆರವುಗೊಳಿಸಲಾಗುವುದು. ಇನ್ನು ಮುಂದೆ ಅದಾಲತ್ ಮಾಡಿ ಪೌತಿ ಖಾತೆ ಮಾಡುತ್ತಿದ್ದ ವ್ಯವಸ್ಥೆಯನ್ನು ಸರ್ಕಾರದ ಆದೇಶದನ್ವಯ ಕೈ ಬಿಡಲಾಗಿದ್ದು, ಉಸ್ತುವಾರಿ ಸಚಿವರು ಮೂಗೂರು ಗ್ರಾಮದಲ್ಲಿ ಇ–ಪೌತಿ ಆಂದೋಲನ ಉದ್ಘಾಟಿಸಿದ್ದಾರೆ. ಇ–ಪೌತಿ ಆಂದೋಲನವೆಂದರೆ ಒಂದು ಊರಿನಲ್ಲಿ ಎಷ್ಟು ಮಂದಿ ಖಾತಾದಾರರು ಮರಣ ಹೊಂದಿದ್ದಾರೆ. ಆ ಪಟ್ಟಿ ಬರುತ್ತದೆ. ಪಟ್ಟಿಯಲ್ಲಿರುವರು ಮನೆ ಮನೆಗೆ ಹೋಗಿ ಸಂಬಂಧಿಸಿದ ದಾಖಲಾತಿಗಳನ್ನು ಪಡೆದು ಆನ್‌ಲೈನ್‌ನಲ್ಲೇ ಪೌತಿ ಖಾತೆ ಮಾಡಲಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಗ್ರಾಮ ಲೆಕ್ಕಾಧಿಕಾರಿಗಳು ಮನೆ ಮನೆಗೆ ತೆರಳಿ ತಿಳುವಳಿಕೆ ನೋಟೀಸ್ ಸಹ ನೀಡುತ್ತಾರೆ. ಸಂಬಂಧಿಸಿದ ಖಾತೆದಾರರು ವಂಶವೃಕ್ಷ ಸೇರಿದಂತೆ ಇನ್ನಿತರೆ ದಾಖಲೆ ಒದಗಿಸಿದರೆ ಪೌತಿ ಖಾತೆ ಮಾಡಿಕೊಡಲಾಗುತ್ತದೆ. ತಾಲೂಕಿನಲ್ಲಿ 25 ಸಾವಿರಕ್ಕೂ ಹೆಚ್ಚು ಪೌತಿ ಖಾತೆಗಳು ಬಾಕಿ ಇದ್ದು, ಸರ್ಕಾರ ಹೊಸದಾಗಿ ಜಾರಿಗೆ ತಂದಿರುವ ಇ–ಪೌತಿ ಖಾತಾ ಆಂದೋಲನದ ಪ್ರಯೋಜನ ಪಡೆಯುವಂತೆ ಮನವಿ ಮಾಡಿದರು.

ಸಂಘದ ಅಧ್ಯಕ್ಷ ಮಹದೇವ, ತಾಲೂಕು ಕಾರ್ಯಾಧ್ಯಕ್ಷ ರಾಮಕೃಷ್ಣ, ವರಲಕ್ಷ್ಮಿ, ಬೇಬಿ, ಓಂಕಾರಮೂರ್ತಿ, ಮೂಗೂರು ಹೋಬಳಿ ಅಧ್ಯಕ್ಷ ಶಾಂತನಾಗರಾಜು, ಸಿ.ವಿ.ವೆಂಕಟೇಶ್, ಚೆನ್ನೇಗೌಡ, ಎಂ.ಸಿದ್ದರಾಜು, ಗುರುಸ್ವಾಮಿ, ಶಂಕರ, ರಾಮಣ್ಣ, ಚಿನ್ನಸ್ವಾಮಿ, ಎಸ್.ರಾಮಸ್ವಾಮಿ ಇತರರಿದ್ದರು.

ಡಾ.ಬಾಬು ಜಗಜೀವನರಾಂ ತತ್ವಾದರ್ಶ ಮಾದರಿ

ಹುಣಸೂರು, ಜು.6– ಮಾಜಿ ಉಪ ಪ್ರಧಾನಿ, ಹಸಿರು ಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನರಾಂ ತತ್ವಾದರ್ಶ ಮಾದರಿಯಾಗಿದೆ ಎಂದು ತಹಸೀಲ್ದಾರ್ ಜೆ.ಮಂಜುನಾಥ್ ತಿಳಿಸಿದರು.



ಹುಣಸೂರಲ್ಲಿ ಬಾಬೂಜಿ ಜಯಂತಿ ನಡೆಯಿತು.

ತಾಲೂಕು ಆಡಳಿತದಿಂದ ಉಪ ವಿಭಾಗಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಡಾ.ಬಾಬು ಜಗಜೀವನರಾಂ ಅವರ 39ನೇ ಪುಣ್ಯಸ್ಮರಣೆಯಲ್ಲಿ ಮಾತನಾಡಿದ ಅವರು, ನಾವೆಲ್ಲರೂ ಬಾಬೂಜಿ ಅವರ ಆದರ್ಶಗಳನ್ನು ಪಾಲಿಸಬೇಕು. ಬಾಬೂಜಿ ಅವರು ಮೇಲು–ಕೀಳೆಂಬ ತಾರತಮ್ಯ, ಜಾತಿ ಪದ್ಧತಿ, ಅಸ್ಪೃಶ್ಯತೆ ತೊಡೆದುಹಾಕಲು ಶ್ರಮಿಸುವ ಮೂಲಕ ಸಾಮಾಜಿಕ ಬದಲಾವಣೆಗಾಗಿ ಹೋರಾಡಿದವರು. ಶೋಷಿತರ ಪರವಾಗಿ ದನಿ ಎತ್ತಿದ ಅವರ ಚಿಂತನೆಗಳನ್ನು ನಾವೆಲ್ಲರೂ ರೂಢಿಸಿಕೊಳ್ಳಬೇಕು ಎಂದರು.

ಮುಖಂಡ ಡಿ.ಕುಮಾರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸದಸ್ಯ ಮಹದೇವ್, ತಾಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಅಶೋಕ್ ಕುಮಾರ್ ಪರಿಶಿಷ್ಟ ವರ್ಗಗಳ ಇಲಾಖೆ ಅಧಿಕಾರಿ ಗಂಗಾಧರ್, ಆದಿ ಜಾಂಬವ ಸಮಾಜದ ತಾಲೂಕು ಅಧ್ಯಕ್ಷ ಶಿವಣ್ಣ, ಯುವ ಸಾಹಿತಿ ರೇಣುಕಾ ಪ್ರಸಾದ್, ಮುಖಂಡರಾದ ರಾಚಯ್ಯ, ಸ್ವಾಮಿ, ನಾಗೇಶ್, ಶಿವಣ್ಣ, ಮೋಹನ್, ಮಾದೇವ್, ಚೆಲುವರಾಜ್, ವೆಂಕಟೇಶ್, ಶಿವಮ್ಮ ಸೇರಿದಂತೆ ಇತರರಿದ್ದರು.

ಸಂವಿಧಾನ ಪೀಠಿಕೆ, ಫೋಟೋ ಕೊಡುಗೆ



ತಿ.ನರಸೀಪುರ ತಾಲೂಕಿನ ಯಡದೊರೆ ಗ್ರಾಮದ ಗ್ರಂಥಾಲಯಕ್ಕೆ ಸಂವಿಧಾನ ಪೀಠಿಕೆ ಮತ್ತು ರಾಷ್ಟ್ರ ನಾಯಕರ ಫೋಟೋಗಳನ್ನು ನಿವೃತ್ತ ಪ್ರಾಂಶುಪಾಲ ಜಿ.ಎಸ್.ಮಲ್ಲೇಶ್ ಕೊಡುಗೆ ನೀಡಿದರು. ಮೈಸೂರು ಜಿಲ್ಲಾ ಗ್ರಾಮಾಂತರ ವೈದ್ಯಕೀಯ ವಿಭಾಗದ ಅಧ್ಯಕ್ಷ ಡಾ.ಪ್ರದೀಪ್, ಜಿಲ್ಲಾ ಕಾರ್ಯದರ್ಶಿ ಮರಯ್ಯ, ಗ್ರಾಪಂ ಸದಸ್ಯರಾದ ಕುಸುಮ, ಮಹೇಶ್, ಮುಖಂಡರಾದ ಮಹದೇವಪ್ಪ, ಗ್ರಂಥಾಲಯ ಪಾಲಕ ಶಿವಮಲ್ಲಯ್ಯ ಇತರರಿದ್ದರು.

ಸಾಲ–ಸೌಲಭ್ಯಕ್ಕೆ ಅರ್ಜಿ ಆಹ್ವಾನ

ಮೈಸೂರು, ಜು.6– ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮದಿಂದ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಯೋಜನೆಯಡಿ ಸಾಲ ಸೌಲಭ್ಯ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು hhtp//kacdc.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು ಜು.31 ಕೊನೆ ದಿನ.

ಸಾಮಾನ್ಯ ವರ್ಗದಲ್ಲಿನ ಆರ್ಯ ವೈಶ್ಯ ಸಮುದಾಯಕ್ಕೆ ಸೇರಿದವರಾಗಿರಬೇಕು ಮತ್ತು ನಮೂನೆ–ಜಿ ಯಲ್ಲಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಪಡೆದಿರಬೇಕು, ಅರ್ಜಿದಾರರು ಕರ್ನಾಟಕ ರಾಜ್ಯದವರಾಗಿದ್ದು, ಅವರ ಖಾಯಂ ವಿಳಾಸವು ಕರ್ನಾಟಕ ರಾಜ್ಯದಲ್ಲಿರಬೇಕು. ಅರ್ಜಿದಾರರ ಮೊಬೈಲ್ ಸಂಖ್ಯೆಗೆ ಆಧಾರ್ ಜೋಡಣೆಯಾಗಿರಬೇಕು ಮತ್ತು ಬ್ಯಾಂಕ್ ಖಾತೆಗೆ ಆಧಾರ್ ಸೀಡಿಂಗ್ ಆಗಿರಬೇಕು. ಅರ್ಹ ಅರ್ಜಿದಾರರುಗಳನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯ ಮೂಲಕ ಆಯ್ಕೆ ಮಾಡಲಾಗುತ್ತದೆ. 2019–20ನೇ ಸಾಲಿನಿಂದ 2021–22ನೇ ಸಾಲಿನವರೆಗೆ ಸ್ವಯಂ–ಉದ್ಯೋಗ ನೇರ ಸಾಲ ಯೋಜನೆಯಡಿ ಸಾಲ ಪಡೆದು ಸಕಾಲದಲ್ಲಿ ಸಾಲವನ್ನು ಪೂರ್ಣ ಪ್ರಮಾಣದಲ್ಲಿ ಮರುಪಾವತಿಸಿದ ಫಲಾನುಭವಿಗಳಿಗೆ ಮನಃ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಮೈಸೂರು ಜಿಲ್ಲಾ ಕಚೇರಿ ಹಾಗೂ ನಿಗಮದ ಸಹಾಯವಾಣಿ: 9448451111, ದೂ.ಸಂ:0821–2341194 ನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ವ್ಯವಸ್ಥಾಪಕರಾದ ಹೆಚ್.ಎ.ಶೋಭ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿಗಳಿಬ್ಬರು ಹೊಡೆದಾಡುತ್ತಿರುವ ವಿಡಿಯೋ ವೈರಲ್

ವಿದ್ಯಾರ್ಥಿ ನಿಲಯಕ್ಕೆ ತಹಸೀಲ್ದಾರ್ ಭೇಟಿ, ಪರಿಶೀಲನೆ

ವಾರ್ಡನ್ ಷಣ್ಮುಖ ಆರಾಧ್ಯಗೆ ತರಾಟೆ

ಹೆಚ್.ಡಿ.ಕೋಟೆ, ಜು.6– ಪಟ್ಟಣದ ಶಾದಿ ಮಹಲ್ ಬಳಿಯ ಮೆಟ್ರಿಕ್ ನಂತರದ ಪ.ವರ್ಗಗಳ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಶುಕ್ರವಾರ ವಿದ್ಯಾರ್ಥಿಗಳಿಬ್ಬರು ಹೊಡೆದಾಡಿಕೊಂಡಿದ್ದು, ಆ ದೃಶ್ಯವನ್ನು ಮತ್ತೋರ್ವ ವಿದ್ಯಾರ್ಥಿ ವಿಡಿಯೋ ಮಾಡಿ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಮಾಡಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.



ಪ.ವರ್ಗಗಳ ಬಾಲಕರ ವಿದ್ಯಾರ್ಥಿ ನಿಲಯಕ್ಕೆ ತಹಸೀಲ್ದಾರ್ ಶ್ರೀನಿವಾಸ್, ಪರಿಶಿಷ್ಟ ಕಲ್ಯಾಣ ಅಧಿಕಾರಿ ಮಹೇಶ್ ಭೇಟಿ ನೀಡಿ ಪರಿಶೀಲಿಸಿದರು.

ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆದ ಹಿನ್ನಲೆಯಲ್ಲಿ ಭಾನುವಾರ ತಹಸೀಲ್ದಾರ್ ಶ್ರೀನಿವಾಸ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಮಹೇಶ್ ವಿದ್ಯಾರ್ಥಿ ನಿಲಯಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ತಹಸೀಲ್ದಾರ್ ಶ್ರೀನಿವಾಸ್ ಮಾತನಾಡಿ, ವಿದ್ಯಾರ್ಥಿ ನಿಲಯದಲ್ಲಿ ವಿದ್ಯಾರ್ಥಿಗಳು ಹೊಡೆದಾಡಿಕೊಂಡಿರುವ ವಿಡಿಯೋ ವೈರಲ್ ಆಗಿರುವ ಹಿನ್ನೆಲೆಯಲ್ಲಿ ಅವರ ಪೋಷಕರನ್ನು ಕರೆಸಿ ವಿಚಾರಣೆ ಮಾಡಿ, ಮಾಹಿತಿ ಪಡೆದಿದ್ದೇವೆ. ತಾಲೂಕಿನ ಸಾಕಷ್ಟು ಬಡ ಕುಟುಂಬದ ವಿದ್ಯಾರ್ಥಿಗಳು ಈ ನಿಲಯಕ್ಕೆ ಬಂದಿದ್ದಾರೆ. ಅವರಿಗೆ ಅಧಿಕಾರಿಗಳು ಉತ್ತಮ ಮಾರ್ಗದರ್ಶನ ನೀಡುವ ಮೂಲಕ ಪೋಷಣೆ ಮಾಡಬೇಕು. ವಿದ್ಯಾರ್ಥಿಗಳು ಹಾಸ್ಟೆಲ್‌ನಲ್ಲಿ ಬಳಸುತ್ತಾರೆ. ಹೊಡೆದಾಡಿಕೊಳ್ಳುತ್ತಾರೆ ಎಂದರೆ ವಾರ್ಡನ್ ಸೇರಿದಂತೆ ಸಂಬಂಧಪಟ್ಟ ಅಧಿಕಾರಿಗಳು ವಿದ್ಯಾರ್ಥಿಗಳನ್ನು ಹೇಗೆ ನೋಡಿಕೊಳ್ಳುತ್ತಿದ್ದಾರೆ ಎಂಬುದು ತಿಳಿಯುತ್ತದೆ ಎಂದು ವಾರ್ಡನ್ ಷಣ್ಮುಖ ಆರಾಧ್ಯ ಅವರನ್ನು ತರಾಟೆ ತೆಗೆದುಕೊಂಡು, ಘಟನೆಗೆ ಸಂಬಂಧಿಸಿದವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದರು.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಮಹೇಶ್ ಮಾತನಾಡಿ, ಹಾಸ್ಟೆಲ್‌ನಲ್ಲಿ ಮೊಬೈಲ್ ಬಳಸಬಾರದು. ಸ್ವಚ್ಛತೆ ಕಾಪಾಡಿಕೊಂಡು ಓದುವ ಕಡೆ ಗಮನ ಹರಿಸಬೇಕು ಎಂದು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿರುತ್ತೇವೆ. ಆದರೂ ಇಲ್ಲಿ ಇಂತಹ ಘಟನೆ ನಡೆದಿದೆ ಎಂದರೆ ಅದಕ್ಕೆ ವಾರ್ಡನ್ ಸೇರಿದಂತೆ ಇಲ್ಲಿನ ಸಿಬ್ಬಂದಿಗಳ ಬೇಜವಾಬ್ದಾರಿ ಕಾರಣ. ಹೀಗಾಗಿ ಈ ಘಟನೆಗೆ ಸಂಬಂಧಿಸಿದಂತೆ ಎಲ್ಲಾ ವಿಚಾರಗಳನ್ನು ಪರಿಶೀಲಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದರು.

ಪುರಸಭೆ ಸದಸ್ಯ ಹೆಚ್.ಸಿ.ನರಸಿಂಹಮೂರ್ತಿ, ಆದಿವಾಸಿ ಮುಖಂಡ ಪುಟ್ಟಬಸವಯ್ಯ ಮಾತನಾಡಿದರು. ಅಲ್ಲದೇ ಹೊಡೆದಾಡಿಕೊಂಡ ವಿದ್ಯಾರ್ಥಿಗಳನ್ನು ಸಮಾಧಾನ ಪಡಿಸಿ, ಬುದ್ಧಿವಾದ ಹೇಳಲಾಯಿತು.

ಈ ವೇಳೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾಧಿಕಾರಿ ಎಂ.ಕೆ.ಮಲ್ಲೇಶ್, ವಾರ್ಡನ್ ಷಣ್ಮುಖ ಆರಾಧ್ಯ, ಪಿಡಿಓ ಡಿ.ಸ್ವಾಮಿ, ಎಸ್‌ಐ ಚಿಕ್ಕನಾಯಕ, ಪೋಷಕರಾದ ಶಿವಣ್ಣ, ಸುಂದ್ರ ಇನ್ನಿತರರಿದ್ದರು.

> ಮಕ್ಕಳು ಹಾಸ್ಟೆಲ್‌ನಲ್ಲಿ ಮೊಬೈಲ್ ಬಳಸಲು ಏಕೆ ಅವಕಾಶ ನೀಡಿದ್ದೀರಿ. ಘಟನೆ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತೀರಾ. ನಿಮ್ಮನ್ನು ವಾರ್ಡನ್ ಆಗಿ ನೇಮಿಸಿರುವುದು ಬೇಕಾಬಿಟ್ಟಿ ಕೆಲಸ ಮಾಡುವುದಕ್ಕಾ. ಹೊಡೆದಾಟದಲ್ಲಿ ಮಕ್ಕಳಿಗೆ ಏನಾದರೂ ಆಗಿದ್ದರೇ ಯಾರು ಹೊಣೆ. ಮಕ್ಕಳಿಗೆ ಮೆಡಿಕಲ್ ಚೆಕಪ್ ಮಾಡಿಸಿ. ನಿಮ್ಮ ವಿರುದ್ಧ (ಷಣ್ಮುಖ ಆರಾಧ್ಯ) ಶಿಸ್ತು ಕ್ರಮಕ್ಕೆ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗುವುದು. –ಶ್ರೀನಿವಾಸ್, ತಹಸೀಲ್ದಾರ್.

> ನಾವು ಕೂಲಿ ಮಾಡಿಕೊಂಡು ಜೀವನ ನಿರ್ವಹಣೆ ಮಾಡುತ್ತಿದ್ದೇವೆ. ಉತ್ತಮ ಸೌಲಭ್ಯವಿದೆ ಎಂಬ ಕಾರಣಕ್ಕೆ ನಮ್ಮ ಮಕ್ಕಳನ್ನು ಈ ಹಾಸ್ಟೆಲ್‌ಗೆ ಸೇರಿಸಿದ್ದೇವೆ. ಮಕ್ಕಳು ಹೊಡೆದಾಡಿಕೊಂಡಿರುವ ವಿಚಾರ ನಮ್ಮ ಗಮನಕ್ಕೆ ಬಂದಿಲ್ಲ. ಇದನ್ನು ಮುಚ್ಚಿಹಾಕುವ ಪ್ರಯತ್ನ ಮಾಡಿದ್ದಾರೆ. ಮಕ್ಕಳು ಹೊಡೆದಾಡುವ ವಿಡಿಯೋ ನೋಡಿದ ಮೇಲೆ ನಾವು ಹಾಸ್ಟೆಲ್‌ಗೆ ಬಂದಿದ್ದೇವೆ. ಒಂದು ವೇಳೆ ಪ್ರಾಣಾಪಾಯ ಸಂಭವಿಸಿದ್ದರೇ ಏನು ಮಾಡುವುದು. – ಶಿವಣ್ಣ, ಸುಂದ್ರ, ಪೋಷಕರು.

ಹೆಬ್ಬಲಗುಪ್ಪೆಯಲ್ಲಿ ಗೋಡೆ ಕುಸಿದು ಮನೆಯೊಳಗೆ ಸಿಲುಕಿದ್ದವರ ರಕ್ಷಣೆ



ಹೆಚ್.ಡಿ.ಕೋಟೆ, ಜು.6– ಗೋಡೆ ಕುಸಿದು ಮನೆ ಒಳಗೆ ಸಿಲುಕಿಕೊಂಡಿದ್ದವರನ್ನು ಗ್ರಾಮಸ್ಥರೇ ರಕ್ಷಿಸಿರುವ ಘಟನೆ ತಾಲೂಕಿನ ಹೆಬ್ಬಲಗುಪ್ಪೆ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಗೋವಿಂದಶೆಟ್ಟಿ ಅವರ ಮನೆ ಗೋಡೆ ಕುಸಿದಿರುವುದು. ಕಳೆದ ಒಂದು ವಾರದಿಂದ ಸುರಿಯುತ್ತಿರುವ ಭಾರೀ ಮಳೆಯಿಂದಾಗಿ ಮನೆ ಗೋಡೆ ಶಿಥಿಲಗೊಂಡಿತ್ತು. ಶನಿವಾರ ರಾತ್ರಿ ಗೋವಿಂದಶೆಟ್ಟಿ ಊಟ ಮುಗಿಸಿ ಮನೆಯಿಂದ ಹೊರ ಬಂದಿದ್ದಾರೆ. ಈ ವೇಳೆ ಮನೆ ಗೋಡೆ ಕುಸಿದಿದ್ದು, ಒಳಗಿದ್ದ ಪತ್ನಿ ರಾಧಾ, ಪುತ್ರ ರೋಹಿತ್ ಹಾಗೂ ಅವರ ದೊಡ್ಡಮ್ಮ ಸುವರ್ಣಮ್ಮ ಸಿಲುಕಿ ಹೊರ ಬರಲಾಗದೇ ಕಿರುಚಿಕೊಂಡಿದ್ದಾರೆ. ತಕ್ಷಣ ಎಚ್ಚೆತ್ತ ಗ್ರಾಮಸ್ಥರು ಮೇಲ್ಛಾವಣಿ ಮೂಲಕ ಮೂವರನ್ನು ರಕ್ಷಿಸಿದ್ದಾರೆ. ಆದರೆ ದಿನಬಳಕೆ ಸೇರಿದಂತೆ ಬೆಲೆ ಬಾಳುವ ವಸ್ತುಗಳು ಸಂಪೂರ್ಣ ನಾಶವಾಗಿ ನಷ್ಟ ಸಂಭವಿಸಿದೆ. ಈ ಸಂದರ್ಭ ಮನೆ ಕಳೆದುಕೊಂಡಿರುವ ಗೋವಿಂದ ಶೆಟ್ಟಿ ಅವರಿಗೆ ಮನೆ ನಿರ್ಮಿಸಿಕೊಡುವಂತೆ ತಹಸೀಲ್ದಾರ್ ಶ್ರೀನಿವಾಸ್‌ಗೆ ಗ್ರಾಮಸ್ಥರು ಮನವಿ ಮಾಡಿದ್ದಾರೆ.

ಅಕ್ರಮ ಚಟುವಟಿಕೆಯ ತಾಣ ಕೆಆರ್‌ಎಸ್ ಹಿನ್ನೀರು ಪ್ರದೇಶ



ಮೀನಾಕ್ಷಿಪುರದ ಕೆಆರ್‌ಎಸ್ ಹಿನ್ನೀರಿನಲ್ಲಿ ಪ್ರವಾಸಿಗರ ದಂಡು

- ಹಿನ್ನೀರಿನ ಪ್ರದೇಶದಲ್ಲೇ ಬಹಿರಂಗವಾಗಿ ಪಾನಗೋಷ್ಠಿ
- ಕುಡಿದು ಬಿಸಾಡಿರುವ ಮದ್ಯದ ಬಾಟಲ್‌ಗಳ ದರ್ಶನ
- ಮಹಿಳೆಯರು ಮತ್ತು ಮಕ್ಕಳಿಗೆ ಮುಜುಗರ
- ನೀರಿನಲ್ಲೇ ವಾಹನ ಚಲಾಯಿಸುವ ದುಸ್ಸಾಹಸ



ನೀರಿನಲ್ಲಿಯೇ ಟೇಬಲ್, ಕುರ್ಚಿ ಹಾಕಿ ಮದ್ಯ ಸೇವಿಸುತ್ತಿರುವ ಯುವಕರು

● ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಜು.6– ಅವಧಿಗೂ ಮುನ್ನವೇ ಮೈದುಂಬಿರುವ ಜೀವನದಿ ಕಾವೇರಿ ಹಾಗೂ ಕೆಆರ್‌ಎಸ್ ಜಲಾಶಯವನ್ನು ಕಣ್ತುಂಬಿಕೊಳ್ಳಲು ಪ್ರವಾಸಿಗರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಬೆನ್ನಲ್ಲೇ ಜಲಾಶಯದ ಹಿನ್ನೀರಿನ ಕೆಲವು ಪ್ರದೇಶಗಳಲ್ಲಿ ಮದ್ಯಪಾನದೊಂದಿಗೆ ಅಕ್ರಮ ಚಟುವಟಿಕೆಗಳು ನಡೆಯುತ್ತಿದ್ದು, ಅನಾಹುತ ಸಂಭವಿಸುವ ಮುನ್ನವೇ ಕಟ್ಟೆಚ್ಚರ ವಹಿಸುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

ಕೆಆರ್‌ಎಸ್ ಜಲಾಶಯದ ಹಿನ್ನೀರಿನ ಪ್ರದೇಶಗಳಲ್ಲಿ ಒಂದಾಗಿರುವ ಮೈಸೂರು ತಾಲೂಕಿನ ಇಲವಾಲ ಹೋಬಳಿಯ ಮೀನಾಕ್ಷಿಪುರದ ಹಿನ್ನೀರಿನ ಭಾಗದಲ್ಲಿ ಪ್ರವಾಸಿಗರು ಅತಿರೇಕದಿಂದ ವರ್ತಿಸುತ್ತಿದ್ದು, ಅಪಾಯವನ್ನು ಮೈಮೇಲೆ ಎಳೆದುಕೊಳ್ಳುವುದರೊಂದಿಗೆ ಸ್ಥಳೀಯ ಗ್ರಾಮಸ್ಥರು ಮತ್ತು ಕುಟುಂಬ ಸದಸ್ಯರೊಂದಿಗೆ ಬರುವ ಪ್ರವಾಸಿಗರಿಗೆ ಮುಜುಗರವನ್ನುಂಟು ಮಾಡುವ ಮೂಲಕ ದರ್ಪ ಪ್ರದರ್ಶಿಸುತ್ತಿದ್ದಾರೆ.

ಕೆಆರ್‌ಎಸ್ ಜಲಾಶಯದ ಇತಿಹಾಸದಲ್ಲಿಯೇ 9 ದಶಕಗಳ ನಂತರ ಜೂನ್ ತಿಂಗಳಲ್ಲೇ ಕೆಆರ್‌ಎಸ್ ಜಲಾಶಯ ಪೂರ್ಣ ಪ್ರಮಾಣದಲ್ಲಿ ಭರ್ತಿಯಾಗಿ ಇತಿಹಾಸ ನಿರ್ಮಿಸಿದ್ದು, ಜಲಾಶಯದಿಂದ ನದಿಗೆ ಅಪಾರ ಪ್ರಮಾಣದ ನೀರು ಬಿಡಲಾಗುತ್ತಿದೆ. ಇದರೊಂದಿಗೆ ಕಾವೇರಿ ಕಣಿವೆಯಲ್ಲಿ ಮಳೆ ಮುಂದುವರೆದಿರುವುದರಿಂದ ಜಲಾಶಯಕ್ಕೆ ಬರುವ ಒಳಹರಿವಿನ ಪ್ರಮಾಣವೂ ಹೆಚ್ಚಾಗಿದೆ. ಇದರಿಂದ ಜಲಾಶಯದಲ್ಲಿ ಸಂಗ್ರಹವಾಗಿರುವ ನೀರು, ಹಿನ್ನೀರಿನ ಪ್ರದೇಶದಲ್ಲೂ ಆವರಿಸಿದ್ದು, ಪ್ರವಾಸಿಗರ ಪಿಕ್‌ನಿಕ್ ತಾಣವಾಗಿ ರೂಪುಗೊಂಡಿದೆ.

ಮೀನಾಕ್ಷಿಪುರ: ಮೈಸೂರು ತಾಲೂಕಿನ ಇಲವಾಲ ಹೋಬಳಿಯ ಮೀನಾಕ್ಷಿಪುರದ ಹಿನ್ನೀರಿನ ಪ್ರದೇಶಕ್ಕೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿದೆ. ಅದರಲ್ಲೂ ಶನಿವಾರ, ಭಾನುವಾರ ಹಾಗೂ ವಾರಾಂತ್ಯ ರಜೆ ವೇಳೆ ಮೀನಾಕ್ಷಿಪುರಕ್ಕೆ ಹರಿದು ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿದ್ದು, ಅತಿರೇಕವಾಗಿ ವರ್ತಿಸುವ ಮೂಲಕ ಆಕ್ರೋಶಕ್ಕೆ ಗುರಿಯಾಗುತ್ತಿದ್ದಾರೆ.

ಬಹಿರಂಗವಾಗಿಯೇ ಪಾನಗೋಷ್ಠಿ: ವಿವಿಧೆಡೆಯಿಂದ ಗುಂಪು–ಗುಂಪಾಗಿ ಆಗಮಿಸುವ ಯುವಕರ ದಂಡು ಜೊತೆಯಲ್ಲಿಯೇ ಮದ್ಯವನ್ನು ತೆಗೆದುಕೊಂಡು ಬಂದು ಬಹಿರಂಗವಾಗಿಯೇ ಹಿನ್ನೀರಿನ ಪ್ರದೇಶದಲ್ಲಿ ಕುಡಿಯುವ ಮೂಲಕ ಮೋಜು–ಮಸ್ತಿಯಲ್ಲಿ ನಿರತರಾಗಿದ್ದಾರೆ. ಇದರಿಂದ ಮಹಿಳೆಯರು, ಯುವತಿಯರು ಹಾಗೂ ಮಕ್ಕಳೊಂದಿಗೆ ಹಿನ್ನೀರಿನ ಪ್ರದೇಶದ ಸೌಂದರ್ಯ ಸವಿಯಲು ಬರುವ ಕುಟುಂಬಸ್ಥರಿಗೆ ಪುಂಡರ ಹಾವಳಿಯಿಂದ ಮುಜುಗರವಾಗುತ್ತಿದೆ. ಮೀನಾಕ್ಷಿಪುರದ ಹಿನ್ನೀರಿನ ಪ್ರದೇಶದ ಉದ್ದಕ್ಕೂ ಬಹಿರಂಗವಾಗಿಯೇ ಮದ್ಯ ಸೇವಿಸುತ್ತಿರುವ ದೃಶ್ಯ ಕಂಡು ಬರುತ್ತಿದೆ.

ನೀರೊಳಗೆ ಟೇಬಲ್ಲು, ಕುರ್ಚಿ: ಮೀನಾಕ್ಷಿಪುರದ ಪ್ರದೇಶದಲ್ಲಿ ಹೊರಗಿನಿಂದ ಬರುವ ಯುವಕರು ಟೇಬಲ್ಲು ಮತ್ತು ಕುರ್ಚಿಯನ್ನು ತಮ್ಮೊಂದಿಗೆ ತಂದು ಹಿನ್ನೀರಿನ ನೀರೊಳಗೆ ಹಾಕಿಕೊಂಡು ಮದ್ಯ ಕುಡಿಯುವುದು ಮತ್ತು ಆಹಾರ ಪದಾರ್ಥ ಸೇವಿಸುವ ದುಸ್ಸಾಹಸಕ್ಕೆ ಕೈಹಾಕುತ್ತಿದ್ದಾರೆ. ಇದರಿಂದ ಸ್ಥಳೀಯರು ಹಿನ್ನೀರಿನ ಪ್ರದೇಶದತ್ತ ಸುಳಿಯುವುದಕ್ಕೇ ಹಿಂದೇಟು ಹಾಕುವಂತಾಗಿದೆ.



ಎಲ್ಲೆಂದರಲ್ಲಿ ಬಿದ್ದಿರುವ ಮದ್ಯದ ಬಾಟಲ್‌ಗಳು



ನದಿಯ ದಡದಲ್ಲಿ ವಾಹನಗಳ ದಟ್ಟಣೆ

ಗಲಭೆ, ಘರ್ಷಣೆ: ಮೀನಾಕ್ಷಿಪುರದ ಹಿನ್ನೀರಿನ ಪ್ರದೇಶದಲ್ಲಿ ಈಗಾಗಲೇ ಹಲವು ಬಾರಿ ಯುವಕರ ಗುಂಪು ಕುಡಿದ ಅಮಲಿನಲ್ಲಿ ಪರಸ್ಪರ ಬಡಿದಾಡಿಕೊಂಡಿರುವ ಘಟನೆಗಳು ಸಾಕಷ್ಟು ನಡೆದಿದ್ದು, ಮುಂದಿನ ದಿನಗಳಲ್ಲಿ ಇದಕ್ಕೆ ಕಡಿವಾಣ ಹಾಕದಿದ್ದರೆ ಸಾವು–ನೋವು ಸಂಭವಿಸುವ ಆತಂಕವೂ ಸ್ಥಳೀಯರಲ್ಲಿದೆ. ಈ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಪೊಲೀಸರು ಹಿನ್ನೀರಿನ ಪ್ರದೇಶದಲ್ಲಿ ಗಸ್ತು ಅಥವಾ ತಪಾಸಣೆ ಮಾಡುವ ಮೂಲಕ ಅನೈತಿಕ ಚಟುವಟಿಕೆಗೆ ಕಡಿವಾಣ ಹಾಕಬೇಕು ಎಂಬುದು ಗ್ರಾಮಸ್ಥರ ಆಗ್ರಹವಾಗಿದೆ.

ಗಾಜಿನ ಚೂರು: ಹಿನ್ನೀರಿನ ಪ್ರದೇಶದಲ್ಲಿ ಮದ್ಯಪಾನ ಮಾಡಿದ ಬಳಿಕ ಖಾಲಿ ಬಾಟಲ್ ಅನ್ನು ಎಲ್ಲೆಂದರಲ್ಲಿ ಎಸೆದು ಹೋಗುತ್ತಿದ್ದಾರೆ. ಮತ್ತೆ ಕೆಲವರು ಬೇಕಂತಲೇ ಕುಡಿದ ಹುಮ್ಮಸ್ಸಿನಲ್ಲಿ ಖಾಲಿ ಬಾಟಲ್ ಅನ್ನು ಹಿನ್ನೀರಿನ ಪ್ರದೇಶದಲ್ಲಿ ಪುಡಿಪುಡಿ ಮಾಡಿ ಪೌರುಷ ತೋರಿಸುತ್ತಿದ್ದಾರೆ. ಇದರಿಂದ ಸ್ಥಳೀಯ ಗ್ರಾಮಸ್ಥರು ಜಾನುವಾರುಗಳಿಗೆ ನೀರು ಕುಡಿಸಲು ಬಂದಾಗ ಗಾಜಿನ ಚೂರುಗಳು ಕಾಲಿಗೆ ಚುಚ್ಚಿಕೊಂಡಿರುವ ಸಾಕಷ್ಟು ನಿದರ್ಶನಗಳಿವೆ.

ಕಾಂಡೋಮ್‌ಗಳ ಚೆಲ್ಲಾಟ: ಹಿನ್ನೀರಿನ ಪ್ರದೇಶದಲ್ಲಿ ವಿಹರಿಸಲು ಬರುವ ಕೆಲವರು ಅನೈತಿಕ ಚಟುವಟಿಕೆ ನಡೆಸಿ ಹಿನ್ನೀರಿನ ಪ್ರದೇಶದಲ್ಲಿ ಕಾಂಡೋಮ್ ಎಸೆದು ಹೋಗುತ್ತಿದ್ದಾರೆ. ಇದರಿಂದ ಹಲವೆಡೆ ಕಾಂಡೋಮ್‌ಗಳು ಪತ್ತೆಯಾಗುತ್ತಿದ್ದು, ಸ್ಥಳೀಯರು ಮುಜುಗರಕ್ಕೆ ಈಡಾಗುವಂತಾಗಿದೆ.

ಅಕ್ರಮ ರೆಸಾರ್ಟ್‌ಗಳು: ಮೀನಾಕ್ಷಿಪುರ ಸೇರಿದಂತೆ ಸುತ್ತಮುತ್ತಲಿನ ಹಿನ್ನೀರಿನ ಪ್ರದೇಶದ ಸಮೀಪದಲ್ಲೇ ಹಲವು ರೆಸಾರ್ಟ್‌ಗಳು ಅಕ್ರಮವಾಗಿ ತಲೆ ಎತ್ತಿವೆ. ಈ ರೆಸಾರ್ಟ್‌ಗಳಿಗೆ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಸೇರಿದಂತೆ ಯಾವುದೇ ಅನುಮತಿ ಪಡೆಯದೇ ನಡೆಸಲಾಗುತ್ತಿದ್ದು, ಅವುಗಳಿಂದ ಉತ್ಪತ್ತಿಯಾಗುವ ಒಳ ಚರಂಡಿ ಸೇರಿದಂತೆ ತ್ಯಾಜ್ಯ ನೀರು ಹಿನ್ನೀರಿಗೆ ಸೇರುತ್ತಿದೆ ಎಂದು ಸ್ಥಳೀಯರು ಆರೋಪಿಸಿದ್ದು, ಹಿನ್ನೀರಿನ ಪ್ರದೇಶದ ಪಾವಿತ್ರ್ಯತೆ ಕಾಪಾಡಲು ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ನೀರಿನಲ್ಲೇ ವಾಹನ ಚಾಲನೆ: ವಿವಿಧೆಡೆಯಿಂದ ಬರುವ ಯುವಕರು ತಮ್ಮ ವಾಹನವನ್ನು ಹಿನ್ನೀರಿನ ದಡದಲ್ಲಿಯೇ ಚಾಲನೆ ಮಾಡುವ ದುಸ್ಸಾಹಸವನ್ನು ಪ್ರದರ್ಶಿಸುತ್ತಿದ್ದಾರೆ. ಪದೇ ಪದೆ ಇಂತಹ ಘಟನೆಗಳು ಮರುಕಳಿಸುತ್ತಿದ್ದು, ಹಲವು ಬಾರಿ ವಾಹನಗಳು ಹಿನ್ನೀರಿನಲ್ಲಿ ಹೂತು ಹೋಗಿರುವ ಘಟನೆ ಜರುಗಿದೆ. ಬಳಿಕ ಸ್ಥಳೀಯರ ಟ್ರ್ಯಾಕ್ಟರ್ ಬಳಸಿ ಹಿನ್ನೀರಿನಲ್ಲಿ ಸಿಲುಕಿಕೊಂಡಿದ್ದ ವಾಹನಗಳನ್ನು ಮೇಲೆತ್ತಲಾಗಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಫಿನಿಕ್ಸ್ (ತ) + ಮಾರ್ಗನ್ (ತ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಾದೇವ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಸಿತಾರೆ ಜಮೀನ್ ಪರ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕುಲದಲ್ಲಿ ಕೀಳಾವುದೋ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾದೇವ (ಕ)	4 ಪ್ರದರ್ಶನಗಳು
ರಾಜಕಮಲ್	
3ಬಿಹೆಚ್‌ಕೆ (ತ)	4 ಪ್ರದರ್ಶನಗಳು
ಸಂಗಂ	
ಪೆನ್‌ಡ್ರೈವ್ (ಕ)	4 ಪ್ರದರ್ಶನಗಳು
ಲಿಡೋ	
ಕುಬೇರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ) + ನವಗ್ರಹ (ಕ)	1+3 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ.10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ.1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಶ್ರೀ ಕೃಷ್ಣಧಾಮದಲ್ಲಿ ಭಕ್ತರಿಗೆ ತಪ್ತ ಮುದ್ರಾಧಾರಣೆ



ಮೈಸೂರು, ಜು.6– ಪ್ರಥಮ ಏಕಾದಶಿ ದಿನದಂದು ಮೈಸೂರಿನ ಸರಸ್ವತಿಪುರಂನಲ್ಲಿರುವ ಶ್ರೀ ಕೃಷ್ಣಧಾಮದಲ್ಲಿ ಶ್ರೀ ಕೃಷ್ಣ ಮಿತ್ರ ಮಂಡಳಿ ಮತ್ತು ಶ್ರೀ ಕೃಷ್ಣ ಟ್ರಸ್ಟ್ ವತಿಯಿಂದ ಭಕ್ತರಿಗೆ ತಪ್ತ ಮುದ್ರಾಧಾರಣೆ ಮಾಡಲಾಯಿತು.


ಉಡುಪಿ ಶ್ರೀ ಪಲಿಮಾರು ಮಠದ ಸಂಸ್ಥಾನಧೀಶರಾದ ಶ್ರೀ ವಿದ್ಯಾಧೀಶ ತೀರ್ಥ ಶ್ರೀ ಪಾದಂಗಳವರು ಹಾಗೂ ಶ್ರೀ ವಿದ್ಯಾರಾಜೇಶ್ವರ ತೀರ್ಥ ಶ್ರೀಪಾದಂಗಳವರ ಸಾನಿಧ್ಯದಲ್ಲಿ 2 ಸಾವಿರಕ್ಕೂ ಹೆಚ್ಚು ಭಕ್ತರಿಗೆ ತಪ್ತ ಮುದ್ರಾಧಾರಣೆ ನೆರವೇರಿತು.

ಈ ವೇಳೆ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದಂಗಳವರು ಮಾತನಾಡಿ, ಇಂದು ಆಶಾಢ ಶುದ್ಧ ಏಕಾದಶಿ. ಈ ದಿನ ಸುದರ್ಶನ ಹೋಮ ಮಾಡಿ ಅದರಲ್ಲಿ ಶಂಕ, ಚಕ್ರವನ್ನು ಬಿಸಿ ಮಾಡಿ ನಮ್ಮ ಮೈಮೇಲೆ ಹಾಕಿಕೊಂಡರೆ ದೇವರ ಕೃಪೆ ದೊರಕುತ್ತದೆ ಎಂಬ ನಂಬಿಕೆ ಇದೆ. ಶ್ರೀನಿವಾಸನ ಕೈನಲ್ಲಿರುವ ಶಂಕ, ಚಕ್ರ ಗಳನ್ನು ನಾವು ಮುದ್ರೆ ರೂಪದಲ್ಲಿ ಧಾರಣೆ ಮಾಡಿದರೆ ನಮ್ಮಲ್ಲಿ ಶ್ರೀನಿವಾಸ ನೆಲೆಸಿರುತ್ತಾನೆ. ಹಾಗಾಗಿ ಶಂಕ, ಚಕ್ರ ಮುದ್ರಾಧಾರಣೆ ಮಾಡಿದವರು ಮನೆಯಲ್ಲಿದ್ದರೆ ಒಂದು ರಕ್ಷೆ ಇದ್ದಂತೆ ಎಂದು ಹೇಳಿದರು.

ಈ ವೇಳೆ ಶ್ರೀ ಕೃಷ್ಣ ಮಿತ್ರ ಮಂಡಳಿ ಅಧ್ಯಕ್ಷ ಎನ್.ಗೋಪಾಲಕೃಷ್ಣನ್, ಗೌರವ ಕಾರ್ಯದರ್ಶಿ ಗುರುಪ್ರಸಾದ್, ಶ್ರೀ ಕೃಷ್ಣ ಟ್ರಸ್ಟ್ ಉಪಾಧ್ಯಕ್ಷರಾದ ರವಿಶಾಸ್ತ್ರಿ, ಪಿ.ಎಸ್.ಚಂದ್ರಶೇಖರ್, ಕಾರ್ಯದರ್ಶಿ ಕೆ.ವಿ.ಶ್ರೀಧರ್, ಖಜಾಂಜಿ ಎಂ.ರಾಘವೇಂದ್ರ ರಾವ್, ಶ್ರೀವತ್ಸ, ಮಂಗಳ ಮತ್ತಿತರರು ಉಪಸ್ಥಿತರಿದ್ದರು.

ನಟಿಸುವಾಗ ಹಾಡುತ್ತೇನೆ, ಹಾಡುವಾಗ ನಟಿಸುತ್ತೇನೆ

ರಾಜಸ್ತಾನಿ ಜಾನಪದದ ಖ್ಯಾತ ಗಾಯಕಿ ಇಲಾ ಅರುಣ್



ಮೈಸೂರಿನ ಹೋಟೆಲ್ ಸದರನ್ ಸ್ಟಾರ್‌ನ ಜ್ಯೋತಿ ಹಾಲ್‌ನಲ್ಲಿ ಭಾನುವಾರ ನಡೆದ ಗೋಷ್ಠಿಯಲ್ಲಿ ರಾಜಸ್ತಾನಿ ಜಾನಪದದ ಖ್ಯಾತ ಗಾಯಕಿ ಇಲಾ ಅರುಣ್ (ಎಡದಿಂದ 2ನೇಯವರು) ಮಾತನಾಡಿದರು. (ಎಡದಿಂದ) ಲೇಖಕಿ ಅಂಜುಲಾ ಬೇಡಿ, ರೀನಾ ಪೆರೇರಾ ಚಿತ್ರದಲ್ಲಿದ್ದಾರೆ.

ಮೈಸೂರು,ಜು.6(ಪಿಎಂ)– ನಾನು ನಟಿಸುವಾಗ ಹಾಡುತ್ತೇನೆ ಮತ್ತು ಹಾಡುವಾಗ ನಟಿಸುತ್ತೇನೆ ಎಂದು ಭಾರತೀಯ ನಟಿ, ರಾಜಸ್ತಾನಿ ಜಾನಪದದ ಖ್ಯಾತ ಗಾಯಕಿ ಇಲಾ ಅರುಣ್ ಹೇಳಿದರು.

ಮೈಸೂರಿನ ಹೋಟೆಲ್ ಸದರನ್ ಸ್ಟಾರ್‌ನ ಜ್ಯೋತಿ ಹಾಲ್‌ನಲ್ಲಿ ಮೈಸೂರು ಸಾಹಿತ್ಯ ಸಂಭ್ರಮದ 9ನೇ ಆವೃತ್ತಿಯ ಆಂಗ್ಲಾ (ಇಂಗ್ಲೀಷ್) ಗೋಷ್ಠಿಯಲ್ಲಿ ಭಾನುವಾರ 'ಎ ವಾಯ್ಸ್ ಲೈಕ್ ಅರ್ಥ್, ಎ ಸ್ಪಿರಿಟ್ ಲೈಕ್ ಫ್ಲೇಮ್' ಕುರಿತ ಗೋಷ್ಠಿಯಲ್ಲಿ ಅವರು ಸಭಿಕರೊಬ್ಬರ ಪ್ರಶ್ನೆಗೆ ಉತ್ತರಿಸಿ ಹೀಗೆ ತಿಳಿಸಿದರು.

ನಾನು ಮೂಲತಃ ರಾಜಸ್ಥಾನದ ಜೈಪುರದವಳು. ಅಲ್ಲಿ ಜಾನಪದ ಸೊಗಡು ಹೆಚ್ಚು. ಪೋಷಕರು ಮಕ್ಕಳಿಗೆ ಜಾನಪದ ಕಥೆ ಹಾಗೂ ಜಾನಪದ ಗಾಯನವನ್ನು ಪರಿಚಯಿಸಬೇಕು. ಇದು ಸುಸಂಸ್ಕೃತರಾಲು ಮಕ್ಕಳಿಗೆ ಅನುವು ಮಾಡಿಕೊಡುತ್ತದೆ. ನನಗೆ ಜನಪದ ಸಂಗೀತ ಬಹಳ ಇಷ್ಟ ಎಂದು ಹೇಳಿದರು. ಅಲ್ಲದೆ, ಕೊನೆಯಲ್ಲಿ ಗಾಯನ ಸಾದಪಡಿಸಿದ ಇಲಾ ಅರುಣ್, ಜೊತೆಗೆ ವೇದಿಕೆಯಲ್ಲಿ ನೃತ್ಯ ಸಹ ಪ್ರಸ್ತುತಪಡಿಸಿದರು. ಇದೇ ವೇಳೆ ಅನೇಕ ಸಭಿಕರು ಅವರೊಂದಿಗೆ ನರ್ತಿಸಿ ಸಂಭ್ರಮಿಸಿದರು. ಲೇಖಕಿ ಅಂಜುಲಾ ಬೇಡಿ ಹಾಗೂ ರೀನಾ ಪೆರೇರಾ ಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಸಾಹಿತ್ಯ ಸಂಭ್ರಮಕ್ಕೆ ತೆರೆ

ಎರಡು ದಿನ ಯಶಸ್ವಿಯಾಗಿ ನಡೆದ ಕನ್ನಡ-ಇಂಗ್ಲಿಷ್ ಭಾಷಾ ಗೋಷ್ಠಿಗಳು

ಮೈಸೂರು,ಜು.6(ಪಿಎಂ)– ಮೈಸೂರು ಲಿಟರರಿ ಫೋರಂ ಚಾರಿಟೇಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ನಡೆದ ಎರಡು ದಿನಗಳ ಮೈಸೂರು ಸಾಹಿತ್ಯ ಸಂಭ್ರಮಕ್ಕೆ ಭಾನುವಾರ ಸಂಜೆ ತೆರೆ ಬಿದ್ದಿತು.

ಮೈಸೂರಿನ ಹೋಟೆಲ್ ಸದರನ್ ಸ್ಟಾರ್‌ನ ಜ್ಯೋತಿ ಹಾಲ್‌ನಲ್ಲಿ ಇಂಗ್ಲಿಷ್ ಭಾಷಾ ಗೋಷ್ಠಿಗಳು ಹಾಗೂ ಗಾರ್ಡೇನಿಯಾ ಆವರಣದ ಈಜುಕೊಳದ ಬದಿ ಅಂಗಳದಲ್ಲಿ ಕನ್ನಡ ಭಾಷಾ ಗೋಷ್ಠಿಗಳು ಯಶಸ್ವಿಯಾಗಿ ನಡೆದವು. ಆ ಮೂಲಕ ಕಲೆ, ಸಾಹಿತ್ಯ, ತಂತ್ರಜ್ಞಾನ, ಪ್ರಚಲಿತ ಘಟನಾವಳಿ ಸೇರಿದಂತೆ ಹಲವು ವಿಷಯಗಳ ಬಗ್ಗೆ ಆಯಾಯ ಕ್ಷೇತ್ರಗಳ ತಜ್ಞರು ಬೆಳಕು ಚೆಲ್ಲಿದರು. ಕನ್ನಡ ಮತ್ತು ಇಂಗ್ಲಿಷ್ ಎರಡೂ ಸೇರಿದಂತೆ 100ಕ್ಕೂ ಹೆಚ್ಚು ಸಾಹಿತಿಗಳು ಹಾಗೂ ವಿವಿಧ ವಿಷಯಗಳ ತಜ್ಞರು ಪಾಲ್ಗೊಂಡಿದ್ದರು. ಅಲ್ಲದೆ, ವಿವಿಧ ಕ್ಷೇತ್ರಗಳ 27 ಮಂದಿ ಕಲಾವಿದರು ಹಾಗೂ ಒಬ್ಬರು ಅಂತಾರಾಷ್ಟ್ರೀಯ ಮಟ್ಟದ ಛಾಯಾಗ್ರಾಹಕರು ಸಾಹಿತ್ಯ ಸಂಭ್ರಮದಲ್ಲಿ ಭಾಗವಹಿಸಿದ್ದರು.

ಅಂಗವೈಕಲ್ಯವೇ ನನ್ನ ಅನನ್ಯ ಸಾಮರ್ಥ್ಯ; ಖ್ಯಾತ ಪ್ಯಾರಾಲಿಂಪಿಯನ್ ದೀಪಾ ಮಲಿಕ್ ವಿಶ್ವಾಸದ ನುಡಿ



ಮೈಸೂರಿನ ಹೋಟೆಲ್ ಸದರನ್ ಸ್ಟಾರ್‌ನ ಜ್ಯೋತಿ ಹಾಲ್‌ನಲ್ಲಿ ಭಾನುವಾರ 'ಅನ್ ಸ್ಟಾಪಬಲ್ ; ಬ್ರೇಕಿಂಗ್ ಲಿಮಿಟ್ಸ್, ಬಿಲ್ಡಿಂಗ್ ಡ್ರೀಮ್ಸ್' ಕುರಿತ ಗೋಷ್ಠಿಯಲ್ಲಿ ಭಾರತದ ಮೊದಲ ಮಹಿಳಾ ಪ್ಯಾರಾಲಿಂಪಿಕ್ ಪದಕ ವಿಜೇತರೂ ಆದ ಡಾ.ದೀಪಾ ಮಲಿಕ್ (ಎಡದಿಂದ 2ನೇಯವರು) ಮಾತನಾಡಿದರು. ಚಿತ್ರದಲ್ಲಿ ಡಾ.ಉಷಾ ಹೆಗಡೆ ಇದ್ದಾರೆ.

ಮೈಸೂರು,ಜು.6(ಪಿಎಂ)– ಈ ನನ್ನ ಅಂಗವೈಕಲ್ಯವನ್ನೇ ನನ್ನ ಅನನ್ಯ ಸಾಮರ್ಥ್ಯವೆಂದು ಭಾವಿಸಿದ್ದೇನೆ. ನಾನು ಕುಳಿತಿರುವ ಗಾಲಿಕುರ್ಚಿ (ವ್ಹೀಲ್‌ಚೇರ್)ಯನ್ನು ನಾನು ವ್ಹೀಲ್‌ಚೇರ್ (ಆತ್ಮವಿಶ್ವಾಸದ ಕುರ್ಚಿ) ಎಂದು ಹೇಳಬಯಸುತ್ತೇನೆ ಎಂದು ಪದ್ಮಶ್ರೀ, ಖೇಲ್ ರತ್ನ ಮತ್ತು ಅರ್ಜುನ ಪ್ರಶಸ್ತಿ ಪುರಸ್ಕೃತರೂ ಆದ ಭಾರತದ ಮೊದಲ ಮಹಿಳಾ ಪ್ಯಾರಾಲಿಂಪಿಕ್ ಪದಕ ವಿಜೇತರೂ ಆದ ಡಾ.ದೀಪಾ ಮಲಿಕ್ ಆತ್ಮಸ್ಥೈರ್ಯದ ಮಾತುಗಳನ್ನಾಡಿದರು.

ಮೈಸೂರಿನ ಹೋಟೆಲ್ ಸದರನ್ ಸ್ಟಾರ್‌ನ ಜ್ಯೋತಿ ಹಾಲ್‌ನಲ್ಲಿ ಮೈಸೂರು ಸಾಹಿತ್ಯ ಸಂಭ್ರಮದ 9ನೇ ಆವೃತ್ತಿಯ ಆಂಗ್ಲ (ಇಂಗ್ಲೀಷ್) ಗೋಷ್ಠಿಯಲ್ಲಿ ಭಾನುವಾರ 'ಅನ್ ಸ್ಟಾಪಬಲ್ ; ಬ್ರೇಕಿಂಗ್ ಲಿಮಿಟ್ಸ್, ಬಿಲ್ಡಿಂಗ್ ಡ್ರೀಮ್ಸ್' ಕುರಿತು ದಂತ ವೈದ್ಯರೂ ಆದ ಮೌಂಟ್ ಎವರೆಸ್ಟ್ ಏರಿದ ರಾಜ್ಯದ ಮೊದಲ ಮಹಿಳೆ ಎಂಬ ಖ್ಯಾತಿ ಹೊಂದಿರುವ ಡಾ.ಉಷಾ ಹೆಗಡೆ ಅವರೊಂದಿಗೆ ಸಂವಾದ ನಡೆಸುತ್ತಾ ಡಾ.ದೀಪಾ ಮಲಿಕ್ ಮಾತನಾಡಿದರು.

ವ್ಹೀಲ್‌ಚೇರ್ ಅನ್ನು ನನ್ನ ದೇಹದ ಒಂದು ಅಂಗವೆಂದೇ ಭಾವಿಸಿದ್ದೇನೆ. ಇದು ಜಗತ್ತನ್ನು ಸುತ್ತಲು ಹಾಗೂ ಜೀವನ ಮುನ್ನಡೆಸಲು ಸಹಕಾರಿಯಾಗಿದೆ. ನಾನು ಮೊದಲ ಬಾರಿಗೆ ಗಾಲಿಕುರ್ಚಿಯಲ್ಲಿ ಹೊರ ಹೋಗಿ ತರಕಾರಿಗಳನ್ನು ತಂದಿದ್ದೆ. ಆಗ ನನಗೆ ಆತ್ಮವಿಶ್ವಾಸದ ಅರಿವಾಯಿತು. ವ್ಹೀಲ್ ಚೇರ್ ಇಲ್ಲದಿದ್ದರೆ ನಾನು ಸಂಚರಿಸಲು ಸಾಧ್ಯವಾಗುತ್ತಿರಲಿಲ್ಲ. ಇದರಿಂದ ನಾನು ಸ್ವಾತಂತ್ರ್ಯವಾಗಿ ಚಲಿಸುತ್ತಿದ್ದೇನೆ. ಕ್ರೀಡೆಯು ನನ್ನ ಉತ್ಸಾಹ, ಚಿಕಿತ್ಸೆ ಹಾಗೂ ನನ್ನ ರೂಪಾಂತರ ಎಂದು ಅವರು ಹೇಳಿದರು.

ನನ್ನ ಜೀವನದಲ್ಲಿ ಅಂಗವೈಕಲ್ಯವು ಹಲವು ಬಾರಿ ಕಾಡಿತು. ಹೀಗಾಗಿ ಅನೇಕ ವರ್ಷಗಳ ಕಾಲ ಆಸ್ಪತ್ರೆಯಲ್ಲಿ ಇರಬೇಕಾಯಿತು ಎಂದರು. ಅಲ್ಲದೇ ಇದೇ ವೇಳೆ 'ಬ್ರಿಂಗ್ ಇಟ್ ಆನ್' ಎಂಬ ತಮ್ಮ ಆತ್ಮಚರಿತ್ರೆಯ ಪುಸ್ತಕವನ್ನು ಸಹ ಅವರು ಸಭಿಕರಿಗೆ ಪರಿಚಯಿಸಿದರು.

ಬಹು ಸಂಗಾತಿ ಜೀವನ ಭಾವನಾತ್ಮಕ ಸತ್ಯದಲ್ಲಿ ನೆಲೆಗೊಂಡಿದೆ

ಲೇಖಕಿ ಅರುಂಧತಿ ಘೋಷ್



'ಲಿವಿಂಗ್ ವಿತ್ ಮೆನಿ ಲವ್ಸ್: ಪಾಲಿಯಮರಿ ಇನ್ ಇಂಡಿಯಾ' ಕುರಿತು ಲೇಖಕಿ ಆರುಂಧತಿ ಘೋಷ್ ಮಾತನಾಡಿದರು. ಲೇಖಕಿ ಅನಿಶಾ ಲಾಲ್ವಾನಿ ಉಪಸ್ಥಿತರಿದ್ದರು.

ಮೈಸೂರು, ಜು.6(ಎಂಕೆ)– ಪಾಲಿಯಮರಿ (ಬಹು ಸಂಗಾತಿ ಜೀವನ) ದೈಹಿಕ ಅನ್ಯೋನ್ಯತೆಯಲ್ಲಿ ಬೇರೂರಿಲ್ಲ. ಬದಲಿಗೆ ಭಾವನಾತ್ಮಕ ಸತ್ಯದಲ್ಲಿ ನೆಲೆಗೊಂಡಿದೆ ಎಂದು ಲೇಖಕಿ ಅರುಂಧತಿ ಘೋಷ್ ಹೇಳಿದರು.

ಮೈಸೂರು ಸಾಹಿತ್ಯ ಸಂಭ್ರಮದ 9ನೇ ಆವೃತ್ತಿಯಲ್ಲಿ 'ಲಿವಿಂಗ್ ವಿತ್ ಮೆನಿ ಲವ್ಸ್: ಪಾಲಿಯಮರಿ ಇನ್ ಇಂಡಿಯಾ' ಕುರಿತು ಮಾತನಾಡಿದ ಅವರು, ಮಿತಿಗಳನ್ನು ಮೀರಿ ಪ್ರೀತಿಸುವುದಕ್ಕೆ ನಾಚಿಕೆ ಮತ್ತು ಭಯಪಡುವ ಅಗತ್ಯವಿಲ್ಲ ಎಂದರು.

ಪಾಲಿಯಮರಿ ಜೀವನವು ವಿಮೋಚನೆಯನ್ನು ನೀಡುತ್ತಿದೆ. ಆದರೆ, ಆಗಾಗ ಮೌನ, ಕಳಂಕ ಮತ್ತು ತಪ್ಪು ತಿಳುವಳಿಕೆಯನ್ನು ಎದುರಿಸಬೇಕಾಗುತ್ತದೆ. ಒಬ್ಬರಿಗಿಂತ ಹೆಚ್ಚು ವ್ಯಕ್ತಿಗಳನ್ನು ಪ್ರೀತಿಸುವ ಸ್ವಾತಂತ್ರ್ಯ ಎಲ್ಲರಿಗೂ ಇದೆ. ಆದರೆ, ಅದು ದೈಹಿಕ ಅನ್ಯೋನ್ಯತೆಯಲ್ಲಿ ಬೇರೂರಿಲ್ಲ. ಬದಲಿಗೆ ಭಾವನಾತ್ಮಕ ಸತ್ಯದಲ್ಲಿ ನೆಲೆಗೊಂಡಿದೆ ಎಂದು ಹೇಳಿದರು.

ಏಕಪತ್ನಿತ್ವವು ಆನುವಂಶಿಕವಾಗಿ ಹರಡುತ್ತದೆ ಎಂದ ಅವರು, ಪ್ರೀತಿಸಲು ಇನ್ನೊಂದು ಮಾರ್ಗವಿದ್ದರೆ ಆ ಮಾರ್ಗದಲ್ಲಿ ಸಾಗುವುದು ತಪ್ಪಲ್ಲ. ಚೌಕಟ್ಟಿನ ಹೊರಗೆ ಸದ್ದಿಲ್ಲದೆ ವಾಸಿಸುವವರಿಗೆ ಪ್ರೀತಿ, ದುರ್ಬಲತೆ ಮತ್ತು ದೃಢೀಕರಣದ ವಿಭಿನ್ನ ಮಾರ್ಗಗಳನ್ನು ಆಯ್ಕೆ ಮಾಡಿದ ಜನರಿಗೆ ಧ್ವನಿ ನೀಡುವ ಗುರಿಯನ್ನು ಹೊಂದಿರುವುದಾಗಿ ತಿಳಿಸಿದರು.

ತಮ್ಮ ಅನುಭವಗಳಲ್ಲಿ ಒಂಟಿತನ ಅನುಭವಿಸುವ ಓದುಗರು ತಮ್ಮ ಮಾತುಗಳಲ್ಲಿ ಶಕ್ತಿ ಮತ್ತು ಒಗ್ಗಟ್ಟನ್ನು ಕಂಡುಕೊಳ್ಳುತ್ತಾರೆ ಎಂಬುದು ಅವರ ಆಶಯ ನನ್ನದಾಗಿದೆ ಎಂದರು. ಅನಿಶಾ ಲಾಲ್ವಾನಿ ಸಂವಾದ ನಡೆಸಿಕೊಟ್ಟರು.



ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಇವರು ದಿನಾಂಕ 27-06-2025 ಶುಕ್ರವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾದ ದಿನಾಂಕ 07-07-2025 ಸೋಮವಾರ ಬೆಳಗ್ಗೆ 11 ಗಂಟೆಗೆ ಉತ್ತರ ಕ್ರಿಯಾದಿ ಕಾರ್ಯವನ್ನು ಶ್ರೀ ಮುರುಳೇಶ್ವರ ದೇವಸ್ಥಾನದ ಪಕ್ಕ, ಶಾಂತಿಧಾಮ, ಕಾವೇರಿ ಸ್ಕೂಲ್ ಹತ್ತಿರ ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

ಶ್ರೀ ಚೌಡಪ್ಪ

ಜನನ: 11.06.1969, ನಿಧನ: 27.06.2025

ದುಃಖತಪ್ತರು : ಮೃತರ ಧರ್ಮಪತ್ನಿ, ಶ್ರೀಮತಿ ಶಶಿಕಲ, ಮಗ ನಿಖಿಲ್‌ಗೌಡ ಸಿ. ಹಾಗೂ ಲೇ॥ ಶ್ರೀ ಚಿಕ್ಕಲಿಂಗಿ ಮಾದೇಗೌಡ್ರು ಕುಟುಂಬವರ್ಗದವರು, ಕೆಜಿ.ಕೊಪ್ಪಲು



